


ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 21 ಸೋಮವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 95 | ಪುಟಗಳು: 10
ಜಾಹೀರಾತು: ad@mysurumithra.com, website: www.mysurumithra.com
ಸುದ್ದಿ, ಫೋಟೋಗೆ: news@mysurumithra.com

₹4



ಮೀನಾಕ್ಷಿಪುರ ಕೆಆರ್‌ಎಸ್ ಹಿನ್ನೀರಿನಲ್ಲಿ
ಮೂವರು ನರ್ಸಿಂಗ್ ವಿದ್ಯಾರ್ಥಿಗಳು ಜಲಸಮಾಧಿ

ಮೈಸೂರು, ಜು.20(ಎಂಟಿವೈ)–ಪ್ರವಾಸಕ್ಕೆಂದು ಬಂದಿದ್ದ ನರ್ಸಿಂಗ್ ಕಾಲೇಜಿನ ಮೂವರು ವಿದ್ಯಾರ್ಥಿಗಳು ಮೈಸೂರು ತಾಲೂಕಿನ ಮೀನಾಕ್ಷಿಪುರದ ಕೆಆರ್‌ಎಸ್ ಹಿನ್ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ಭಾನುವಾರ ಮಧ್ಯಾಹ್ನ ನಡೆದಿದೆ.

ಮಂಡ್ಯದ ಸರ್ಕಾರಿ ವೈದ್ಯಕೀಯ ಕಾಲೇಜಿನ (ಮಿಮ್ಸ್) ನರ್ಸಿಂಗ್ ವಿದ್ಯಾರ್ಥಿಗಳಾದ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಅನವಾಲು ಗ್ರಾಮದ ಪ್ರಶಾಂತ್(21), ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲೂಕಿನ ಸಂತೇಮರಹಳ್ಳಿಯ ಸಿದ್ದೇಶ್(22), ಕೊಪ್ಪಳ ಜಿಲ್ಲೆಯ ಕೃಷ್ಣ(21) ಹಿನ್ನೀರಿನಲ್ಲಿ ಮುಳುಗಿ ಮೃತಪಟ್ಟ ನರ್ಸಿಂಗ್ ವಿದ್ಯಾರ್ಥಿಗಳು.

ತುಂಬಿ ತುಳುಕುತ್ತಿರುವ ಕೆಆರ್‌ಎಸ್ ಜಲಾಶಯದ ಹಿನ್ನೀರಿನ ಪ್ರದೇಶಗಳು ಪ್ರವಾಸಿತಾಣವಾಗಿ ಮಾರ್ಪಟ್ಟಿದ್ದು, ಪ್ರತಿ ದಿನ ನೂರಾರು ಮಂದಿ ಪ್ರವಾಸಿಗರು ಹಿನ್ನೀರಿನ ಪ್ರದೇಶಕ್ಕೆ ಬಂದು ವಿಹರಿಸಿ ವಾಪಸ್ಸಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನರ್ಸಿಂಗ್ ಕಾಲೇಜಿನ 6 ವಿದ್ಯಾರ್ಥಿಗಳು 3 ಬೈಕ್‌ಗಳಲ್ಲಿ ಭಾನುವಾರ ಬೆಳಗ್ಗೆ ವಿದ್ಯಾರ್ಥಿನಿಲಯದಿಂದ ಮೈಸೂರು ತಾಲೂಕಿನ ಮೀನಾಕ್ಷಿಪುರದ ಕೆಆರ್‌ಎಸ್ ಹಿನ್ನೀರಿನ ಪ್ರದೇಶಕ್ಕೆ ಪಿಕ್‌ನಿಕ್ ಬಂದಿದ್ದರು. ಮಧ್ಯಾಹ್ನ 2 ಗಂಟೆ ಸುಮಾರಿನಲ್ಲಿ ಐವರು ವಿದ್ಯಾರ್ಥಿಗಳು ಈಜಲು ಮುಂದಾಗಿದ್ದರೆ, ಓರ್ವ ವಿದ್ಯಾರ್ಥಿ ದಡದಲ್ಲಿಯೇ ನಿಂತಿದ್ದ ಎನ್ನಲಾಗಿದೆ. ಕೆಲ ಸಮಯದ ▶ 6ನೇ ಪುಟಕ್ಕೆ


ಸಿದ್ದೇಶ್


ಪ್ರಶಾಂತ್


ಕೃಷ್ಣ

ಎಚ್ಚರಿಕೆ ವಹಿಸಲು ಇನ್ನೆಷ್ಟು ಜೀವಗಳು ಬಲಿಯಾಗಬೇಕು?

ಮೈಸೂರು: ಕೆಆರ್‌ಎಸ್ ಹಿನ್ನೀರಿನಲ್ಲಿ ನಿರಂತರವಾಗಿ ಅವಘಡ ಸಂಭವಿಸುತ್ತಿದ್ದರೂ ಪೊಲೀಸರು ನಿರ್ಲಕ್ಷ್ಯ ತಳೆದಿದ್ದಾರೆ. ಅವರು ಸೂಕ್ತ ಕ್ರಮ ವಹಿಸಿದ್ದರೆ ಇಂದು ಮೂವರು ನರ್ಸಿಂಗ್ ವಿದ್ಯಾರ್ಥಿಗಳ ಜೀವಬಲಿ ಆಗುತ್ತಿರಲಿಲ್ಲ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಅಕ್ರಮ ಚಟುವಟಿಕೆಯ ತಾಣ ಕೆಆರ್‌ಎಸ್ ಹಿನ್ನೀರು ಪ್ರದೇಶ' ಶೀರ್ಷಿಕೆಯಲ್ಲಿ 'ಮೈಸೂರು ಮಿತ್ರ' ಜು.7ರ ಸಂಚಿಕೆಯಲ್ಲಿ ಮೀನಾಕ್ಷಿಪುರ ಹಿನ್ನೀರು ಭಾಗದಲ್ಲಿ ಪ್ರವಾಸಿಗರ ಅತಿರೇಕದ ವರ್ತನೆ ಬಗ್ಗೆ ಸಚಿತ್ರ ವರದಿ ಪ್ರಕಟವಾಗಿತ್ತು. ಕೂಡಲೇ ಇಲವಾಲ ಠಾಣೆ ಪೊಲೀಸರು ಸ್ಥಳಕ್ಕೆ ದೌಡಾಯಿಸಿ, ಕೆಲವರನ್ನು ವಶಕ್ಕೆ ಪಡೆದಿದ್ದರು. ಅದೆಲ್ಲಾ ನಾಮಕಾವಸ್ಥೆಯ ಕ್ರಮ ಎಂಬುದಕ್ಕೆ ಇಂದಿನ ದುರಂತವೇ ಸಾಕ್ಷಿಯಾಗಿದೆ.

ಮೈಸೂರು ಮಾತ್ರವಲ್ಲ ಸುತ್ತಮುತ್ತಲಿನ ಜಿಲ್ಲೆಗಳಿಂದಲೂ ನಿತ್ಯ ಮೀನಾಕ್ಷಿಪುರಕ್ಕೆ ಪ್ರವಾಸಿಗರು ಆಗಮಿಸುತ್ತಾರೆ. ಅದರಲ್ಲೂ ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ ಯುವಕ–ಯುವತಿಯರೇ ಹೆಚ್ಚಾಗಿ ಬರುತ್ತಾರೆ. ವಾರಾಂತ್ಯ ಹಾಗೂ ರಜಾ ದಿನಗಳಲ್ಲಂತೂ ಪ್ರವಾಸಿಗರು ಕಿಕ್ಕಿರಿದಿರುತ್ತಾರೆ. ಎಲ್ಲೆಂದರಲ್ಲಿ ಮದ್ಯ ಸೇವನೆ, ಧೂಮಪಾನ ಮಾಡುತ್ತಾ ಮೋಜುಮಸ್ತಿಯಲ್ಲಿ ಮುಳುಗಿರುತ್ತಾರೆ. ಕೆಲವರು ▶ 6ನೇ ಪುಟಕ್ಕೆ

ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ
ಕಬಿನಿಗೆ ಬಾಗಿನ ಸಮರ್ಪಣೆ

ಹೆಚ್.ಡಿ.ಕೋಟೆ, ಜು.20(ಎಂಟಿವೈ, ಮಂಜು)–ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲೂಕಿನ ಬೀಚನಹಳ್ಳಿಯಲ್ಲಿರುವ ಕಬಿನಿ ಜಲಾಶಯಕ್ಕೆ ಭಾನುವಾರ ಬೆಳಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಶಾಸ್ತ್ರೋಕ್ತವಾಗಿ ಬಾಗಿನ ಅರ್ಪಿಸಿ ಪೂಜೆ ಸಲ್ಲಿಸಿದರು.

ಕಬಿನಿ ಜಲಾಶಯ ಭರ್ತಿಯಾದ ಹಿನ್ನೆಲೆಯಲ್ಲಿ ಭಾನುವಾರ ಬೆಳಗ್ಗೆ 11.40ಕ್ಕೆ ಕನ್ಯಾ ಲಗ್ನ ಅಭಿಜಿನ್ ಮುಹೂರ್ತದಲ್ಲಿ ಕಪಿಲಾ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರು ಸಂಪ್ರದಾಯದಂತೆ ಗಂಗೆ ಪೂಜೆ ನೆರವೇರಿಸಿ, ಬಾಗಿನ ಅರ್ಪಿಸಿದರು.

ಈ ಸಂದರ್ಭದಲ್ಲಿ ಶಾಸಕರಾದ ಅನಿಲ್ ಚಿಕ್ಕಮಾದು, ದರ್ಶನ್ ಆರ್.ಧ್ರುವನಾರಾಯಣ್, ಕೆ.ಹರೀಶ್‌ಗೌಡ, ಎ.ಆರ್.ಕೃಷ್ಣಮೂರ್ತಿ, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಸಚಿವ ಕೋಟೆ ಎಂ. ಶಿವಣ್ಣ, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿ, ಐಜಿಪಿ ಬೋರಲಿಂಗಯ್ಯ, ಎಸ್‌ಪಿ ವಿಷ್ಣುವರ್ಧನ್, ತಹಸೀಲ್ದಾರ್ ಶ್ರೀನಿವಾಸ್, ಜಲ ಸಂಪನ್ಮೂಲ ಕಾರ್ಯದರ್ಶಿ ಕುಲಕರ್ಣಿ, ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಹೇಶ್, ಮುಖ್ಯ ಅಭಿಯಂತರರಾದ ರಘುರಾಮ್, ಕಾರ್ಯಪಾಲಕ ಅಭಿಯಂತರರಾದ ಉಷಾ, ಎಇಇ ಗಣೇಶ್, ಇಂಜಿನಿಯರ್‌ಗಳಾದ ವಿಶ್ವನಾಥ್, ದೀಕ್ಷಿತ್, ತಾಜ್, ನಟಶೇಖರ್, ತಾಲೂಕು ಆರೋಗ್ಯ ಅಧಿಕಾರಿ ಡಾ. ರವಿಕುಮಾರ್, ಇಓಗಳಾದ ಧರಣೇಶ್ ಮುಂತಾದವರು ಹಾಜರಿದ್ದರು.

ಐರಾವತ ಬಸ್‌ನಲ್ಲಿ ಬಂದ ಸಿಎಂ, ಡಿಸಿಎಂ: ಮೈಸೂರಿನಲ್ಲಿ ವಾಸ್ತವ್ಯ ಹೂಡಿದ್ದ ಸಿಎಂ ಸಿದ್ದರಾಮಯ್ಯ ಅವರು, ಇಂದು ▶ 6ನೇ ಪುಟಕ್ಕೆ


ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಕಬಿನಿ ಜಲಾಶಯಕ್ಕೆ ಭಾನುವಾರ ಬಾಗಿನ ಅರ್ಪಿಸಿದರು.

ಡಿಸಿಎಂ ಡಿಕೆಶಿಗೆ ಅವಮಾನ ಮಾಡಿಲ್ಲ; ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ

ಮೈಸೂರು, ಜು.20(ಬಿಎಲ್‌ಯು)– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಿನ್ನೆ ನಡೆದ ಸರ್ಕಾರದ ಸಾಧನಾ ಸಮಾವೇಶದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ನಾನು ಅವಮಾನ ಮಾಡಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಕಬಿನಿ ಜಲಾಶಯದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ನನ್ನ ಗಮನಕ್ಕೆ ತಂದು ಡಿ.ಕೆ.ಶಿವಕುಮಾರ್ ಅವರು ಸಭೆಯಿಂದ ಅರ್ಧಕ್ಕೆ ನಿರ್ಗಮಿಸಿದ್ದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿರುವವರನ್ನು ಸ್ವಾಗತಿಸುವುದು ಪರಿಪಾಟ. ಆದರೆ ಡಿ.ಕೆ.ಶಿವಕುಮಾರ್ ಅಲ್ಲಿ ಹಾಜರಿರಲಿಲ್ಲ. ಈ ಕಾರಣದಿಂದ ನಾನು ಭಾಷಣ ಮಾಡುವ ಸಂದರ್ಭದಲ್ಲಿ ಅವರ ಹೆಸರು ಉಲ್ಲೇಖಿಸಲಿಲ್ಲ. ವಸ್ತುಸ್ಥಿತಿ ಹೀಗಿರುವಾಗ ವೇದಿಕೆ ಮೇಲೆ ಇಲ್ಲದವರನ್ನು ಸ್ವಾಗತ ಮಾಡುವುದು ಎಷ್ಟು ಸರಿ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಬಿಜೆಪಿಯವರು ಮೊಸರಲ್ಲಿ ಕಲ್ಲು ಹುಡುಕುವ ಕೆಲಸ ಮಾಡುತ್ತಿದ್ದು, ನಮ್ಮಿಬ್ಬರ ನಡುವೆ ಒಡಕು ಮೂಡಿಸಿ ರಾಜಕೀಯ ಲಾಭ ಪಡೆಯುವ ಭ್ರಮೆಯಲ್ಲಿದ್ದಾರೆ. ಆದರೆ ಅವರು ಭ್ರಮೆಯಲ್ಲೆ ಇರಲಿದ್ದು, ಇದರಿಂದ ರಾಜಕೀಯವಾಗಿ ಅವರಿಗೆ ಯಾವುದೇ ಲಾಭ ಪಡೆಯಲು ಸಾಧ್ಯವಿಲ್ಲ ಎಂದು ತಿರುಗೇಟು ನೀಡಿದರು.

ಹನಿಟ್ರ್ಯಾಪ್ ಮಾಡಿದ್ದ ಯುವತಿ ಸೇರಿ ಇಬ್ಬರ ಬಂಧನ

ಮೈಸೂರು, ಜು.20(ಬಿಎಲ್‌ಯು)– ಬಟ್ಟೆ ಅಂಗಡಿ ಮಾಲೀಕನನ್ನು ಹನಿಟ್ರ್ಯಾಪ್ ಬಲೆಗೆ ಬೀಳಿಸಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಯುವತಿ ಸೇರಿದಂತೆ ಇಬ್ಬರನ್ನು ಬೈಲುಕುಪ್ಪೆ ಪೊಲೀಸರು ಬಂಧಿಸಿದ್ದಾರೆ. ಹನಿಟ್ರ್ಯಾಪ್ ಮಾಡಿದ್ದ ಕವನ ಮತ್ತು ಸೈಫ್ ಬಂಧಿತ ಆರೋಪಿಗಳಾಗಿದ್ದಾರೆ.

ಪಿರಿಯಾಪಟ್ಟಣ ತಾಲೂಕು ಕಂಪಲಾಪುರದ ಬಟ್ಟೆ ಅಂಗಡಿ ಮಾಲೀಕ ದಿನೇಶ್ ಕುಮಾರ್ ಅವರನ್ನು ಹನಿಟ್ರ್ಯಾಪ್ ಬಲೆಗೆ ಬೀಳಿಸಿದ್ದ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯ ಪೇದೆ ಶಿವಣ್ಣ, ಸೈಫ್ ಮತ್ತು ಕವನ ಹಣಕ್ಕಾಗಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದರು. ಈ ವೇಳೆ ಆರೋಪಿಗಳಿಂದ ಥಳಿತಕ್ಕೊಳಕ್ಕಾಗಿದ್ದ ದಿನೇಶ್‌ಕುಮಾರ್ ತಾನಿರುವ ಜಾಗಕ್ಕೆ ಹತ್ತು ಲಕ್ಷ ಹಣ ತರುವಂತೆ ಸಹೋದರನಿಗೆ ಹೇಳಿದ್ದರು. ಈ ವೇಳೆ ಅನುಮಾನಗೊಂಡ ದಿನೇಶ್ ಕುಮಾರ್ ಸಹೋದರ ಬೈಲುಕುಪ್ಪೆ ಪೊಲೀಸರಿಗೆ ದೂರು ನೀಡಿದ್ದರು.

ಈ ಸಂದರ್ಭದಲ್ಲಿ ಶರಣಾಗುವಂತೆ ದಿನೇಶ್‌ಕುಮಾರ್ ಫೋನ್ ಮೂಲಕ ಪೊಲೀಸರು ಆರೋಪಿಗಳಿಗೆ ಎಚ್ಚರಿಕೆ ನೀಡಿದ್ದರು. ತರುವಾಯ ಪೊಲೀಸ್ ಪೇದೆ ಶಿವಣ್ಣ ಬಟ್ಟೆ ಅಂಗಡಿ ಮಾಲೀಕನಾದ ದಿನೇಶ್‌ಕುಮಾರ್‌ನನ್ನು ಬೈಲುಕುಪ್ಪೆ ಬಳಿ ಬಿಟ್ಟು ಪರಾರಿಯಾಗಿ, ನಂತರ ಆತ ಪೊಲೀಸರಿಗೆ ಶರಣಾಗಿದ್ದ.

ಆದರೆ ಹನಿಟ್ರ್ಯಾಪ್ ತಂಡದಲ್ಲಿದ್ದ ಕವನ ಮತ್ತು ಸೈಫ್ ಮಾತ್ರ ಪೊಲೀಸರ ಬಲೆಗೆ ಬೀಳದೆ ಚಳ್ಳೆ ಹಣ್ಣು ತಿನ್ನಿಸುತ್ತಿದ್ದರು. ಈ ಬಗ್ಗೆ ಚುರುಕಿನ ಕಾರ್ಯಾಚರಣೆ ನಡೆಸಿದ ಪೊಲೀಸರು ಕಣ್ಣೂರಿನ ಲಾಡ್ಜ್‌ನಲ್ಲಿ ಕವನ ಮತ್ತು ಸೈಫ್‌ನನ್ನು ಬಂಧಿಸಿದ್ದಾರೆ.

ಧರ್ಮಸ್ಥಳ ಪ್ರಕರಣ: ತನಿಖೆಗೆ ನಾಲ್ವರು ಐಪಿಎಸ್ ಅಧಿಕಾರಿಗಳನ್ನೊಳಗೊಂಡ ಎಸ್‌ಐಟಿ ರಚನೆ

ಬೆಂಗಳೂರು, ಜು.20– ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಹಿಂದೆ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಪ್ರಕರಣಗಳ ಸಮಗ್ರ ತನಿಖೆಗೆ ರಾಜ್ಯ ಸರ್ಕಾರವು ಆಂತರಿಕ ಭದ್ರತಾ ವಿಭಾಗದ ಪೊಲೀಸ್ ಮಹಾ ನಿರ್ದೇಶಕ ಪ್ರಣವ ಮೊಹಾಂತಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಿದೆ.

ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದಂತೆ ಸಮಗ್ರ ತನಿಖೆ ನಡೆಸಬೇಕೆಂದು ಆಗ್ರಹಿಸಿ ರಾಜ್ಯ ಮಹಿಳಾ ಆಯೋಗವು ಜು.14ರಂದು ಸರ್ಕಾರಕ್ಕೆ ಪತ್ರ ಬರೆದಿತ್ತು. ಅಲ್ಲದೆ ವ್ಯಕ್ತಿಯೊಬ್ಬರು ನ್ಯಾಯಾಲಯದಲ್ಲಿ ದಾಖಲಿಸಿದ್ದ ಹೇಳಿಕೆಯ ಆಧಾರದಲ್ಲಿ ಆರೋಪಗಳ ಕುರಿತು ಸಮಗ್ರ ತನಿಖೆ ನಡೆಸಬೇಕು ಎಂದು ವಕೀಲರು, ಸಾಮಾಜಿಕ ಕಾರ್ಯಕರ್ತರು ಒತ್ತಾಯಿಸಿದ್ದರು.


ಪ್ರಣವ ಮೊಹಾಂತಿ

ಈ ಸಂಗತಿಗಳು ಸಾರ್ವಜನಿಕ ವಲಯದಲ್ಲಿ ವ್ಯಾಪಕ ಚರ್ಚೆಯಾಗುತ್ತಿದ್ದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೃಹ ಸಚಿವ ಡಾ.ಜಿ. ಪರಮೇಶ್ವರ್‌ರವರ ಜೊತೆ ಸಮಾಲೋಚನೆ ನಡೆಸಿ, ಆರೋಪಗಳ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಲು ವಿಶೇಷ ತಂಡ ರಚಿಸುವ ಬಗ್ಗೆಯೂ ಯೋಚಿಸಿದ್ದರು.

ಇದೀಗ ವಿಶೇಷ ತನಿಖಾ ತಂಡ ರಚಿಸಿ ಗೃಹ ಇಲಾಖೆಯು ಆದೇಶ ಹೊರಡಿಸಿದೆ. ಆರೋಪ ಕೇಳಿಬಂದ ಪ್ರಕರಣಗಳೂ ಸೇರಿದಂತೆ, ರಾಜ್ಯದ ಇತರೆ ಪೊಲೀಸ್ ಠಾಣೆಗಳಲ್ಲಿ ▶ 6ನೇ ಪುಟಕ್ಕೆ

ಶ್ರೀ ಕ್ಷೇತ್ರ ಧರ್ಮಸ್ಥಳ ಸ್ವಾಗತ

ರಾಜ್ಯ ಸರ್ಕಾರ ಧರ್ಮಸ್ಥಳದ ಮೇಲೆ ಕೇಳಿಬಂದ ಆರೋಪ, ವಿವಾದಗಳ ಸತ್ಯಾಸತ್ಯತೆ ತಿಳಿಯಲು ಸರ್ಕಾರ ಎಸ್‌ಐಟಿ ತನಿಖೆಗೆ ಆದೇಶ ನೀಡಿದ ನಿರ್ಧಾರವನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಸ್ವಾಗತಿಸಿದೆ. ಈ ಪ್ರಕರಣ ಹಾಗೂ ಎಸ್‌ಐಟಿ ತನಿಖೆ ಕುರಿತು ಧರ್ಮಸ್ಥಳ ಕ್ಷೇತ್ರದ ವಕ್ತಾರ ಕೆ.ಪಾರ್ಶ್ವನಾಥ್ ಜೈನ್ ಪತ್ರಿಕಾ ಹೇಳಿಕೆ ನೀಡಿದ್ದಾರೆ. ಧರ್ಮಸ್ಥಳ ಗ್ರಾಮದ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ 'ಹಲವಾರು ಶವಗಳನ್ನು ಹೂತಿದ್ದೆ' ಎಂಬ ದೂರು ಪ್ರಕರಣವು ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಹಲವಾರು ತರ್ಕಗಳು, ಊಹಾಪೋಹಗಳು ಹಾಗೂ ಗೊಂದಲಗಳನ್ನು ಹುಟ್ಟುಹಾಕಿದೆ. ಈ ಪ್ರಕರಣವನ್ನು ವಿಶೇಷ ತನಿಖಾ ತಂಡ (ಎಸ್.ಐ.ಟಿ.)ಗೆ ರಾಜ್ಯ ಸರ್ಕಾರ ಹಸ್ತಾಂತರಿಸಿದೆ. ಸರ್ಕಾರದ ಈ ನಿಲುವು ಉತ್ತಮವಾಗಿದೆ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಸ್ವಾಗತಿಸಿದೆ.

ಸಮಾಜದ ನೈತಿಕತೆ ಹಾಗೂ ಶ್ರದ್ಧೆಗೆ ನಿಲುಕುವ ಬಲವಾದ ಆಧಾರವೆಂದರೆ 'ಸತ್ಯ'. ಹೀಗಾಗಿ ಈ ಪ್ರಕರಣದಲ್ಲಿ ಎಸ್‌ಐಟಿ ತನಿಖಾ ತಂಡ ಸತ್ಯಾಂಶವನ್ನು ಅತಿ ಶೀಘ್ರವಾಗಿ ಪ್ರಾಮಾಣಿಕ ತನಿಖೆ ನಡೆಸಿ ಹೊರತರಬೇಕಿದೆ. ಈ ಸತ್ಯವನ್ನು ಸಾರ್ವಜನಿಕರ ಮುಂದೆ ಬಹಿರಂಗಪಡಿಸಬೇಕು ▶ 6ನೇ ಪುಟಕ್ಕೆ

ಜಿಎಸ್‌ಟಿ ನೋಟಿಸ್: ಸಣ್ಣ ವ್ಯಾಪಾರಿಗಳ ನೆರವಿಗೆ ನಿಂತ ಬಿಜೆಪಿ, ಸಹಾಯವಾಣಿ ಆರಂಭ



ಬೆಂಗಳೂರು, ಜು.20– ಜಿಎಸ್‌ಟಿ ನೋಂದಾಯಿಸದೆ ಯುಪಿಐ ಮೂಲಕ 40 ಲಕ್ಷ ರೂ. ಗಿಂತ ಹೆಚ್ಚು ಹಣ ವರ್ಗಾವಣೆ ಮಾಡಿರುವ ಬೆಂಗಳೂರಿನ ಸಣ್ಣ ವ್ಯಾಪಾರಿಗಳಿಗೆ ವಾಣಿಜ್ಯ ತೆರಿಗೆ ಇಲಾಖೆ ನೋಟಿಸ್ ನೀಡಿದ್ದು, ದಂಡ ಪಾವತಿಸುವಂತೆ ಸೂಚಿಸಿದೆ. ಈ ವಿಚಾರ ಇದೀಗ ರಾಜಕೀಯ ತಿರುವು ಪಡೆದಿದ್ದು, ನೋಟಿಸ್ ಪಡೆದಿರುವ ಸಣ್ಣ ವ್ಯಾಪಾರಿಗಳ ನೆರವಿಗೆ ಬಿಜೆಪಿ ಮುಂದಾಗಿದೆ.

ಬೇಕರಿ, ಕಾಂಡಿಮೆಂಟ್ಸ್, ಕಾಫಿ–ಟೀ ಅಂಗಡಿಗಳು, ಹೂವಿನ ವ್ಯಾಪಾರಿಗಳಿಗೆ ನೋಟಿಸ್ ಜಾರಿ ಮಾಡಿರುವುದರಿಂದ ವರ್ತಕರಲ್ಲಿ ಭಯ ಹಾಗೂ ಗೊಂದಲದ ವಾತಾವರಣ ಸೃಷ್ಟಿಯಾಗಿದ್ದು, ನಿಮ್ಮೊಂದಿಗೆ ನಾವಿದ್ದೇವೆ ಎಂದು ರಾಜ್ಯ ಬಿಜೆಪಿ ತಿಳಿಸಿದೆ. ಇದೇ ವೇಳೆ ಸಣ್ಣ ವ್ಯಾಪಾರಸ್ಥರ ಹಿತರಕ್ಷಣೆಗಾಗಿ ಸಹಾಯವಾಣಿ (88842 45123) ಸಂಖ್ಯೆಯನ್ನು ಆರಂಭಿಸಿದೆ

ಶನಿವಾರ ಬಿಜೆಪಿ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಜಿಎಸ್‌ಟಿ ನೋಟಿಸ್ ವಿಚಾರದಲ್ಲಿ ಗೊಂದಲ ಶುರುವಾಗಿದ್ದು, ಬಡ ವ್ಯಾಪಾರಿಗಳಲ್ಲಿ ಆತಂಕದ ಛಾಯೆ ಮೂಡಿದೆ. ಇದರ ಪರಿಹಾರೋಪಾಯಗಳನ್ನು ಸರಕಾರ ಮಾಡಬೇಕಿತ್ತು. ಆದರೆ, ರಾಜ್ಯ ಸರಕಾರ ಎಲ್ಲಿಯೂ ನಿಜವಾದ ತೆರಿಗೆ ಮೊತ್ತ ಯಾವುದು ಮತ್ತು ವಿಧಿಸಲಾಗದ ತೆರಿಗೆ ಮೊತ್ತ ಯಾವುದು ಎಂದು ಕೂಲಂಕಷ ಚರ್ಚೆ ಮಾಡಿಲ್ಲ ಮತ್ತು ವ್ಯಾಪಾರಿಗಳಿಗೆ ಮಾಹಿತಿ ನೀಡಿಲ್ಲ ಎಂದು ಆರೋಪಿಸಿದರು.

ಕೇಂದ್ರದ ಮೂಲಕ ರಾಜ್ಯ ಸರಕಾರಕ್ಕೆ ಇರುವ ಮಾಹಿತಿಯ ಪ್ರಕಾರ ವಾರ್ಷಿಕ ವಹಿವಾಟು 40 ಲಕ್ಷ ರೂ. ಮೀರಿದರೆ ಅವರು ಜಿಎಸ್‌ಟಿಯಡಿ ನೋಂದಾಯಿಸಿಕೊಳ್ಳಬೇಕು. ಜಿಎಸ್‌ಟಿ ವಾರ್ಷಿಕ ವಹಿವಾಟು 20 ಲಕ್ಷ ರೂ. ಮೀರಿರುವ ಸೇವಾ ಪೂರೈಕೆದಾರರು ತೆರಿಗೆ ▶ 6ನೇ ಪುಟಕ್ಕೆ

ಜಿಎಸ್‌ಟಿ ನೋಟಿಸ್‌ಗೆ ಕೇಂದ್ರ ಕಾರಣ; ಸಿಎಂ ಸಿದ್ದರಾಮಯ್ಯ ಆರೋಪ

ಮೈಸೂರು, ಜು.20(ಬಿಎಲ್‌ಯು)– ಡಿಜಿಟಲ್ ಪೇಮೆಂಟ್ ಮೂಲಕ ವ್ಯಾಪಾರ ಮಾಡಿದ ಸಣ್ಣ ವ್ಯಾಪಾರಿಗಳಿಗೆ ತೆರಿಗೆ ವಿಧಿಸಿ ನೋಟಿಸ್ ನೀಡಿರುವುದಕ್ಕೆ ಕೇಂದ್ರ ಸರ್ಕಾರ ಕಾರಣವೇ ಹೊರತು ರಾಜ್ಯ ಸರ್ಕಾರವಲ್ಲ ಎಂದು ಹಣಕಾಸು ಖಾತೆ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಜಿಎಸ್‌ಟಿಯನ್ನು ಕೇಂದ್ರ ಸರ್ಕಾರ ಮಾಡಿದೆ. ಜಿಎಸ್‌ಟಿ ಕೌನ್ಸಿಲ್ ಕೇಂದ್ರ ಸರ್ಕಾರದ ಅಧೀನದಲ್ಲಿದೆ. ಇದಕ್ಕೆ ರಾಜ್ಯ ಸರ್ಕಾರ ಜವಾಬ್ದಾರಿಯಲ್ಲ. ಆದರೂ ರಾಜ್ಯದ ಸಣ್ಣ ವ್ಯಾಪಾರಿಗಳ ಹಿತದೃಷ್ಟಿಯಿಂದ ಈ ವಿಚಾರದ ಬಗ್ಗೆ ಕೇಂದ್ರ ಸರ್ಕಾರದ ಹಣಕಾಸು ಇಲಾಖೆಯವರೊಡನೆ ಮಾತನಾಡುತ್ತೇನೆ. ಅಲ್ಲದೆ ರಾಜ್ಯ ಸರ್ಕಾರದ ವಾಣಿಜ್ಯ ಇಲಾಖೆಯವರೊಡನೆ ಕೂಡ ಚರ್ಚೆ ನಡೆಸಿ ಸೂಕ್ತ ತೀರ್ಮಾನ ಮಾಡಲಾಗುವುದು ಎಂದು ಆಶ್ವಾಸನೆ ನೀಡಿದರು.

ಇಂದಿನಿಂದ ಸಂಸತ್ ಮುಂಗಾರು ಅಧಿವೇಶನ


ಸರ್ವಪಕ್ಷ ಸಭೆಯಲ್ಲಿ ಸುಗಮ ಕಲಾಪಕ್ಕೆ ಕೇಂದ್ರ ಸಚಿವ ಜೆ.ಪಿ.ನಡ್ಡಾ ಮನವಿ

ನವದೆಹಲಿ, ಜು.20– ನಾಳೆಯಿಂದ (ಸೋಮವಾರ) ಆರಂಭವಾಗಲಿರುವ ಸಂಸತ್‌ನ ಮುಂಗಾರು ಅಧಿವೇಶನಕ್ಕೂ ಮುನ್ನ ಕೇಂದ್ರ ಸರ್ಕಾರ ಇಂದು (ಭಾನುವಾರ) ಕರೆದಿದ್ದ ಸರ್ವಪಕ್ಷ ಸಭೆಯಲ್ಲಿ ಬಿಹಾರದ ಮತದಾರರ ಪಟ್ಟಿ ಪರಿಷ್ಕರಣೆ, ಪಹಲ್ಗಾಮ್ ಉಗ್ರರ ದಾಳಿ ಮತ್ತು ಭಾರತ–ಪಾಕ್ ನಡುವಿನ ಕದನ ವಿರಾಮಕ್ಕೆ ಸಂಬಂಧಿಸಿದಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆಗಳು ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ವಿಪಕ್ಷಗಳು ಧ್ವನಿ ಎತ್ತಿವೆ.

ಕೇಂದ್ರ ಸಚಿವ ಜೆ.ಪಿ.ನಡ್ಡಾ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವಿವಿಧ ರಾಜಕೀಯ ಪಕ್ಷಗಳ ನಾಯಕರು ಭಾಗವಹಿಸಿದ್ದರು. ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಅರ್ಜುನ್ ರಾಮ್ ಮೇಘವಾಲ್ ಕೂಡ ಸಭೆಯಲ್ಲಿ ಉಪಸ್ಥಿತರಿದ್ದರು. ಸುಗಮವಾಗಿ ಕಲಾಪ ನಡೆಯಲು ಸಹಕಾರ ನೀಡಬೇಕು ಎಂದು ಜೆ.ಪಿ.ನಡ್ಡಾ ಅವರು ವಿಪಕ್ಷ ನಾಯಕರಲ್ಲಿ ಮನವಿ ಮಾಡಿದ್ದಾರೆ.

ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಕಾಂಗ್ರೆಸ್ ನಾಯಕ ಗೌರವ್ ಗೊಗೊಯ್, ಭಾರತ ಮತ್ತು ಪಾಕ್ ನಡುವಿನ ಕದನ ವಿರಾಮಕ್ಕೆ ಸಂಬಂಧಿಸಿದ ಟ್ರಂಪ್ ಅವರ ಹೇಳಿಕೆಗಳು, ಪಹಲ್ಗಾಮ್ ದಾಳಿಗೆ ಕಾರಣವಾದ ಲೋಪಗಳು, ಬಿಹಾರದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಕುರಿತು ಪ್ರಧಾನಿ ಮೋದಿ ಅವರು ಉತ್ತರಿಸಬೇಕು ಎಂದು ಆಗ್ರಹಿಸಿರುವುದಾಗಿ ತಿಳಿಸಿದ್ದಾರೆ.

ನಮ್ಮ ಪಕ್ಷ ಎತ್ತಿರುವ ಪ್ರಮುಖ ವಿಷಯಗಳ ಕುರಿತು ಸಂಸತ್ತಿನಲ್ಲಿ ಹೇಳಿಕೆ ನೀಡುವುದು ಪ್ರಧಾನಿ ಮೋದಿಯವರ ಕರ್ತವ್ಯ. ಬಿಹಾರದ ಎಸ್‌ಐಆರ್ ಚುನಾವಣಾ ಹಗರಣ, ಭಾರತ ಮತ್ತು ಪಾಕಿಸ್ತಾನದ ನಡುವೆ ಕದನ ವಿರಾಮಕ್ಕೆ ಮಧ್ಯವರ್ತಿಯಾಗಿ ಟ್ರಂಪ್ ಅವರ ಹೇಳಿಕೆಗಳ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಲಾಯಿತು ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ಸಂಜಯ್ ಸಿಂಗ್ ತಿಳಿಸಿದ್ದಾರೆ.



ರಾಜ್ಯಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆ ವಿಫಲವಾಗುತ್ತಿರುವುದರಿಂದ ಕೇಂದ್ರ ಸರ್ಕಾರ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಸಂಸತ್‌ನಲ್ಲಿ ಇದರ ಬಗ್ಗೆ ಚರ್ಚಿಸಬೇಕು. ವಿಶೇಷವಾಗಿ ಒಡಿಶಾದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಬಿಜೆಪಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ' ಎಂದು ದೂರಿರುವ ಬಿಜೆಡಿಯ ಸಸ್ಮಿತ್ ಪಾತ್ರ, ಇತ್ತೀಚಿನ ಕಾಲೇಜು ವಿದ್ಯಾರ್ಥಿನಿಯ ಆತ್ಮಹತ್ಯೆ ಪ್ರಕರಣ ಮತ್ತು 15 ವರ್ಷದ ಬಾಲಕನಿಗೆ ಪುರುಷರ ಗುಂಪೊಂದು ಬೆಂಕಿ ಹಚ್ಚಿದ ಘಟನೆಯನ್ನು ಉಲ್ಲೇಖಿಸುತ್ತಿದ್ದಾರೆ.

ಸಭೆಯಲ್ಲಿ ಕಾಂಗ್ರೆಸ್‌ನ ಗೌರವ್ ಗೊಗೊಯ್ ಮತ್ತು ಜೈರಾಮ್ ರಮೇಶ್, ಎನ್‌ಸಿಪಿ ▶ 6ನೇ ಪುಟಕ್ಕೆ

ಹೊಸ ಆದಾಯ ತೆರಿಗೆ ಮಸೂದೆ: ಇಂದು ಲೋಕಸಭೆಯಲ್ಲಿ ಸಂಸದೀಯ ಸಮಿತಿ ವರದಿ ಮಂಡನೆ

ನವದೆಹಲಿ, ಜು.20– ಆರು ದಶಕಗಳಷ್ಟು ಹಳೆಯದಾದ ಆದಾಯ ತೆರಿಗೆ ಕಾಯ್ದೆಯನ್ನು ಬದಲಿಸುವ ಹೊಸ ಆದಾಯ ತೆರಿಗೆ ಮಸೂದೆ 2025 ಅನ್ನು ಪರಿಶೀಲಿಸಲು ರಚಿಸಲಾದ ಸಂಸದೀಯ ಸಮಿತಿಯ ವರದಿಯನ್ನು ನಾಳೆ (ಸೋಮವಾರ) ಲೋಕಸಭೆಯಲ್ಲಿ ಮಂಡಿಸಲು ನಿರ್ಧರಿಸಲಾಗಿದೆ.

ಬಿಜೆಪಿ ನಾಯಕ ಬೈಜಯಂತ್ ಪಾಂಡಾ ಅಧ್ಯಕ್ಷತೆಯಲ್ಲಿ 31 ಸದಸ್ಯರ ಆಯ್ಕೆ ಸಮಿತಿಯನ್ನು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ನೇಮಿಸಿದ್ದಾರೆ, ಹೊಸ ಆದಾಯ ತೆರಿಗೆ ಮಸೂದೆ 2025 ಅನ್ನು ಪರಿಶೀಲಿಸಲು, ಇದನ್ನು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಫೆ.13 ರಂದು ಲೋಕಸಭೆಯಲ್ಲಿ ಮಂಡಿಸಿದ್ದರು.

ಸಮಿತಿಯು 285 ಸಲಹೆಗಳನ್ನು ನೀಡಿದೆ, ಜುಲೈ 16 ರಂದು ನಡೆದ ಸಭೆಯಲ್ಲಿ ಹೊಸ ಐಟಿ ಮಸೂದೆ 2025 ರ ವರದಿಯನ್ನು ಅಂಗೀಕರಿಸಿದೆ, ಇದನ್ನು ಈಗ ಮುಂದಿನ ಕ್ರಮಕ್ಕಾಗಿ ಸದನದಲ್ಲಿ ಮಂಡಿಸಲಾಗುವುದು.

1961 ರ ಆದಾಯ ತೆರಿಗೆ ಕಾಯ್ದೆಯ ಅರ್ಧದಷ್ಟು ಗಾತ್ರದ ಸರಳೀಕೃತ ಆದಾಯ ತೆರಿಗೆ ಮಸೂದೆಯು ಮೊಕದ್ದಮೆಯ ವ್ಯಾಪ್ತಿಯನ್ನು ಕಡಿಮೆ ಮಾಡುವ ಮೂಲಕ ಮತ್ತು ಹೊಸ ವ್ಯಾಖ್ಯಾನವನ್ನು ನೀಡುವ ಮೂಲಕ ತೆರಿಗೆ ಖಚಿತತೆಯನ್ನು ಸಾಧಿಸಲು ಪ್ರಯತ್ನಿಸುತ್ತದೆ.

ಲೋಕಸಭೆಯಲ್ಲಿ ಪರಿಚಯಿಸಲಾದ ಹೊಸ ಮಸೂದೆಯು 2.6 ಲಕ್ಷ ಪದಗಳ ಸಂಖ್ಯೆಯನ್ನು ಹೊಂದಿದ್ದು, ಇದು ಐಟಿ ಕಾಯ್ದೆಯಲ್ಲಿ 5.12 ಲಕ್ಷಕ್ಕಿಂತ ಕಡಿಮೆಯಾಗಿದೆ. ಅಸ್ತಿತ್ವದಲ್ಲಿರುವ ಕಾನೂನಿನಲ್ಲಿ 819 ಪರಿಣಾಮಕಾರಿ ವಿಭಾಗಗಳಿಗೆ ವಿರುದ್ಧವಾಗಿ ▶ 6ನೇ ಪುಟಕ್ಕೆ

ಮೈಸೂರು ಮಿತ್ರ

ಸೋಮವಾರ 21 ಜುಲೈ 2025

ಸ್ವಾಭಿಮಾನಿ ಸಮ್ಮಿಲನ ಕಾರ್ಯಕ್ರಮ



ಮೈಸೂರಿನ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಸ್ವಾಭಿಮಾನಿ ಬಳಗದ ವತಿಯಿಂದ ಭಾನುವಾರ ನಡೆದ ಸ್ವಾಭಿಮಾನಿಗಳ ಸಮ್ಮಿಲನ ಕಾರ್ಯಕ್ರಮದಲ್ಲಿ ಬಳಗದ ರಾಜ್ಯಾಧ್ಯಕ್ಷ ಜೆ.ಬಿ.ವಿನಯ್‌ಕುಮಾರ್ ಮಾತನಾಡಿದರು.

ಮೈಸೂರು, ಜು.20(ಜಿಎ)– ಮೈಸೂರಿನ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಸ್ವಾಭಿಮಾನಿ ಬಳಗದ ವತಿಯಿಂದ ಭಾನುವಾರ ಸ್ವಾಭಿಮಾನಿಗಳ ಸಮ್ಮಿಲನ ಕಾರ್ಯಕ್ರಮ ನಡೆಸಲಾಯಿತು.

ಕಾರ್ಯಕ್ರಮವನ್ನು ಸಂವಿಧಾನ ಪೀಠಿಕೆಗೆ ಪುಷ್ಪವೃಷ್ಟಿ ಮಾಡುವ ಮೂಲಕ ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ಜೆ.ಬಿ. ವಿನಯ್‌ಕುಮಾರ್, ಲೇಖಕ ಡಾ.ಬಿ. ಬಸವರಾಜು, ಡಾ.ದಾದಾಪೀರ್ ನವಿಲೇಹಾಳ್, ಚಿಂತಕ ಡಾ.ಎ.ಬಿ.ರಾಮಚಂದ್ರಪ್ಪ, ಡಾ.ನಾರಾಯಣ್ ಚಾಲನೆ ನೀಡಿದರು.

ನಂತರ ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ಜೆ.ಬಿ.ವಿನಯ್‌ಕುಮಾರ್ ಮಾತನಾಡಿ, ನಾನೂ ಮೂಲತಃ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಸೇವೆ ಸಲ್ಲಿಸಿ, ನಂತರ ದಾವಣಗೆರೆಯಲ್ಲಿ ನೆಲೆಸಿ ಸಾಕಷ್ಟು ಸಾಮಾಜಿಕ ಕಾರ್ಯಗಳ ಮೂಲಕ ಗುರುತಿಸಿಕೊಂಡಿದ್ದೇನೆ. ಒಂದು ಪಕ್ಷದ ಪರವಾಗಿಯೂ ಕೆಲಸ ಮಾಡಿ, ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಬೇಕು ಎಂಬ ಉದ್ದೇಶದಿಂದ ಸ್ಪರ್ಧಿಸಲು ನಿರ್ಧರಿಸಿ, ಟಿಕೆಟ್‌ಗೆ ಬೇಡಿಕೆ ಇಟ್ಟಿದ್ದೆ. ಆದರೆ ಪಕ್ಷ ಟಿಕೆಟ್ ನೀಡಲಿಲ್ಲ. ಮತ್ತೊಂದೆಡೆ ಸ್ವಾಭಿಮಾನ ಬಿಡಲಿಲ್ಲ. ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದೆ ಎಂದರು.

ಸ್ಥಳೀಯರು ಚುನಾವಣಾ ಪ್ರಚಾರದ ವೇಳೆ ಒಂದು ಲಕ್ಷ ಮತ ಪಡೆದುಕೊಳ್ಳುತ್ತಾನೆ ಎಂಬ ಭರವಸೆ ಇಟ್ಟಿಕೊಂಡಿದರು. ಅಷ್ಟು ಮನ್ನಣೆಯೂ ದೊರೆತಿತ್ತು. ಹಾಗೇ 40 ಸಾವಿರಕ್ಕೂ ಹೆಚ್ಚು ಮತ ಪಡೆದುಕೊಂಡೆ. ಇದರಿಂದ ನನಗೆ ಆತ್ಮ ವಿಶ್ವಾಸ ಹೆಚ್ಚಿ ಸ್ವಾಭಿಮಾನಿ ಬಳಗ ಸ್ಥಾಪನೆ ಮಾಡಲಾಯಿತು ಎಂದು ತಿಳಿಸಿದರು.

ಸ್ವಾಭಿಮಾನಿ ಬಳಗದಿಂದ ರಾಜ್ಯಾದ್ಯಂತ ಮತ್ತಷ್ಟು ಮಂದಿ ಸ್ವಾಭಿಮಾನಿಗಳು ಉದ್ಭವವಾಗಲು ಬಳಗದಿಂದ ಶ್ರಮಿಸುತ್ತಿದ್ದೇವೆ ಎಲ್ಲರೂ ಸಾಥ್ ನೀಡಿ ಎಂದರು.

ಚಾಮುಂಡೇಶ್ವರಿ ವರ್ಧಂತಿ ಮಹೋತ್ಸವ...



ಮೈಸೂರು ನಗರ (ಜಿಲ್ಲಾ) ಕನ್ನಡಪರ ಸಂಘಟನೆ ನಾಗರಿಕ ಹಿತರಕ್ಷಣಾ ವೇದಿಕೆ ಆಶ್ರಯದಲ್ಲಿ ಚಾಮುಂಡಿ ಅಮ್ಮನವರ ವರ್ಧಂತಿ ಪ್ರಯುಕ್ತ ಸಾರ್ವಜನಿಕರಿಗೆ ಪ್ರಸಾದ ವಿತರಿಸಲಾಯಿತು. ಈ ವೇಳೆ ವೇದಿಕೆ ಅಧ್ಯಕ್ಷ ಮಂಜುನಾಥ್ (ಮಿಲ್ಕ್ ಮಂಜು), ಕೆ.ಆರ್.ಆಸ್ಪತ್ರೆ ಅಧೀಕ್ಷಕಿ ಡಾ.ಶೋಭಾ, ಪ್ರಧಾನ ಕಾರ್ಯದರ್ಶಿ ಮೋಹನ್‌ಕುಮಾರ್, ಬಾಲಕೃಷ್ಣೇಗೌಡ, ಯೋಗೇಶ್, ಕಾರ್ಯದರ್ಶಿ ಸರ್ದಾರ್ ಮಹೇಶ್, ಮಂಜುನಾಥ್, ರಂಗಪ್ಪಗೌಡ ಇನ್ನಿತರರಿದ್ದರು.

'ಪ್ಲಾಸ್ಟಿಕ್ ಮುಕ್ತ ದಿನ' ಆಚರಣೆ



ಮೈಸೂರಿನ ವಿಜಯನಗರ 4ನೇ ಹಂತದಲ್ಲಿ ಭಾನುವಾರ ವಿವಿಧ ಸಂಘ–ಸಂಸ್ಥೆಗಳಿಂದ 'ಪ್ಲಾಸ್ಟಿಕ್ ಮುಕ್ತ ದಿನ' ಆಚರಿಸಲಾಯಿತು.

ಮೈಸೂರು, ಜು.20(ಎಂಕೆ)– ಮೈಸೂರಿನ ವಿಜಯನಗರ 4ನೇ ಹಂತದಲ್ಲಿ ಹೂಟಗಳ್ಳಿ ನಗರಸಭೆ ಕಾರ್ಯಾಲಯ, ವಿಜಯನಗರ 4ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ತ್ರಿಪುರ ಪಾಠ ಶಾಲೆ ಹಾಗೂ ಸಮಾಗಮ ವೆಲ್‌ಫೇರ್ ಫೌಂಡೇಶನ್ ವತಿಯಿಂದ 'ಪ್ಲಾಸ್ಟಿಕ್ ಮುಕ್ತ ದಿನ' ಆಚರಿಸಲಾಯಿತು.

ವಿಜಯನಗರ 4ನೇ ಹಂತದಲ್ಲಿರುವ ಮರಿಮಲ್ಲಪ್ಪ ಶಾಲೆ ವೃತ್ತದಿಂದ ಆರಂಭಿಸಿ, ಮುಖ್ಯ ರಸ್ತೆಯಲ್ಲಿರುವ ಎಲ್ಲಾ ಅಂಗಡಿ ಮಳಿಗೆಗಳು, ಹೋಟೆಲ್‌ಗಳಲ್ಲಿ ಪ್ಲಾಸ್ಟಿಕ್ ಬಳಕೆ ಮಾಡದಂತೆ ಜಾಗೃತಿ ಮೂಡಿಸಲಾಯಿತು. ಹಾಗೆಯೇ ಸಾರ್ವಜನಿಕರಿಗೆ, ಗ್ರಾಹಕರಿಗೆ ಬಟ್ಟೆ ಬ್ಯಾಗ್ ವಿತರಿಸಲಾಯಿತು.

ಹೂಟಗಳ್ಳಿ ನಗರಸಭೆ ಆರೋಗ್ಯ ನಿರೀಕ್ಷಕಿ ನೇತ್ರಾವತಿ, ವಿಜಯನಗರ 4ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರಾಮಕೃಷ್ಣಗೌಡ, ಉಪಾಧ್ಯಕ್ಷ ಶಿವಣ್ಣಗೌಡ, ಕಾರ್ಯದರ್ಶಿ ಡಾ.ಎಂ.ಜೆ. ಆನಂದ್, ಖಜಾಂಚಿ ಹರೀಶ್, ನಿರ್ದೇಶಕ ರವಿ, ಮುಖಂಡರಾದ ಮಂಜುನಾಥ್, ನಾಗೇಶ್, ಸುಧಾಕರ್, ಪ್ರೊ.ಪುಟ್ಟಸ್ವಾಮಿ, ತ್ರಿಪುರ ಪಾಠಶಾಲೆಯ ಸೇತುರಾಮ್, ಗೌರಿ, ಸಮಾಗಮ ವೆಲ್‌ಫೇರ್ ಫೌಂಡೇಶನ್ ನಿರ್ದೇಶಕ ಪಾಂಡು, ಸುಮಿತ್ರ, ಹಿರಿಯ ನಾಗರಿಕರ ಸಂಘದ ಅಧ್ಯಕ್ಷ ಚಲುವೇಗೌಡ, ವಿಜಯ ವಿನಾಯಕ ಸಂಘದ ಅಧ್ಯಕ್ಷ ಜಗದೀಶ, ನಾರಾಯಣ್ ಮತ್ತಿತರರು ಭಾಗವಹಿಸಿದ್ದರು.

ಹುಟ್ಟುಹಬ್ಬದ ಶುಭ ಹಾರೈಕೆ...



ಮಾಜಿ ಉಪ ಮೇಯರ್ ಹಾಗೂ ಮೈಸೂರು ನಗರ ಎಸ್‌ಸಿ ಮೋರ್ಚಾ ಅಧ್ಯಕ್ಷ ವಿ.ಶೈಲೇಂದ್ರ ಅವರು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಚಲವಾದಿ ನಾರಾಯಣಸ್ವಾಮಿ ಅವರಿಗೆ ಬೆಂಗಳೂರಿನ ಅಧಿಕೃತ ನಿವಾಸದಲ್ಲಿ ಬೃಹತ್ ಭಾವಚಿತ್ರ ನೀಡಿ ಹುಟ್ಟುಹಬ್ಬದ ಶುಭ ಕೋರಿದರು. ಮೈಸೂರು ನಗರ ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಪ್ರತಾಪ್, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಕೆ.ಗಿರೀಶ್, ಅಶೋಕಪುರ ಮಹೇಶ್ ಉಪಸ್ಥಿತರಿದ್ದರು.



ಸುಶ್ಮಿತಾಗೆ ಪ್ರತಿಭಾ ಪುರಸ್ಕಾರ

ಮೈಸೂರು, ಜು. 20– ಮೈಸೂರಿನ ಶಾರದಾವಿಲಾಸ ಪದವಿ ಪೂರ್ವ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಥಮ ಪಿಯುಸಿ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಕುಮಾರಿ ಸುಶ್ಮಿತಾ ಅವರು ಕಳೆದ ಬಾರಿ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷೆ 2025ರಲ್ಲಿ 625ಕ್ಕೆ 592 ಅಂಕಗಳನ್ನು ಪಡೆದಿದ್ದಾರೆ. ಈ ಹಿನ್ನೆಲೆಯಲ್ಲಿ ಆಕೆಗೆ ಆಕ್ಸೆಸ್ ಗ್ರಾಮೀಣ ಲಿಮಿಟೆಡ್ ಸಂಘದ ವತಿಯಿಂದ 10,000 ರೂ. ಪ್ರತಿಭಾ ಪುರಸ್ಕಾರ ನೀಡಲಾಯಿತು. ಈಕೆ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಕುಂದಕೆರೆ ಗ್ರಾಮದ ಕೃಷಿಕ ಬಸವಣ್ಣ ಹಾಗೂ ಅಕ್ಕಮಹಾದೇವಿ ದಂಪತಿ ಪುತ್ರಿ.

ಮೈಸೂರು ಓಪನ್ ಫೋರಂನಿಂದ ಕೆಬಿಜಿ ಅವರಿಗೆ ನುಡಿನಮನ

ಮೈಸೂರು, ಜು.20(ಎಂಕೆ)– ಮೈಸೂರು ಓಪನ್ ಫೋರಂ ವತಿಯಿಂದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ(ಕೆಬಿಜಿ) ಅವರಿಗೆ ನುಡಿನಮನ ಸಲ್ಲಿಸಲಾಯಿತು.

ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ಕಲ್ಪಕ್ಷೇತ್ರ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಸಂತಾಪ ಸಭೆಯಲ್ಲಿ ಮೌನಾಚರಣೆ ಮೂಲಕ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಬಳಿಕ ಮಾತನಾಡಿದ ಅರುಣಾಚಲ ಪ್ರದೇಶದ ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ಮಾಜಿ ಉಪ ಕುಲಪತಿ ಪ್ರೊ.ಕೆ.ಸಿ.ಬೆಳ್ಳಿಯಪ್ಪ, ಮೈಸೂರಿಗರ ಹೃದಯ ಗೆದ್ದಿರುವ ಕೆಬಿಜಿಯವರು ತಮ್ಮ ಬರವಣಿಗೆ ಮೂಲಕ ಮಾನವೀಯ ಸ್ಪರ್ಶ ನೀಡಿದ್ದಾರೆ. ಯಾವುದೇ ಸೀಮಿತ ವಿಚಾರಗಳಿಗೆ ಒಳಗಾಗದೆ ಎಲ್ಲರನ್ನೂ ಅತ್ಯಂತ ಪ್ರೀತಿಯಿಂದ ಕಾಣುವ ವ್ಯಕ್ತಿತ್ವವುಳ್ಳ ಅಜಾತಶತ್ರು ಅವರು ಎಂದರು.

ಮಡಿಕೇರಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಪಡೆದ ಕೆಬಿಜಿ ಅವರು, ಬೆಂಗಳೂರಿನಲ್ಲಿ ಕಾನೂನು ಮತ್ತು ಮುಂಬೈನ ಭಾರತೀಯ ವಿದ್ಯಾ ಭವನದಲ್ಲಿ (ಬಿವಿಬಿ) ಪತ್ರಿಕೋದ್ಯಮದ ಪದವಿಯೊಂದಿಗೆ ತಮ್ಮ ಪತ್ರಿಕಾ ವೃತ್ತಿ ಬದುಕನ್ನು ಆರಂಭಿಸಿದರು. ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಕೆಲ ವರ್ಷಗಳು ಕೆಲಸ ಮಾಡಿದ್ದ ಅವರು, ಪುಣೆಯಲ್ಲಿ ಜಾಹೀರಾತು ಸಂಸ್ಥೆಯನ್ನು ಪ್ರಾರಂಭಿಸಿದರು. 1976ರಲ್ಲಿ ಮದುವೆ ಯಾದ ಬಳಿಕ ಮೈಸೂರಿಗೆ ಬಂದು ನೆಲೆಸಿದ ಕೆಬಿಜಿ, 1978ರಲ್ಲಿ 'ಸ್ಟಾರ್ ಆಫ್ ಮೈಸೂರ್' ಹಾಗೂ 1980ರಲ್ಲಿ 'ಮೈಸೂರು ಮಿತ್ರ' ಆರಂಭಿಸಿದರು.

ಈ ಎರಡೂ ಪತ್ರಿಕೆಗಳು ದೊಡ್ಡಮಟ್ಟದ ಯಶಸ್ಸನ್ನು ಸಾಧಿಸಿವೆ ಎಂದು ಸ್ಮರಿಸಿದರಲ್ಲದೆ ಕೇಂದ್ರ ಸಂಪುಟ ಸಚಿವಾಲಯ ನಿವೃತ್ತ ಜಂಟಿ ಕಾರ್ಯದರ್ಶಿ ರವಿ ಜೋಶಿ, ನಿವೃತ್ತ ಮೇಜರ್ ಜನರಲ್ ಡಾ.ಎಸ್.ಜಿ. ಒಂಬತ್ಕೆರೆ ಅವರ ಸಂತಾಪ ಸಂದೇಶವನ್ನು ಸಭೆಯಲ್ಲಿ ತಿಳಿಸಿದರು.

ಮೈಸೂರ್ ಓಪನ್ ಫೋರಂನ ಪ್ರೊ.ಎಂ. ಉಮಾಪತಿ ಮಾತನಾಡಿ, ಮಾತಿನ ಮಲ್ಲ ಕೆಬಿಜಿಯವರಿಗೆ ಮೌನ ಆಚರಿಸುವ ದುಃಖದ ಸಂದರ್ಭ ಇದಾಗಿದ್ದು, ಅವರೊಬ್ಬ ಅತ್ಯಂತ ಯಶಸ್ವಿ ಪತ್ರಕರ್ತರಾಗಿದ್ದಾರೆ. ನಾನು ಚಿಕ್ಕವಯಸ್ಸಿನಲ್ಲಿದ್ದಾಗ ಅಂದರೆ ಸುಮಾರು 1965–70 ಸಂದರ್ಭದಲ್ಲಿ ಅಗರಂ ರಂಗಯ್ಯ, ತಾತಯ್ಯ ಸೇರಿದಂತೆ ಇನ್ನಿತರರು ನಡೆಸುತ್ತಿದ್ದ, ಜಾಹೀರಾತುಗಳೇ ಇಲ್ಲದ ಕೆಲವೇ ಕೆಲವು ಪತ್ರಿಕೆಗಳು ಇದ್ದವು. ಅಂತಹ ಸಂದರ್ಭದಲ್ಲಿ ಜನ್ಮ ತಾಳಿದ 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಪತ್ರಿಕೋದ್ಯಮ ಕ್ಷೇತ್ರದಲ್ಲಿ ತನ್ನದೆ ಛಾಪು ಮೂಡಿಸಿತು ಎಂದು ಹೇಳಿದರು.

ಕೆಬಿಜಿಯವರು ತಮ್ಮ 'ಅಬ್ರಕಡಬ್ರ' ಅಂಕಣದ ಜೊತೆಗೆ ಸ್ಥಳೀಯ ಸುದ್ದಿಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದರು. ಜನರಿಗೆ ಅಗತ್ಯವಿರುವ ವಿಚಾರ, ಆಧ್ಯಾತ್ಮಕ, ಕ್ರೀಡೆ, ಆರೋಗ್ಯ ಸೇರಿದಂತೆ ಆಸಕ್ತಿದಾಯಕ ವಿಚಾರಗಳನ್ನು ಪ್ರಕಟಿಸಿದ ಅವರ ಪತ್ರಿಕೆಗಳ ಜನಪ್ರಿಯತೆ ಹೆಚ್ಚಿಸಿತು. ಸ್ವತಃ ಮುದ್ರಕ, ಪ್ರಕಾಶಕ, ಸಂಪಾದಕರಾಗಿ ಕೆಲಸ ಮಾಡಿದ ಅವರು, ಅಭೂತಪೂರ್ವ ಯಶಸ್ಸು ಕಂಡರು. ಬೆಳಗ್ಗೆ 'ಮೈಸೂರು ಮಿತ್ರ', ಸಂಜೆ 'ಸ್ಟಾರ್ ಆಫ್ ಮೈಸೂರ್' ಓದದಿದ್ದರೆ ಏನನ್ನೋ ಕಳೆದುಕೊಂಡ ಭಾವ ಓದುಗರಲ್ಲಾಗುವಂತೆ ಮಾಡಿದರು ಎಂದು ಮೆಲುಕು ಹಾಕಿದರು.

ಆತ್ಮೀಯರಾದ ಗಣಪತಿ ಅವರು, ನಾವುಗಳೆಲ್ಲಾ ಹಾಗಾಗ ಸಭೆ ಸೇರಿ ಚರ್ಚಿಸುತ್ತಿದ್ದೆವು. ಕಳೆದ ಜೂ.12ರಂದು ಸಭೆ ಸೇರಿ ಪ್ರಚಲಿತ ವಿಚಾರಗಳನ್ನು ಚರ್ಚಿಸಿದ್ದೆವು. ತೆರೆದ ಹೃದಯ ವೈಶಾಲ್ಯತೆಯುಳ್ಳ ಕೆಬಿಜಿ ಅವರು ಬಲಿಷ್ಠ ತಂಡವನ್ನು ಕಟ್ಟಿ ಬೆಳೆಸಿದ್ದಾರೆ. ಅವರ ಸಂಸ್ಥೆ ದೀರ್ಘಕಾಲದವರೆಗೆ ಸಮಾಜವನ್ನು ಮುನ್ನಡೆಸುವ ಕೆಲಸ ಮಾಡಲಿ ಎಂದು ಆಶಿಸಿದರು. ಬಳಿಕ ಉದ್ಯಮಿ ಅಶ್ವಿನಿ ರಂಜನ್, ಹಿರಿಯರಾದ ಬಾಪು ಸತ್ಯನಾರಾಯಣ, ಡಾ.ಹೆಚ್.ಎಸ್.ಶಿವಣ್ಣ ಪ್ರೊ.ಆರ್. ಚಂದ್ರಪ್ರಕಾಶ್, ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್ ಅವರು ಕೆಬಿಜಿ ಅವರೊಂದಿಗಿನ ಒಡನಾಟ ಹಂಚಿಕೊಂಡರು.



ಮೈಸೂರು ಓಪನ್ ಫೋರಂ ವತಿಯಿಂದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ(ಕೆಬಿಜಿ) ಅವರಿಗೆ ಭಾನುವಾರ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಪ್ರೊ. ಸಿ.ನಾಗಣ್ಣ, ಪ್ರೊ.ಕೆ.ಸಿ.ಬೆಳ್ಳಿಯಪ್ಪ, ಪ್ರೊ.ಎಂ.ಉಮಾಪತಿ, ಉದ್ಯಮಿ ಅಶ್ವಿನಿ ರಂಜನ್, ಹಿರಿಯರಾದ ಬಾಪು ಸತ್ಯನಾರಾಯಣ, ಡಾ.ಹೆಚ್.ಎಸ್.ಶಿವಣ್ಣ, ಪ್ರೊ.ಆರ್.ಚಂದ್ರಪ್ರಕಾಶ್, ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್ ಇನ್ನಿತರರು ಚಿತ್ರದಲ್ಲಿದ್ದಾರೆ.

ಮೈಸೂರಿನ ಸರ್ವಾಂಗೀಣ ಅಭಿವೃದ್ಧಿಗೆ ಕೆಬಿಜಿ ಕೊಡುಗೆ ಅಪಾರ...

“ಮೈಸೂರು ಸರ್ವಾಂಗೀಣ ಪ್ರಗತಿ ಹೊಂದಲು ಕೆ.ಬಿ.ಗಣಪತಿ ಅವರ ಕೊಡುಗೆ ಅಪಾರವಾಗಿದೆ. ಮೈಸೂರನ್ನು ತಮ್ಮ ಕರ್ಮಭೂಮಿಯನ್ನಾಗಿ ಸ್ವೀಕರಿಸಿ, ಮೈಸೂರು ಪರಂಪರೆ ಉಳಿವಿಗೆ ಅವರು ನೀಡಿರುವ ಸೇವೆ ದೊಡ್ಡದಾಗಿದೆ. ಕೆಬಿಜಿ ಎಂದರೆ ಮೈಸೂರು ಅಭಿವೃದ್ಧಿ ಎನ್ನಬಹುದು. ಇಲ್ಲಿನ ಲೋಪದೋಷಗಳು, ನ್ಯೂನತೆಗಳು, ಅರೆಕೊರೆಗಳನ್ನು ನಿವಾರಣೆ ಮಾಡುವಲ್ಲಿ ಸದಾ ನಿರತರಾಗಿರುತ್ತಿದ್ದರು. **–ಪ್ರೊ.ಸಿ.ನಾಗಣ್ಣ, ಅಧ್ಯಕ್ಷರು, ಭಾರತೀಯ ವಿದ್ಯಾಭವನ, ಮೈಸೂರು.**

'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಮೂಲಕ ಕೆಬಿಜಿ ಅಮರ...

ಕೆಬಿಜಿಯವರ ಅಂಕಣಕ್ಕಾಗಿ ನಾನು ಕಾತುರದಿಂದ ಕಾಯುತ್ತಿದ್ದೆ. ಅವರ ಅಂಕಣವನ್ನು ನಾನು ಅತ್ಯಂತ ಆಸಕ್ತಿಯಿಂದ ಓದುತ್ತಿದ್ದೆ. ಕೆಬಿಜಿಯವರ ಹಾಗೂ ನನ್ನ ರಾಜಕೀಯ ದೃಷ್ಟಿಕೋನಗಳು ಭಿನ್ನವಾಗಿದ್ದವು. ಆದರೆ ಅದರ ಹೊರತಾಗಿ ನಾವು ಪರಸ್ಪರ ಗೌರವಿಸುತ್ತಿದ್ದೆವು. ಕೆಬಿಜಿಯವರು ಸೂಕ್ಷ್ಮವಾಗಿ ಆಲೋಚಿಸುವ ಉನ್ನತ ಗುಣ ಹೊಂದಿದ್ದರು. ಮೈಸೂರಿನಲ್ಲಿ ಅನೇಕ ಜನಪರ ಸಂಘ–ಸಂಸ್ಥೆಗಳನ್ನು ಕಟ್ಟಿ ಬೆಳೆಸುವಲ್ಲಿ ಕೆಬಿಜಿಯವರ ಕೊಡುಗೆ ಅಪಾರ. ಅವರು ಕಟ್ಟಿ ಬೆಳೆಸಿದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಮೂಲಕ ಅಮರವಾಗಿದ್ದಾರೆ.

–ರವಿ ಜೋಶಿ, ನಿವೃತ್ತ ಜಂಟಿ ಕಾರ್ಯದರ್ಶಿ, ಕೇಂದ್ರ ಸಂಪುಟ ಸಚಿವಾಲಯ.

ಕೆಬಿಜಿಯವರದು ಅಪ್ರತಿಮ ವ್ಯಕ್ತಿತ್ವ...

ಕೆಬಿಜಿಯವರು ಸಾರ್ವಜನಿಕ ಹಿತಾಸಕ್ತಿ ಹೊಂದಿರುವ ಒಂದು ಸಾರ್ವಜನಿಕ ಸಂಸ್ಥೆಯಂತೆ ಇದ್ದರು. ಆ ಮೂಲಕ ನಾಡಿನಾದ್ಯಂತ ತಮ್ಮ ಛಾಪು ಮೂಡಿಸಿದ್ದಾರೆ. ಅವರ ಅಗಲಿಕೆಯು ಕೇವಲ ಅವರ ಕುಟುಂಬಕ್ಕೆ ಮಾತ್ರವಲ್ಲ, ಅವರ ಬಂಧು–ಬಳಗ, ಹಿತೈಷಿಗಳು ಹಾಗೂ ಅಭಿಮಾನಿಗಳಿಗೂ ತೀವ್ರ ನಷ್ಟವೇ ಸರಿ. ಅವರು ಮೈಸೂರಿಗೆ ಉನ್ನತ ಪರಂಪರೆ ಹಾಕಿಕೊಟ್ಟಿದ್ದಾರೆ. ಕೆಬಿಜಿ ಅವರೊಂದಿಗಿನ ನನ್ನ ಒಡನಾಟವನ್ನು ಅತ್ಯಂತ ಅಮೂಲ್ಯವೆಂದು ಪರಿಗಣಿಸಿದ್ದೇನೆ. 'ಸ್ಟಾರ್ ಆಫ್ ಮೈಸೂರ್'ನಲ್ಲಿ ನನ್ನ ಬರವಣಿಗೆ ಸಾಕಷ್ಟು ಪ್ರಕಟಗೊಂಡ ನಂತರವೇ ಕೆಬಿಜಿಯವನ್ನು ವೈಯಕ್ತಿಕವಾಗಿ ಭೇಟಿಯಾಗಲು ಸಾಧ್ಯವಾಯಿತು. ಕೆಬಿಜಿಯವರದು ಆದರ್ಶ ಹಾಗೂ ಅಪ್ರತಿಮ ವ್ಯಕ್ತಿತ್ವ.

–ಡಾ.ಎಸ್.ಜಿ.ಒಂಬತ್ಕೆರೆ,
ನಿವೃತ್ತ ಮೇಜರ್ ಜನರಲ್.

ನ್ಯಾಯಮೂರ್ತಿ ಯಶವಂತ್ ವರ್ಮಾ ಪದಚ್ಯುತಿ ನೋಟಿಸ್‌ಗೆ 100 ಸಂಸದರ ಸಹಿ: ಕೇಂದ್ರ ಸಚಿವ ಕಿರಣ್ ರಿಜಿಜು

ನವದೆಹಲಿ, ಜು.20– ನ್ಯಾಯಮೂರ್ತಿ ಯಶವಂತ್ ವರ್ಮಾ ಪದಚ್ಯುತಿಗೆ ಸಂಸತ್ತಿನಲ್ಲಿ ನಿರ್ಣಯ ಮಂಡಿಸುವ ನೋಟಿಸ್‌ಗೆ ಈಗಾಗಲೇ 100 ಸಂಸದರು ಸಹಿ ಮಾಡಿದ್ದಾರೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಭಾನುವಾರ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಪದಚ್ಯುತಿ ನಿರ್ಣಯ ಮಂಡಿಸಲು ಬೇಕಾಗಿರುವ ಅಗತ್ಯ ಸಂಸದರ ಬೆಂಬಲವನ್ನು ಈಗಾಗಲೇ ಮೀರಿದೆ. ಸರ್ವ ಪಕ್ಷ ಸಭೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಕಿರಣ್ ರಿಜಿಜು, ಸಹಿ ಸಂಗ್ರಹ ನಡೆಯುತ್ತಿದೆ. ಈಗಾಗಲೇ 100 ಸಂಸದರು ಸಹಿ ಹಾಕಿದ್ದಾರೆ. ಯಾವಾಗ ನಿರ್ಣಯವನ್ನು ಮಂಡಿಸಬೇಕು ಎಂಬುದನ್ನು ಕಾರ್ಯ ಕಲಾಪ ಸಮಿತಿ ನಿರ್ಧರಿಸಲಿದೆ ಎಂದು ತಿಳಿಸಿದರು.



ನ್ಯಾಯಾಧೀಶರ ಪದಚ್ಯುತಿಗೆ ಲೋಕಸಭೆಯಲ್ಲಿ ಕನಿಷ್ಠ 100 ಸಂಸದರು ಮತ್ತು ರಾಜ್ಯಸಭೆಯಲ್ಲಿ 50 ಸಂಸದರು ಸಹಿ ಹಾಕಬೇಕು. ಲೋಕಸಭೆಯಲ್ಲಿ ನಿರ್ಣಯ ಮಂಡಿಸುವ ಸಾಧ್ಯತೆ ಇದೆ.

ಸೋಮವಾರದಿಂದ ಸಂಸತ್ತಿನ ಮುಂಗಾರು ಅಧಿವೇಶನ ಆರಂಭವಾಗುವುದರೊಂದಿಗೆ ಈ ಅಧಿವೇಶನದಲ್ಲಿಯೇ ನಿರ್ಣಯವನ್ನು ಮಂಡಿಸಲಾಗುವುದು ಎಂದು ಸರ್ಕಾರ ಸ್ಪಷ್ಟಪಡಿಸಿದೆ. ನ್ಯಾಯಾಂಗದಲ್ಲಿ ಭ್ರಷ್ಟಾಚಾರದ ವಿರುದ್ಧದ ನಿರ್ಣಯಕ್ಕೆ ವಿಪಕ್ಷಗಳು ಸೇರಿದಂತೆ ವಿವಿಧ ಪಕ್ಷಗಳು ಬೆಂಬಲ ವ್ಯಕ್ತಪಡಿಸಿವೆ.

ಅಧಿವೇಶನದ ಮೊದಲ ವಾರದಲ್ಲಿಯೇ ನಿರ್ಣಯವನ್ನು ಮಂಡಿಸಲಾಗುತ್ತದೆಯೇ ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಲು ನಿರಾಕರಿಸಿದ ಕಿರಣ್ ರಿಜಿಜು, ಇದನ್ನು ಸಂಸತ್ತಿನ ಕಾರ್ಯ ಕಲಾಪ ಸಮಿತಿ ನಿರ್ಧರಿಸಲಿದೆ ಎಂದು ಹೇಳಿದರು.

ಇದಕ್ಕೂ ಮುನ್ನಾ ಪಿಟಿಐ ಸುದ್ದಿಸಂಸ್ಥೆಯೊಂದಿಗೆ ಮಾತನಾಡಿದ ಸಚಿವರು, ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ಪದಚ್ಯುತಿಗೆ ಎಲ್ಲಾ ರಾಜಕೀಯ ಪಕ್ಷಗಳಿಂದ ಬೆಂಬಲ ವ್ಯಕ್ತವಾಗಿರುವುದಾಗಿ ತಿಳಿಸಿದರು.

ಜಿಮ್ನಾಸ್ಟಿಕ್‌ನಲ್ಲಿ ನಾಲ್ಕು ಬೆಳ್ಳಿ ಪದಕ

ಮೈಸೂರು, ಜು.20– ಹೈದರಾಬಾದ್‌ನಲ್ಲಿ ನಡೆದ 'ಜಿಮ್‌ಕ್ವೀನ್–2025' ರಾಷ್ಟ್ರೀಯ ಮಟ್ಟದ ಜಿಮ್ನಾಸ್ಟಿಕ್ ಚಾಂಪಿಯನ್‌ಶಿಪ್‌ನಲ್ಲಿ ಮೈಸೂರಿನ ಅಮೃತಾ ಸತೀಶ್, ನಾಲ್ಕು ಬೆಳ್ಳಿ ಪದಕ ಪಡೆದಿದ್ದಾಳೆ.

ಕೆ.ಜಿ.ಕೊಪ್ಪಲಿನ ವಿಕ್ಕಿ ಸ್ಪೋರ್ಟ್ಸ್‌ವೇರ್ ಮಾಲೀಕ ಸತೀಶ್ ಹಾಗೂ ಪ್ರಮೋದಾ ದಂಪತಿಯ ಪುತ್ರಿಯಾದ ಅಮೃತಾ, ಸಿಕೆಸಿ ಕಾನ್ವೆಂಟ್‌ನ 6ನೇ ತರಗತಿ ವಿದ್ಯಾರ್ಥಿನಿ. ಈಕೆ ಪರ್ಫಾರ್ಮರ್ ಸ್ಪೋರ್ಟ್ಸ್ ಅಕಾಡೆಮಿ ಮೂಲಕ ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗದ ಜಿಮ್ನಾಷಿಯಂ ಹಾಲ್‌ನಲ್ಲಿ ತರಬೇತಿ ಪಡೆದು, ರಾಷ್ಟ್ರೀಯ ಮಟ್ಟದ ಪಂದ್ಯಾವಳಿಯಲ್ಲಿ ಉತ್ತಮ ಸಾಧನೆ ಮಾಡಿದ್ದಾಳೆ.



ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.07.2025 ಸೋಮವಾರ, ಮಳೆ ನಕ್ಷತ್ರ: ಪುಷ್ಯ, 20.07.2025ರಿಂದ 2.08.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ರೋಹಿಣಿ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಹೈಪೋಥೈರಾಯ್ಡಿಸಮ್ ಯೋಗ ಚಿಕಿತ್ಸಾ ಶಿಬಿರ, ವೆರಿಕೋಸ್ ವೇನ್ಸ್ ಮತ್ತು ಅಲ್ಸರ್‌ಗಳ ಬಗ್ಗೆ ಚಿಕಿತ್ಸಾ ಶಿಬಿರ, ಇಸುಬು ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಸೇವಾ ಸಮಿತಿ:** ಅಮ್ಮನವರ ಜನ್ಮೋತ್ಸವ ಪ್ರಯುಕ್ತ ಶ್ರೀ ಚಾಮುಂಡೇಶ್ವರಿ ಅಮ್ಮನವರ ಹಬ್ಬ ಮತ್ತು ಅಮ್ಮನವರ ಉತ್ಸವ, ಬೆಳಗ್ಗೆ 9 ಗಂಟೆಯಿಂದ ಗಣಪತಿ ಪೂಜೆ, ನವಗ್ರಹ ಮತ್ತು ಮೃತ್ಯುಂಜಯ ಪೂಜೆ, ಬೆಳಗ್ಗೆ 11 ಗಂಟೆಗೆ ಗಣಪತಿ ಹೋಮ, ನವಗ್ರಹ, ಮೃತ್ಯುಂಜಯ ದುರ್ಗಾ ಹೋಮ, ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ, ಮಧ್ಯಾಹ್ನ 2.10ರಿಂದ ಅಮ್ಮನವರ ಉತ್ಸವ ಪ್ರಾರಂಭವಾಗಿ ತಿಪ್ಪಾಜಿ ಕೊಳ ತಲುಪಲಿದೆ. ಸಂಜೆ 6 ಗಂಟೆಗೆ ತಿಪ್ಪಾಜಿ ಕೊಳದಿಂದ ಅಮ್ಮನವರ ಮೆರವಣಿಗೆ, ಸ್ಥಳ: ದೇವಸ್ಥಾನದ ಪ್ರಾಂಗಣ, ಸೂರ್ಯ ಬೇಕರಿ ವೃತ್ತ, ಎಸ್‌ಬಿಐ ರಸ್ತೆ, ಹೆಬ್ಬಾಳು.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ವಿದ್ಯಾವರ್ಧಕ ಸ್ನಾತಕೋತ್ತರ ಕೇಂದ್ರ:** ಮೈಸೂರು ವಿವಿ ಸ್ನಾತಕೋತ್ತರ ಪ್ರವೇಶ ಪರೀಕ್ಷೆಗೆ ಉಚಿತ ಕೋಚಿಂಗ್ ತರಬೇತಿ, ಸ್ಥಳ: ವಿದ್ಯಾವರ್ಧಕ ಕಾಲೇಜು, ಬೆಳಗ್ಗೆ 10.30ರಿಂದ.

■ **ಓಟಿ ಕೇರ್ ಆಸ್ಪತ್ರೆ:** ಉಚಿತ ಕಿವಿ ಪರೀಕ್ಷೆ, ಸ್ಥಳ: ಆಸ್ಪತ್ರೆ ಆವರಣ, ಸಯ್ಯಾಜಿರಾವ್ ರಸ್ತೆ, ಬೆಳಗ್ಗೆ 11ಕ್ಕೆ

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಕೀತಿಬಕುಷ್ಟ (ಸೋರಿಯಾಸಿಸ್, ಮಕ್ಕಳಲ್ಲಿ ಕಂಡುಬರುವ ನೆಗಡಿ, ಕೆಮ್ಮು, ಅಸ್ತಮಾ ಮತ್ತು ಅಲರ್ಜಿ, ಪಾರ್ಶ್ವವಾಯು ಮತ್ತು ಅನ್ಯ ನರ ಸಂಬಂಧಿ ಕಾಯಿಲೆಗೆ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಶಾಖಾ ಕಚೇರಿಗಳ ಜಂಟಿ ಸಹಯೋಗ):** ಉದ್ಯಮಿಗಳ ಸಭೆ ಹಾಗೂ ಆರ್ಥಿಕ ನೆರವಿನ ಯೋಜನೆಗಳ ಬಗ್ಗೆ ಮಾಹಿತಿ ಕಾರ್ಯಾಗಾರ. ಉದ್ಘಾಟನೆ: ಆಂದೋಲನ ಸಂಪಾದಕ ರವಿ ಕೋಟಿ, ಅಧ್ಯಕ್ಷತೆ: ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಪ್ರಧಾನ ವ್ಯವಸ್ಥಾಪಕ (ಮೈಸೂರು ವೃತ್ತ) ಎನ್.ಎಸ್.ಶಿವಣ್ಣ, ಮುಖ್ಯ ಅತಿಥಿಗಳು: ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಕೆ.ಶಿವಲಿಂಗಯ್ಯ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಪ್ರಭುಸ್ವಾಮಿ ವಿ.ಎಂ., ಸ್ಥಳ: ಶ್ರೀ ಕಂಠೀರವ ನರಸಿಂಹರಾಜ ಸ್ಪೋರ್ಟ್ಸ್ ಕ್ಲಬ್, ಲಲಿತಮಹಲ್ ರಸ್ತೆ, ಬೆಳಗ್ಗೆ 10.30ರಿಂದ.

■ **ಮಹಾರಾಣಿ ಮಹಿಳಾ ಕಲಾ ಕಾಲೇಜು, ರಾಜ್ಯ ಶಾಸ್ತ್ರ ಮತ್ತು ಸಾರ್ವಜನಿಕ ಆಡಳಿತ ವಿಭಾಗ, ಐಕ್ಯೂಎಸಿ :** ಇಂಡಕ್ಷನ್ ಕಾರ್ಯಕ್ರಮ ಮತ್ತು ವಿಚಾರ ಸಂಕಿರಣ, ವಿಷಯ: ದೇಶದ ಪರಮಾಧಿಕಾರದ ಸ್ಥಿರತೆಯಲ್ಲಿ ರಾಜ್ಯಶಾಸ್ತ್ರದ ಅಧ್ಯಯನ ಮತ್ತು ಸಂಶೋಧನೆಯ ಅಗತ್ಯತೆ, ಸ್ಥಳ: ಪಿ.ಜಿ.ಸೆಮಿನಾರ್ ಹಾಲ್, ಕಾಲೇಜು ಆವರಣ, ಬೆಳಗ್ಗೆ 11 ಗಂಟೆಗೆ.

■ **ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ಜಾನಪದ ಸಂಶೋಧಕರ ಒಕ್ಕೂಟ :** ಡಾ.ಹೊಂಬಯ್ಯ ಹೊನ್ನಲಗೆರೆ ಮತ್ತು ಶ್ರೀನಾಥ ಬಿ. ಕಾಂಬಳೆ ಅವರ ಹೊಸಗನ್ನಡ ಸಾಹಿತ್ಯ ಚರಿತ್ರೆ: ಪಂಥಗಳು ಕೃತಿ ಬಿಡುಗಡೆ, ಕೃತಿ ಬಿಡುಗಡೆ ಮತ್ತು ಅಧ್ಯಕ್ಷತೆ: ಪ್ರಸಾರಾಂಗ ನಿರ್ದೇಶಕ ಪ್ರೊ.ಎಂ. ನಂಜಯ್ಯ, ಸ್ಥಳ: ಕುವೆಂಪು ಸಭಾಂಗಣ, ಪ್ರಸಾರಾಂಗ, ಬೆಳಗ್ಗೆ 11 ಗಂಟೆಗೆ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಚಳವಳಿ ಕೇಂದ್ರ ಸಮಿತಿ :** 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ. ಗಣಪತಿ ಅವರಿಗೆ ಶ್ರದ್ಧಾಂಜಲಿ, ನುಡಿ ನಮನ: ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಅಂಕಣಕಾರ ಜಿ.ಎಲ್.ತ್ರಿಪುರಾಂತಕ, ವಕೀಲ ಶಿವಪ್ರಸಾದ್, ಕನ್ನಡ ಚಳವಳಿ ಕೇಂದ್ರ ಸಮಿತಿಯ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಮಧ್ಯಾಹ್ನ 1 ಗಂಟೆಗೆ.

■ **ಡಾ.ರಾಜ್‌ಕುಮಾರ್ ಮ್ಯೂಸಿಕಲ್ ಗ್ರೂಪ್:** ಡಾ.ಶಿವರಾಜ್‌ಕುಮಾರ್ ಅವರ 63ನೇ ಜನ್ಮದಿನೋತ್ಸವ ಮತ್ತು ಚಿತ್ರರಂಗದಲ್ಲಿ 40 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಮೈಸೂರು ಜಯರಾಂ ಅವರಿಂದ ಡಾ.ಶಿವರಾಜ್‌ಕುಮಾರ್ ಹಿಟ್ಸ್ ಸಂಗೀತ ಕಾರ್ಯಕ್ರಮ, ಸ್ಥಳ: ನಾದಬ್ರಹ್ಮ ಸಂಗೀತ ಸಭಾಂಗಣ, ಸಂಜೆ 5 ಗಂಟೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ–ವಿ.ಬಿ.ಕುಲಮರ್ವ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ–ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40–ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಅಂಬಯ್ಯನುಲಿ ಹಾಗೂ ಜಿ.ಪುಷ್ಪಲತಾ, ವ್ಯಾಖ್ಯಾನ–ಕೆ.ಎಲ್.ಪದ್ಮಿನಿ ಹೆಗಡೆ, 6.50–ರೈತರಿಗೆ ಸಲಹೆ, 7.15–ಭರವಸೆ ಹೊನಲು, ವೈದ್ಯರ ಕಿವಿಮಾತು, ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ.ರಸ್ತೆ, ಬೆಂಗಳೂರು, 8.30–ಕನ್ನಡ ಚಿತ್ರಗೀತೆಗಳು, 9.05–ಸರ್ಕೋಮ–ಜಾಗೃತಿ ಕುರಿತ ಪ್ರಾಯೋಜಿತ ಕಾರ್ಯಕ್ರಮ, 9.10–ನೆನಪಿನಂಗಳ (ಧ್ವನಿ ಭಂಡಾರದಿಂದ) 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಸದಾಶಿವಂ .ಎ–ಹಾಡುಗಾರಿಕೆ, 10.30–ಹಿಂದಿ ಚಿತ್ರಗೀತೆಗಳು, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಗೇಮ್ ಶೋ, ಪ್ರಸ್ತುತಿ–ಬಿ. ದಿಗ್ವಿಜಯ್, 12.05–ವನಿತಾ ವಿಹಾರ, 12.35–ದೇವರನಾಮ, 12.45–ನಮ್ಮ ಆರೋಗ್ಯ–ರಿಯಾಕ್ಟಿವ್ ಆರ್ಥ್ರೈಟಿಸ್– ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಮೈಸೂರಿನ rheumatologist ಡಾ.ಕೆ.ಎನ್.ಸಂಗೀತಾ ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ, 1.00–ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, 1.20–ಭಾವಗೀತೆಗಳು–ಅಜಯ್ ಜಿ.ಪ್ರಸಾದ್, 2.30– ಪ್ರದೇಶ ಸಮಾಚಾರ, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ಕೆ.ಸರಸ್ವತಿ–ವೀಣಾ ವಾದನ, 4.00–ಮಹಿಳಾರಂಗ, ನನ್ನ ಹಕ್ಕು ನನ್ನ ಜವಾಬ್ದಾರಿ, ಮಹಿಳಾ ಕಾನೂನು ಜಾಗೃತಿ ಕಾರ್ಯಕ್ರಮ. ಭಾಗವಹಿಸುತ್ತಾರೆ: ದೆಹಲಿ ಉಚ್ಚ ನ್ಯಾಯಾಲಯದ ವಕೀಲರಾದ ಸ್ವಾತಿ.ಬಿ.ವಿ., ಪ್ರಸ್ತುತಿ: ಸಹನ, 4.45 ಹಿಂದಿ ಪಾಠ–ಪ್ರಸ್ತುತಿ: ವಿದ್ಯಾ ಕುಮಾರ್, 5.05–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ:–ಕಬ್ಬಿನ ಬೇಸಾಯ ಕುರಿತ ನೇರ ಫೋನ್ ಇನ್ ಕಾರ್ಯಕ್ರಮ, ಭಾಗವಹಿಸುತ್ತಾರೆ: ಮಂಡ್ಯದ ವಿ.ಸಿ.ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕ ಡಾ.ಕೆ.ವಿ.ಕೇಶವಯ್ಯ, ಪ್ರಸ್ತುತಿ–ಎನ್.ಕೇಶವಮೂರ್ತಿ, 7.45–ಕನ್ನಡ ಚಿತ್ರಗೀತೆಗಳು, 8.00 –ಸಂಸತ್ ಸಮೀಕ್ಷಾ, 8.15–ಯುವವಾಣಿ–ಸಂತ ಫಿಲೋಮಿನಾ ಕಾಲೇಜಿನ ವಿದ್ಯಾರ್ಥಿಗಳ ಕಾರ್ಯಕ್ರಮ ವೈವಿಧ್ಯದ ಮೊದಲ ಭಾಗ. 8.30–ಹಿಂದಿ ಚಿತ್ರಗೀತೆಗಳು, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಸಿ.ಎಸ್.ಕೇಶವಚಂದ್ರ–ವೇಣುವಾದನ, 10.00–ಸಂಸತ್‌ನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣ.

ವ್ಯಕ್ತಿ ಪೂಜೆ ಮಾಡದೆ, ಸಾಧಕರು ಹಾಕಿಕೊಟ್ಟ ದಾರಿಯಲ್ಲಿ ವಿದ್ಯಾರ್ಥಿಗಳು ಸಾಗಬೇಕು

ಹಿರಿಯ ಕಲಾವಿದ ಮುಖ್ಯಮಂತ್ರಿ ಚಂದ್ರು ಸಲಹೆ



ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 'ಸಾಧಕರಿಗೆ ಸತ್ಕಾರ ಶೈಕ್ಷಣಿಕ ಸಾಧಕರಿಗೆ ಸನ್ಮಾನ' ಕಾರ್ಯಕ್ರಮವನ್ನು ಡಾ.ಮುಖ್ಯಮಂತ್ರಿ ಚಂದ್ರು ಉದ್ಘಾಟಿಸಿದರು.

ಮೈಸೂರು, ಜು.20(ವಿವಿಹೆಚ್)– ಮೈಸೂರಿನ ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್ ವತಿಯಿಂದ 'ಸಾಧಕರಿಗೆ ಸತ್ಕಾರ ಶೈಕ್ಷಣಿಕ ಸಾಧಕರಿಗೆ ಸನ್ಮಾನ' ಶೀರ್ಷಿಕೆಯಡಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಜೊತೆಗೆ ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಾಯಿತು.

ನಗರದ ವಿಜಯನಗರ ರೈಲ್ವೆ ಬಡಾವಣೆ ರಂಗ ಮಂದಿರಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಮಟ್ಟದಲ್ಲಿ ಸ್ಕೇಟಿಂಗ್ ವಿಭಾಗದಲ್ಲಿ ಸಾಧನೆ ಮಾಡಿದ ಕೆ.ಎಸ್.ಪ್ರತೀಕ್ಷಾ ಮತ್ತು ಚಿತ್ರಕಲೆ ವಿಭಾಗದಲ್ಲಿ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದ ಕೆ.ಎಂ.ಪ್ರಥಮ ಗೌಡ ಅವರಿಗೆ ಪುರಸ್ಕಾರ ನೀಡಿದ ಸತ್ಕರಿಸಲಾಯಿತು. ಜೊತೆಗೆ ಹೆಬ್ಬಾಳ ಬಡಾವಣೆಯ ಎಸ್ಎಸ್ಎಲ್ಸಿ ಮತ್ತು ಪಿಯುಸಿಯಲ್ಲಿ ಉತ್ತಮ ಸಾಧನೆ ಮಾಡಿದ 170 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಈ ವೇಳೆ ಮಾತನಾಡಿದ ಹಿರಿಯ ಕಲಾವಿದ ಡಾ. ಮುಖ್ಯಮಂತ್ರಿ ಚಂದ್ರು, ವಿದ್ಯಾರ್ಥಿಗಳು ಯೋಗ ಮತ್ತು ಯೋಗ್ಯತೆಯಿಂದ ಸಾಧನೆ ಮಾಡಿದವರನ್ನು, ಏನನ್ನೂ ಅಪೇಕ್ಷೆ ಪಡದೆ ತ್ಯಾಗ ಮಾಡಿದವರನ್ನು ಹಿಂಬಾಲಿಸಬೇಕು. ವ್ಯಕ್ತಿ ಪೂಜೆ ಮಾಡದೆ, ಸಾಧಕರು ಹಾಕಿಕೊಟ್ಟ ದಾರಿಯಲ್ಲಿ ಸಾಗಬೇಕು ಎಂದರು.

ಪೋಷಕರಾದವರು ಮಕ್ಕಳಿಗೆ ಯಾವುದರಲ್ಲಿ ಆಸಕ್ತಿಯಿದೆ ಎಂಬುದನ್ನು ತಿಳಿದುಕೊಂಡು ಅದರಲ್ಲಿ ಮುಂದುವರೆಯುವಂತೆ ಪ್ರೋತ್ಸಾಹಿಸಿ. ಸಾಲುಮರದ ತಿಮ್ಮಕ್ಕ, ಅಬ್ದುಲ್ ಕಲಾಂ ಅವರೆಲ್ಲಾ ತಮ್ಮ ಇಷ್ಟದ ಕೆಲಸಗಳಲ್ಲಿ ತೊಡಗಿಕೊಂಡು ಸಾಧನೆ ಮಾಡಿದ್ದಾರೆ. ಇದನ್ನು ಅರಿತು ಮಕ್ಕಳನ್ನು ಪ್ರೀತಿಯಿಂದ ತಾವು ಅನುಸರಿಸಲು ಬಯಸುವ ಕ್ಷೇತ್ರಗಳಿಗೆ ತೊಡಗಿಸಿಕೊಳ್ಳುವಂತೆ ಪ್ರೋತ್ಸಾಹಿಸಿ ಎಂದು ಸಲಹೆ ನೀಡಿದರು.

ಹಿರಿಯ ವಿದ್ವಾಂಸರು, ವಾಗ್ಮಿ ಆದ ಪ್ರೊ. ಎಂ.ಕೃಷ್ಣೇಗೌಡ ಮಾತನಾಡಿ, ರಾಮಾಯಣದಲ್ಲಿ ರಾವಣನಿಂದ ಅಪಹರಿಸಲ್ಪಟ್ಟ ಸೀತೆಯನ್ನು ಹುಡುಕಲು ಸಮುದ್ರ ದಾಟುವ ಬಗ್ಗೆ ಆಂಜನೇಯ ಯೋಚಿಸುತ್ತಾ ಕುಳಿತಿದ್ದ. ಆ ವೇಳೆ ಆಂಜನೇಯನಿಗೆ ಉಪದೇಶ ಮಾಡಿದ ಜಾಂಬವಂತ, ನೀನು ಮಾಡುತ್ತಿರುವ ಘನ ಕಾರ್ಯದ ಬಗ್ಗೆ ಯೋಚಿಸು, ಘನವಾದ ಉದ್ದೇಶವಿದ್ದಲ್ಲಿ ಎಂತಹದೇ ಅಡ್ಡಿಯಾದರೂ ದಾಟಬಹುದು ಎಂದು ಸೂಚಿಸಿದ. ಹಾಗೆಯೇ, ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಘನವಾದ ಉದ್ದೇಶ, ಆಲೋಚನೆಯಲ್ಲಿ ಸ್ಥಿರತೆ ಇದ್ದರೇ ಗೆಲುವು ಒಲಿಯುತ್ತದೆ ಎಂದು ತಮ್ಮ ಅನುಭವದ ಮಾತಿನ ಮೂಲಕ ಮಕ್ಕಳಿಗೆ ತಿಳಿ ಹೇಳಿದರು.

> ಸಮಾಜದ ಪ್ರಬುದ್ಧತೆಗಾಗಿ, ದೇಶದ ಏಳಿಗೆಗಾಗಿ ಶ್ರಮಿಸುವ ಉದ್ದೇಶದಿಂದ ನವಭಾರತ್ ಟ್ರಸ್ಟ್ ನಿರ್ಮಿಸಲಾಯಿತು. ಈ ನಿಟ್ಟಿನಲ್ಲಿ ಕಳೆದ 15 ವರ್ಷಗಳಿಂದ ಆರೋಗ್ಯ, ಶಿಕ್ಷಣ, ಪರಿಸರ, ಸಮಾಜಮುಖಿ ಕಾರ್ಯಕ್ರಮಗಳು ಸೇರಿದಂತೆ ಎಲ್ಲಾ ವಿಭಾಗಗಳಲ್ಲಿಯೂ ಕಾರ್ಯೋನ್ಮುಖರಾಗಿ ಜನಪರ ಕೆಲಸ ಮಾಡುತ್ತಾ ಬರುತ್ತಿದ್ದೇವೆ. ನಮ್ಮ ಬಡಾವಣೆಯ ಮಕ್ಕಳ ಪ್ರಾತಿಗಳನ್ನು ಉತ್ತೇಜಿಸುವ ಉದ್ದೇಶದಿಂದ ಸಾಧನಾ ಸತ್ಕಾರ ಕಾರ್ಯಕ್ರಮ ಆಯೋಜಿಸಿದ್ದೇವೆ. ಇದು ವಿದ್ಯಾರ್ಥಿಗಳಿಗೆ ಮಾನಸಿಕವಾಗಿ ಸ್ಥೈರ್ಯ ತುಂಬುವ ನಂಬಿಕೆಯಿದೆ.
>
> – **ಕೆ.ವಿ.ಶ್ರೀಧರ್**, ಅಧ್ಯಕ್ಷರು ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್

ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ವಿದ್ಯಾರ್ಥಿಗಳು ಕೇವಲ ಉತ್ತಮ ಅಂಕಗಳನ್ನು ಮಾತ್ರ ಪಡೆಯದೇ ತಮ್ಮ ವ್ಯಕ್ತಿ ವಿಕಸನ, ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳುವಲ್ಲಿ ನಿರತರಾಗಬೇಕು. ಆ ಮೂಲಕ ಸಮಾಜದಲ್ಲಿ ಆದರ್ಶ ಪ್ರಜೆಗಳಾಗಿ ಬದುಕಬೇಕು ಎಂದು ಹಾರೈಸಿದರು. ಮಾಜಿ ಕಾರ್ಪೊರೇಟರ್ ಎಂ.ಶಿವಣ್ಣ, ವಕೀಲ ಕೇಶವಮೂರ್ತಿ ಉಪಸ್ಥಿತರಿದ್ದರು. ಖ್ಯಾತ ಗಾಯಕಿ ಭಾಗ್ಯಶ್ರೀ ಮತ್ತು ತಂಡದವರಿಂದ ನಡೆದ ಭಾವಗೀತೆ, ಕಾವ್ಯ ಗೀತೆಗಳ ಗಾಯನ ನೆರೆದಿದ್ದ ಪ್ರೇಕ್ಷಕರನ್ನು ರಂಜಿಸಿತು.

ಡಿಕೆಶಿಯನ್ನು ಮುಗಿಸಲು ನಡೆಸಿದ ಸಮಾವೇಶ: ಆರ್.ಅಶೋಕ್

ಬೀದಿಯಲ್ಲಿ ಬಡಿದಾಡಿಕೊಳ್ಳುತ್ತಿರುವ ಕಾಂಗ್ರೆಸ್ ನಾಯಕರು



ಬೆಂಗಳೂರು, ಜು.20– ಸಿಎಂ ಸಿದ್ದರಾಮಯ್ಯ ನಡೆಸಿದ ಸಮಾವೇಶ ಸರ್ಕಾರಿ ಕಾರ್ಯಕ್ರಮ ಅಲ್ಲ. ಅದು ಡಿ.ಕೆ.ಶಿವಕುಮಾರ್ ಅವರನ್ನು ಮುಗಿಸಲು ಮಾಡಿದ ಕಾರ್ಯಕ್ರಮ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ವ್ಯಂಗ್ಯವಾಡಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ನಡೆಸಿದ ಸಮಾವೇಶ ಕಾಂಗ್ರೆಸ್‌ನ ಒಡಕನ್ನು ತೋರಿಸಿದೆ. ಅಲ್ಲಿ ಒಬ್ಬರೂ ಡಿಕೆಶಿ ಪರ ಮಾತಾಡಲಿಲ್ಲ. ಡಿಕೆಶಿಗೆ ಪಾಠ ಕಲಿಸಲು ಹಾಗೂ ಅಪಮಾನ ಮಾಡಲು ಈ ಸಮಾವೇಶ ನಡೆಸಲಾಗಿದೆ. ಡಿಕೆಶಿ ಈಗ ಎರಡನೇ ದರ್ಜೆಯ ನಾಯಕರಾಗಿಬಿಟ್ಟಿದ್ದಾರೆ. ಡಿಕೆಶಿಯನ್ನು ಮುಗಿಸಲು ಗುದ್ದಲಿ ಪೂಜೆ ಮಾಡಲಾಗಿದೆ ಎಂದಿದ್ದಾರೆ.

ಕಾಂಗ್ರೆಸ್ ಪಕ್ಷದ ನಾಯಕರು ಬೀದಿಯಲ್ಲಿ ಬಡಿದಾಡಿಕೊಳ್ಳುತ್ತಿದ್ದಾರೆ. ಇದು ಡಿಕೆಶಿ ಹಾಗೂ ಸಿದ್ದರಾಮಯ್ಯನವರ ಆಂತರಿಕ ಜಗಳ. ಬಿಜೆಪಿಗೆ ಸರ್ಕಾರವನ್ನು ಬೀಳಿಸುವ ಅಗತ್ಯವಿಲ್ಲ. ಈ ಸರ್ಕಾರ ಕಾಂಗ್ರೆಸ್‌ನ ಆಂತರಿಕ ಕಲಹದಿಂದಲೇ ಬಿದ್ದುಹೋಗಲಿದೆ. ಸುರ್ಜೇವಾಲಾ ರಾಜ್ಯಕ್ಕೆ ಬಂದು ಶಾಸಕರ ಅಹವಾಲುಗಳನ್ನು ಆಲಿಸಿದ್ದಾರೆ. ಇವರ ಜಗಳ ಜನರ ಮುಂದೆ ಬಯಲಾಗಿದೆ ಎಂದು ಲೇವಡಿ ಮಾಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮೈಸೂರಿನ ಸಮಾವೇಶದಲ್ಲಿ ಕೀಳಾಗಿ ಮಾತಾಡಿದ್ದಾರೆ. ಪ್ರಧಾನಿ ಬೊಗಳುತ್ತಾರೆಂದು ಹೇಳುವುದು ಕಾಂಗ್ರೆಸ್ ನಾಯಕರ ಮನಸ್ಥಿತಿಯನ್ನು ತೋರಿಸುತ್ತದೆ. ಈ ಹಿಂದೆ ಛಲವಾದಿ ನಾರಾಯಣಸ್ವಾಮಿ ಗಾದೆಮಾತು ಹೇಳಿದಾಗ ಸಂಸ್ಕೃತಿ ಬಗ್ಗೆ ಇವರೇ ಮಾತಾಡಿದ್ದರು. ಇನ್ನು ಅಧಿಕಾರಕ್ಕೆ ಬರುವುದಿಲ್ಲ ಎಂಬ ಕಾರಣಕ್ಕೆ ಇವರು ಈ ರೀತಿ ಕೀಳಾಗಿ ಮಾತಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದಾರೆ

ಸಮಾನಮನಸ್ಕರ ಬಳಗದಿಂದ ಕೆಬಿಜಿ, ಎನ್.ತಿಪ್ಪಣ್ಣ, ಬಿ.ಸರೋಜಾದೇವಿಗೆ ಶ್ರದ್ಧಾಂಜಲಿ



'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮಾಜಿ ಅಧ್ಯಕ್ಷ ಎನ್.ತಿಪ್ಪಣ್ಣ, ಹಿರಿಯ ಸಿನಿಮಾ ನಟಿ ಬಿ.ಸರೋಜಾದೇವಿ ಅವರಿಗೆ ಶ್ರದ್ಧಾಂಜಲಿ ಅರ್ಪಿಸಿ, ಪುಷ್ಪಾರ್ಚನೆ ನೆರವೇರಿಸಲಾಯಿತು.

ಮೈಸೂರು, ಜು.20(ಎಸ್‌ಪಿಎನ್)– ಮೈಸೂರು ಅಗ್ರಹಾರದಲ್ಲಿ ಸಮಾನಮನಸ್ಕರ ಬಳಗದ ಕಚೇರಿಯಲ್ಲಿ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮಾಜಿ ಅಧ್ಯಕ್ಷ ಎನ್.ತಿಪ್ಪಣ್ಣ, ಹಿರಿಯ ಸಿನಿಮಾ ನಟಿ ಬಿ.ಸರೋಜಾದೇವಿ ಅವರಿಗೆ ಶ್ರದ್ಧಾಂಜಲಿ ಅರ್ಪಿಸಿ, ಪುಷ್ಪಾರ್ಚನೆ ನೆರವೇರಿಸಲಾಯಿತು.

ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್ ಶ್ರದ್ಧಾಂಜಲಿ ಅರ್ಪಿಸುತ್ತ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳು ಮೈಸೂರಿನ ಮನೆಮನೆಗೆ ನವನವೀನ ಸುದ್ದಿಗಳನ್ನು ತಲುಪಿಸಿ ಮೈಸೂರಿನ ಅಭಿವೃದ್ಧಿಗೆ ತನ್ನದೇ ಕೊಡುಗೆ ನೀಡಿದೆ. ಇದರ ಹಿಂದೆ ಹಿರಿಯ ಪತ್ರಕರ್ತ ರಾದ ಕೆಬಿಜಿ ಅವರ ಕೊಡುಗೆ ಅಪಾರ ಎಂದರು. ಹಿರಿಯ ಪತ್ರಕರ್ತರಾದ ಡಾ. ಕೆ.ಬಿ.ಗಣಪತಿ, ಅಕ್ಷರ ಮಾಂತ್ರಿಕರಾದರೆ, ಮಹಾಸಭಾ ಮಾಜಿ ಅಧ್ಯಕ್ಷ ಎನ್.ತಿಪ್ಪಣ್ಣ ಸಮುದಾಯ ಸಂಘಟನೆಯಲ್ಲಿ ಅಪಾರ ಶ್ರಮವಿದೆ. ಹಿರಿಯ ನಟಿ ಬಿ.ಸರೋಜಾದೇವಿ ಇಂದಿನ ಯುವ ಕಲಾವಿದರಿಗೆ ಮಾದರಿಯಾಗಿದ್ದರು. ಒಟ್ಟಿನಲ್ಲಿ ಇವರು ಕನ್ನಡ ಅನರ್ಘ್ಯ ರತ್ನಗಳು. ಇವರು ತಮ್ಮ ತಮ್ಮ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ಎನ್.ತಿಪ್ಪಣ್ಣ ಅವರು, ಸಮುದಾಯದಲ್ಲಿ ಸಂಘಟಿಸುವಲ್ಲಿ ಅವರ ಪಾತ್ರ ದೊಡ್ಡದು ಎಂದರು.

ಈ ವೇಳೆ ರೋಟರಿ ಮೈಸೂರು ಉತ್ತರದ ಅಧ್ಯಕ್ಷ ಎಂ.ಚಂದ್ರಶೇಖರ್, ಕಾರ್ಯ ದರ್ಶಿ ರೋ.ಎ.ಪಿ.ವಿರೂಪಾಕ್ಷ, ಮರಿಮಲ್ಲಪ್ಪ ಪ್ರೌಢಶಾಲೆಯ ಹಿರಿಯ ಶಿಕ್ಷಕ ಬಿ.ಆರ್.ಶಿವಕುಮಾರ್, ಡಾ.ಮಹದೇವಪ್ಪ, ಕಿರಣ್, ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಮಾಜಿ ಜಿಲ್ಲಾಧ್ಯಕ್ಷ ಕಾನ್ಯ ಶಿವಮೂರ್ತಿ, ಕಲ್ಮಳ್ಳಿ ನಟರಾಜು, ಕಿಳನ್‌ಪುರ ಮಾದಪ್ಪ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್ ಸೇರಿದಂತೆ ಇತರರಿದ್ದರು.

ರಾಜ್ಯದಲ್ಲಿ ಕಳೆದ 6 ತಿಂಗಳಲ್ಲಿ ಸುಮಾರು 2.3 ಲಕ್ಷ ನಾಯಿ ಕಡಿತ ಪ್ರಕರಣ ದಾಖಲು, ರೇಬಿಸ್‌ನಿಂದ 19 ಮಂದಿ ಸಾವು



ಬೆಂಗಳೂರು, ಜು.20– ಕಳೆದ ಆರು ತಿಂಗಳಲ್ಲಿ ರಾಜ್ಯದಲ್ಲಿ 2.3 ಲಕ್ಷ ನಾಯಿ ಕಡಿತ ಪ್ರಕರಣಗಳು ದಾಖಲಾಗಿದ್ದು, ರೇಬಿಸ್‌ನಿಂದ 19 ಮಂದಿ ಸಾವನ್ನಪ್ಪಿರುವುದಾಗಿ ವರದಿಯಾಗಿದೆ. ಈ ಸಂಬಂಧ ಅಧಿಕೃತ ಮಾಹಿತಿ ಬಿಡುಗಡೆಯಾಗಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಪ್ರಕರಣಗಳ ಸಂಖ್ಯೆಯಲ್ಲಿ ತೀವ್ರ ಹೆಚ್ಚಳವಾಗಿದೆ. 2024ರಲ್ಲಿ 3.6 ಲಕ್ಷ ನಾಯಿ ಕಡಿತ ಪ್ರಕರಣಗಳು ಮತ್ತು 42 ರೇಬಿಸ್ ನಿಂದ ಸಾವಿನ ಪ್ರಕರಣ ವರದಿಯಾಗಿತ್ತು.

ರಾಜ್ಯ ಆರೋಗ್ಯ ಇಲಾಖೆಯ ಸಮಗ್ರ ರೋಗ ಕಣ್ಗಾವಲು ಕಾರ್ಯಕ್ರಮದ ಮಾಹಿತಿ ಪ್ರಕಾರ, ರಾಜ್ಯದಲ್ಲಿ ಈ ವರ್ಷದ ಜನವರಿ 1 ಮತ್ತು ಜೂನ್ 30ರ ನಡುವೆ 2,31, 091 ನಾಯಿ ಕಡಿತ ಪ್ರಕರಣಗಳು ಹಾಗೂ 19 ರೇಬಿಸ್ ಸಾವಿನ ಪ್ರಕರಣ ದಾಖಲಾಗಿದೆ.

ಕಳೆದ ವರ್ಷ ಇದೇ ಅವಧಿಯಲ್ಲಿ 1,69,672 ನಾಯಿ ಕಡಿತ ಪ್ರಕರಣಗಳು, 18 ರೇಬಿಸ್ ಸಾವು ಪ್ರಕರಣ ದಾಖಲಾಗಿತ್ತು. 2023ರ ಇದೇ ಅವಧಿಗೆ ಹೋಲಿಸಿದರೆ ನಾಯಿ ಕಡಿತ ಪ್ರಕರಣಗಳು ಶೇ. 36.20 ರಷ್ಟು ಹೆಚ್ಚಾಗಿರುವುದು ಮಾಹಿತಿಯಿಂದ ತಿಳಿದುಬರುತ್ತದೆ.

ಇದೇ ವಾರ ಹುಬ್ಬಳ್ಳಿಯಲ್ಲಿ ಬೀದಿನಾಯಿಗಳು ಮೂರು ವರ್ಷದ ಬಾಲಕಿ ಮೇಲೆ ದಾಳಿ ಮಾಡಿ ಎಳೆದಾಡಿದ್ದ ವಿಡಿಯೋ ವೈರಲ್ ಆಗಿತ್ತು. ಪರಿಸ್ಥಿತಿ ನಿಯಂತ್ರಣಕ್ಕೆ ಬರುತ್ತಿಲ್ಲ. ನಿಖರ ವರದಿಯಿಂದಾಗಿ ಈಗ ಹೆಚ್ಚಿನ ಸಂಖ್ಯೆಯ ಪ್ರಕರಣಗಳು ಕಂಡುಬರುತ್ತಿವೆ. ಹಿಂದೆಯೂ ಕೂಡಾ ಇದೇ ರೀತಿಯ ಘಟನೆಗಳು ನಡೆದಿತ್ತು. ಆದರೆ ನಿಖರವಾಗಿ ವರದಿಯಾಗುತ್ತಿರಲಿಲ್ಲ. ಈಗ ಉತ್ತಮವಾಗಿ ವರದಿಯಾಗುತ್ತಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹರ್ಷಗುಪ್ತ ಹೇಳಿದ್ದಾರೆ.

ಡಾ.ರಾಜ್, ಎಸ್‌ಪಿಬಿ ಸ್ಮರಣಾರ್ಥ ಗೀತ್ ಸಂಗಮ್ ಕಾರ್ಯಕ್ರಮ

ಜಗನ್ಮೋಹನ ಅರಮನೆಯಲ್ಲಿ ಸುಮಧುರ ಕನ್ನಡ ಪ್ರಣಯ ಗೀತೆಗಳ ಸಂಗಮ



ಜಗನ್ಮೋಹನ ಅರಮನೆಯಲ್ಲಿ ಗೀತ್ ಸಂಗಮ್ ಕಾರ್ಯಕ್ರಮದಲ್ಲಿ ಗಣ್ಯರೊಂದಿಗೆ ಗಾಯಕರು.

ಮೈಸೂರು, ಜು.20– ಡಾ.ರಾಜಕುಮಾರ್ ಹಾಗೂ ಎಸ್.ಪಿ. ಬಾಲಸುಬ್ರಮಣ್ಯಂ ಸ್ಮರಣಾರ್ಥ, ಜಿ.ಕವಿತಾ ಕಾಮತ್ ಸಾರಥ್ಯದಲ್ಲಿ ಗೀತ್ ಸಂಗಮ ತಂಡದವರಿಂದ ಎಂದು ಮರೆಯಲಾರದ ಆಯ್ದ ಕನ್ನಡ ಪ್ರಣಯ ಗೀತೆಗಳ ಮಧುರ ಸಂಗಮ ಕಾರ್ಯಕ್ರಮ ನಗರದ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಜರುಗಿತು.

ಗಾಯಕರಾದ ಕವಿತಾ ಕಾಮತ್, ನಿತ್ಯಾನಂದ ಕಾಮತ್, ಡಾ .ಸುರೇಂದ್ರನ್, ಡಾ. ರವೀಂದ್ರ ಕುಮಾರ್, ಡಾ . ಭರತ್ ರಾಜ್, ಚಂದ್ರಶೇಖರ್, ಡಾ .ಭಾರತಿ, ಜಯಲಕ್ಷ್ಮಿ ನಾಯ್ಡು ಅನ್ನು ಮೂರ್ನಾಡು, ಹಾಗೂ ವಿನಾಯಕ ಭಟ್ ಸಂಗೀತ ರಸದೌತಣ ನೀಡಿದರು. ಎಂ.ಆರ್. ಅನಿತಾ. ಕಾರ್ಯಕ್ರಮ ನಿರೂಪಿಸಿದರು.

ಉದ್ಯಮಿ ಎಂ. ಜಗನ್ನಾಥ ಶೆಣೈ, ಕುಸುಮಾ ಶೆಣೈ, ವಸುಮತಿ ಶೆಣೈ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಚಲನಚಿತ್ರ ನಿರ್ಮಾಪಕ ಎಸ್.ಎ. ಶ್ರೀನಿವಾಸ್, ಆದರ್ಶ ಸೇವಾ ಸಂಘದ ಅಧ್ಯಕ್ಷ ಎಸ್. ನಾಗರಾಜ್, ಜಗದಾಂಬ ಮುಖ್ಯ ಅತಿಥಿಗಳಾಗಿದ್ದರು. ಇದೇ ಸಂದರ್ಭದಲ್ಲಿ ವೈದ್ಯರ ದಿನಾಚರಣೆ ಅಂಗವಾಗಿ ಡಾ.ಸುರೇಂದ್ರನ್, ಡಾ.ರವೀಂದ್ರ ಕುಮಾರ್, ಡಾ. ಭರತ್ ರಾಜ್. ಡಾ. ಭಾರತಿ ಹಾಗೂ ಶಿಕ್ಷಕಿ ಎಂ.ಆರ್. ಅನಿತಾ ಅವರನ್ನು ಸನ್ಮಾನಿಸಲಾಯಿತು.

ಇತ್ತೀಚೆಗೆ ನಿಧನರಾದ ಹಿರಿಯ ಪತ್ರಿಕೋದ್ಯಮಿ ಕೆ.ಬಿ. ಗಣಪತಿ, ಕನ್ನಡದ ಮೇರುನಟಿ ಬಿ. ಸರೋಜಾದೇವಿ, ಉದ್ಯಮಿ ಹಾಗೂ ಕಲಾಪೋಷಕ ರವಿ ಗೌಡರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಕೂಡಿ ಬಾಳೋಣ....!

ಕೂಡಿ ಬಾಳೋಣ, ಮುಂಜಾನೆ ಮೂಡಿದ ಹಾಗೆ, ಕೇಳದೆ ನಿಮಗೀಗ, ಶಿಲೆಗಳು ಸಂಗೀತವ ಹಾಡಿದೆ, ಏಕೋ ಏನೋ ಈ ನನ್ನ ಮನವು, ಜೊತೆಯಲಿ ಜೊತೆ ಜೊತೆಯಲಿ, ಜಗವೇ ಒಂದು ರಣರಂಗ, ಇಂದು ಆನಂದ ನಾ ತಾಳಲಾರೆ, ಟುವ್ವಿ ಟುವ್ವಿ ಎಂದು ಹಾಡುವ, ಚೆಲುವೆ ಓ ಚೆಲುವೆ, ಯಾವ ಕವಿಯೂ ಬರೆಯಲಾರ, ಗೆಳತಿ ಬಾರದು ಇಂಥ ಸಮಯ, ಕಲ್ಲೇಟಗಿಂತ ನಿನ್ನ ಕಣ್ಣೇಟು ಜೋರಾಗಿ, ಕನಸಲು ನೀನೆ ಮನಸಲು ನೀನೆ, ತಾರಾ ಓ ತಾರಾ, ಪ್ರೇಮದ ಹಾಡಿಗೆ, ಎಂದೆಂದೂ ನಿನ್ನನು ಮರೆತು, ಪ್ರೇಮ ಬರಹ ಕೋಟಿ ತರಹ, ಈ ಸಂಭಾಷಣೆ, ಚಂದಿರ ತಂದ ಹುಣ್ಣಿಮೆ ರಾತ್ರಿ, ಚೆಲುವ ಚೆಲುವ ಬೇಲೂರ ಚೆನ್ನ ಚೆಲುವ, ಆ ಮೋಡ ಬಾನಲ್ಲಿ, ಆಸೆಯ ಭಾವ, ಮೊದಲನೆ ದಿನವೆ ಒಲಿದೆ, ಕಣ್ಣಂಚಿನ ಈ ಮಾತಲಿ.... ಗೀತೆಗಳನ್ನು ಹಾಡಿ ಸಭಿಕರನ್ನು ರಂಜಿಸಿದರು.

ಬಸವ ಬಳಗ ಸೇವಾ ಟ್ರಸ್ಟ್‌ನಿಂದ ಬಸವ ಜಯಂತಿ



ಬಸವ ಬಳಗ ಸೇವಾ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಮೈಸೂರು, ಜು.20– ನಗರದ ಬೋಗಾದಿ ಬಡಾವಣೆಯ ಬಸವ ಬಳಗ ಸೇವಾ ಟ್ರಸ್ಟ್ ವತಿಯಿಂದ ಬಸವೇಶ್ವರ ನಗರದ ಸಮುದಾಯ ಭವನದಲ್ಲಿ ಬಸವ ಜಯಂತಿ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಭಾನುವಾರ ಏರ್ಪಡಿಸಲಾಗಿತ್ತು.

ತಿ.ನರಸೀಪುರ ತಾಲೂಕು ವಾಟಾಳು ಶ್ರೀ ಸೂರ್ಯ ಸಿಂಹಾಸನ ಮಠದ ಶ್ರೀ ಸಿದ್ಧಲಿಂಗಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ಸಮಾರಂಭದಲ್ಲಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ 263ನೇ ರ‍್ಯಾಂಕ್ ಪಡೆದಿರುವ ಸಾಲಿಗ್ರಾಮ ತಾಲೂಕು ಅಂಕನಹಳ್ಳಿ ಗ್ರಾಮದ ರೈತ ಕುಟುಂಬದ ಎ.ಸಿ.ಪ್ರೀತಿ ಹಾಗೂ 'ಎಂ ಮ್ಯೂಸಿಕ್ ಚಿನ್ನದ ಪದಕ' ವಿಜೇತೆಯಾದ ಮೈಸೂರು ವಿಜಯನಗರದ ನಿವಾಸಿ ಜೆ.ಆರ್.ಅನುಷಾ ನಟೇಶ್ ಅವರನ್ನು ಅಭಿನಂದಿಸಲಾಯಿತು. ಇದೇ ವೇಳೆ 2024–25 ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 21 ಮಂದಿ ಪ್ರತಿಭಾನ್ವಿತರನ್ನು ಪುರಸ್ಕರಿಸಿ, ಅಭಿನಂದಿಸಲಾಯಿತು.

ಪತ್ರಕರ್ತ ಜಯಶಂಕರ್ ಬದನಗುಪ್ಪೆ ಮಾತನಾಡಿ, ಸಮಾಜದ ಸ್ವಾಸ್ಥ್ಯ ಕದಡುವ ಷಡ್ಯಂತ್ರದ ಬಗ್ಗೆ ಯುವ ಜನತೆ ಜಾಗೃತವಾಗಿರಬೇಕು. ವಿದ್ಯಾರ್ಥಿ ದಿಸೆಯಿಂದಲೇ ಪರಿಸರ ಪ್ರಜ್ಞೆ ಬೆಳೆಸಿಕೊಳ್ಳಬೇಕು. ಎಲ್ಲ ವರ್ಗದ ಮಕ್ಕಳಿಗೂ ಉನ್ನತ ಶಿಕ್ಷಣದೊಂದಿಗೆ ಸಾಧನೆ ಮಾಡಲು ಸಾಕಷ್ಟು ಅವಕಾಶಗಳಿವೆ. ಮಠ–ಮಾನ್ಯಗಳು ಸರ್ವ ಜನಾಂಗದವರಿಗೂ ಶಿಕ್ಷಣ ಕಲ್ಪಿಸುತ್ತಿವೆ. ಅಕ್ಷರ ಹಾಗೂ ಅನ್ನ ದಾಸೋಹದ ಜೊತೆಗೆ ವಸತಿ ಸೌಲಭ್ಯ ಕಲ್ಪಿಸಿ, ಸಾಮರಸ್ಯದಿಂದ ಶಿಕ್ಷಣ ಪಡೆಯುವ ವ್ಯವಸ್ಥೆ ರೂಪಿಸಿವೆ ಎಂದು ಹೇಳಿದರು.

ಶರಣು ವಿಶ್ವ ವಚನ ವಚನ ಫೌಂಡೇಶನ್ ಸಂಸ್ಥಾಪಕ ವಚನ ಕುಮಾರಸ್ವಾಮಿ, 'ಶರಣ ಪರಂಪರೆ ಮತ್ತು ವಚನ ಸಾಹಿತ್ಯ' ಕುರಿತು ಉಪನ್ಯಾಸ ನೀಡಿದರು. ಜೆ.ಆರ್. ಅನುಷಾ ನಟೇಶ್ ತಮ್ಮ ತಂಡದೊಂದಿಗೆ ವಚನ ಗಾಯನ ನಡೆಸಿಕೊಟ್ಟರು. ಬಸವ ಬಳಗ ಸೇವಾ ಟ್ರಸ್ಟ್‌ನ ಅಧ್ಯಕ್ಷ ಬಸವರಾಜು, ಉಪನ್ಯಾಸಕ ಮೂಗೂರು ನಟರಾಜ್, ಟ್ರಸ್ಟ್‌ನ ಪದಾಧಿಕಾರಿಗಳು, ಸದಸ್ಯರು, ವಿದ್ಯಾರ್ಥಿಗಳು ಹಾಗೂ ಪೋಷಕರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಸರ್ಕಾರಿ ಶಾಲೆಯಲ್ಲಿ ಓದಿದವರು ತಾವು ಓದಿದ ಶಾಲೆಗೆ ನೆರವಾಗಬೇಕು

● ಶಾಸಕ ಟಿ.ಎಸ್.ಶ್ರೀವತ್ಸ ಕಿವಿಮಾತು ● ಗುತ್ತಿಗೆದಾರರ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ



ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್ ವತಿಯಿಂದ ಗುತ್ತಿಗೆದಾರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಮೈಸೂರು, ಜು.20(ಎಸ್‌ಪಿಎನ್)– ಸರ್ಕಾರಿ ಶಾಲೆಯಲ್ಲಿ ಓದಿದ ಪ್ರತಿಭಾವಂತ ವಿದ್ಯಾರ್ಥಿಗಳು, ಮುಂದೆ ಉನ್ನತ ಹುದ್ದೆ ಪಡೆದ ನಂತರ ತಾವು ಓದಿದ ಸರ್ಕಾರಿ ಶಾಲೆಗಳಿಗೆ ಮೂಲಸೌಕರ್ಯ ಕಲ್ಪಿಸಲು ಮುಂದಾಗಬೇಕು ಎಂದು ಶಾಸಕ ಟಿ.ಎಸ್.ಶ್ರೀವತ್ಸ ಮನವಿ ಮಾಡಿದರು.

ಮೈಸೂರು ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್ ವತಿಯಿಂದ ಗುತ್ತಿಗೆದಾರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಮಾತನಾಡಿದರು.

60 ವರ್ಷಗಳ ಹಿಂದೆ ಮೈಸೂರು ನಂಜುಮಳಿಗೆಯಲ್ಲಿರುವ ಸರ್ಕಾರಿ ಶಾಲೆಯಲ್ಲಿ ಓದಿದ ಪ್ರತಿಭಾವಂತ ವಿದ್ಯಾರ್ಥಿಯೊಬ್ಬರು ವೈದ್ಯಕೀಯ ಶಿಕ್ಷಣ ಮುಗಿಸಿ ಇದೀಗ ಅಮೆರಿಕಾದಲ್ಲಿ ನೆಲೆಸಿದ್ದಾರೆ. ಅವರು, ತಾವು ಓದಿದ ನಂಜುಮಳಿಗೆಯ ಸರ್ಕಾರಿ ಪ್ರಾಥಮಿಕ ಶಾಲೆಯ ಸ್ಥಿತಿ–ಗತಿ ಕುರಿತು ಪರಿಚಯಸ್ಥರಿಂದ ಮಾಹಿತಿ ಪಡೆದು ಕಟ್ಟಡ ಶಿಥಿಲವಾಗಿರುವುದಕ್ಕೆ ಮರುಗಿದ್ದಾರೆ. ನಂತರ ಆ ಶಾಲೆಯ ನವೀಕರಣಕ್ಕೆ 2 ಕೋಟಿ ರೂ. ಹಣ ದೇಣಿಗೆ ನೀಡಿರುವ ವಿಷಯ ತಿಳಿಸಿದರಲ್ಲದೆ, ಸರ್ಕಾರಿ ಶಾಲೆಯಲ್ಲಿ ಓದಿದ ವಿದ್ಯಾರ್ಥಿಗಳು, ಉನ್ನತ ಹುದ್ದೆ ಪಡೆದ ನಂತರ ಸರ್ಕಾರಿ ಶಾಲೆಗಳ ಸುಧಾರಣೆಗೆ ದೇಣಿಗೆ ನೀಡಿ, ಶಾಲೆಯ ಋಣ ತೀರಿಸುವಂತೆ ಕಿವಿಮಾತು ಹೇಳಿದರು.

ಪ್ರತಿಭಾವಂತ ಮಕ್ಕಳನ್ನು ಗುರುತಿಸುವುದು ನಮ್ಮೆಲ್ಲರ ಜವಾಬ್ದಾರಿ. ಈ ಬಾರಿ ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದ ಹಲವರಲ್ಲಿ 625ಕ್ಕೆ 620ಕ್ಕೂ ಹೆಚ್ಚು ಅಂಕಗಳಿಸಿದ್ದರು. ಇದರಲ್ಲಿ ಸರ್ಕಾರಿ ಶಾಲೆಯಲ್ಲಿ ಓದಿದ 39 ಮಂದಿ ವಿದ್ಯಾರ್ಥಿಗಳಿದ್ದಾರೆ. ಈ ಸಂಖ್ಯೆ ದುಪ್ಪಟ್ಟು ಆಗಬೇಕು ಎಂದ ಶಾಸಕರು, ನಾನು ಕಳೆದ ತಿಂಗಳು ಕಾರ್ಯ ನಿಮಿತ್ತ ಕುರುಬಾರಹಳ್ಳಿ ಪ್ರಥಮ ದರ್ಜೆ ಕಾಲೇಜಿಗೆ ಭೇಟಿ ನೀಡಿದ್ದೆ. ಆ ವೇಳೆ 1200ಕ್ಕೂ ಅಧಿಕ ವಿದ್ಯಾರ್ಥಿಗಳು ಕಾಲೇಜಿಗೆ ಪ್ರವೇಶಾತಿ ಪಡೆದಿದ್ದರು. ಇದನ್ನೆಲ್ಲಾ ಗಮನಿಸಿದರೆ ಸರ್ಕಾರಿ ಕಾಲೇಜುಗಳಲ್ಲಿ ಶೈಕ್ಷಣಿಕ ಗುಣಮಟ್ಟ ಸುಧಾರಿಸುತ್ತಿರುವ ಲಕ್ಷಣ ಎಂದು ಹರ್ಷ ವ್ಯಕ್ತಪಡಿಸಿದರಲ್ಲದೆ, ಮೈಸೂರಿನ ಮೂರ್ನಾಲ್ಕು ಮಕ್ಕಳು ತಮ್ಮ ಪ್ರತಿಭೆಯನ್ನು ವಿವಿಧ ವೇದಿಕೆಯಲ್ಲಿ ಪ್ರದರ್ಶಿಸಿ ವಿಶ್ವ ದಾಖಲೆ ನಿರ್ಮಿಸಿದ್ದಾರೆ ಎಂದರು.

> ಸಣ್ಣ–ಮಟ್ಟ ಗುತ್ತಿಗೆದಾರರಿಗೆ ಸರ್ಕಾರದ ವಿವಿಧ ಕಾಮಗಾರಿಗಳ ಟೆಂಡರ್ ಸಿಗದೇ ಜೀವನ ನಿರ್ವಹಣೆ ಕಷ್ಟವಾಗುತ್ತಿದೆ. ಈಗ ಮಾಡಿರುವ ಕೆಲಸಗಳಿಗೆ ವೆಚ್ಚ ಮಾಡಿರುವ ಅನುದಾನ ಬಿಡುಗಡೆಯಾಗುತ್ತಿಲ್ಲ. ಹೊಸ ಕೆಲಸಗಳೂ ಸಿಗುತ್ತಿಲ್ಲ. ಸರ್ಕಾರದಲ್ಲಿ ಸಚಿವರು, ಅಧಿಕಾರಿಗಳ ಪ್ರೀತಿಪಾತ್ರರಾದ ಗುತ್ತಿಗೆದಾರರಿಗೆ ಸರ್ಕಾರಿ ಗುತ್ತಿಗೆ ಕಾಮಗಾರಿ ಸಿಗುತ್ತಿವೆ. ಆ ಕಾಮಗಾರಿಗಳ ಬಿಲ್‌ಗಳು ಕೂಡ ಯಾವುದೇ ಅಡೆ–ತಡೆಯಿಲ್ಲದೆ ಬಿಡುಗಡೆಯಾಗುತ್ತಿದೆ. ಈ ನಡೆಯಿಂದ ನಮಗೆ ತುಂಬಾ ಬೇಸರವಾಗುತ್ತಿದೆ. ಹಾಗಾಗಿ ವಿವಿಧ ಸಮುದಾಯದ ಮುಖಂಡರು ಮಧ್ಯಪ್ರವೇಶಿಸಿ, 10ರಿಂದ 20 ಲಕ್ಷದೊಳಗಿನ ಕಾಮಗಾರಿಗಳಾದರೂ ಸಣ್ಣಮಟ್ಟ ಗುತ್ತಿಗೆದಾರರಿಗೆ ಸಿಗುವಂತಾಗಬೇಕು. ಈ ಕುರಿತು ಸರ್ಕಾರದ ಗಮನ ಸೆಳೆಯಬೇಕು. **–ಮಹಾಲಿಂಗಂ, ಅಧ್ಯಕ್ಷರು, ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ.**

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ: ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಾದ, ಕೆ.ಎನ್.ಸೃಜನ್‌ಕುಮಾರ್, ಅಮೃತ ಎಂ.ಪಟೇಲ್, ಎನ್.ತನಿಷ, ಆರ್.ಬೆನಿಷ, ಸಿ.ಅರ್ಜುನ್, ಪಿ.ಪ್ರಾರ್ಥನೆ, ಎಸ್.ಆರ್.ರಾಹುಲ್ ರಾಜ್, ಎಸ್.ಮೇಘಶ್ರೀ, ಬಿ.ಗಗನ್‌ಗೌಡ, ನಿಯತಿ ನಿರಂಜನ್, ಎಚ್.ಜೆ.ಬ್ರಾಹ್ಮಣಿ ಮಿತ್ರ, ಧನುಷ್ ಬಿ.ಗೌಡ, ರವಿಶಂಕರ್ ವೈ.ಎಸ್.ರವಿಶಂಕರ್, ಭಾನು ವಿ.ಗೋಪಾಲ್ ಸನ್ಮಾನಿಸಲಾಯಿತು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಪಿ.ಸಾಯಿ ದೀಕ್ಷಿತ, ವೈ.ದಯಾಶಂಕರ್, ಕೆ.ಎನ್.ಧನುಶ್ರೀ, ಗಾನವಿ, ಶಂಕರ್ ದೀಕ್ಷಿತ್, ಬಿ.ಶ್ರೀವಲ್ಲಿ, ಎಸ್.ಕಾವ್ಯಶ್ರೀ, ಆರ್.ಧ್ಯಾನ್, ಖುಷಿ ಎಂ.ಪಟೇಲ್, ಜಿ.ನಿಹಾರಿಕ, ಬಿ.ಎಂ.ಮಂಜುಳ, ಭರತ್, ಜೆ.ಪ್ರಜ್ಞಾ, ಎಚ್.ಜೆ.ನಿರೀಕ್ಷಾ ಮಿತ್ರ, ಜಿ.ಎಂ.ಲೋಹಿತ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಈ ವೇಳೆ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಅವರಿಗೆ ಗುರುವಂದನೆ ಸಲ್ಲಿಸಲಾಯಿತು. ಶ್ರೀರಂಗಪಟ್ಟಣ ಪರಿವರ್ತನಾ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಆರ್.ಎ. ಚೇತನ್‌ರಾಂ, ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ಉಪಾಧ್ಯಕ್ಷ ವಿ.ಕುಮಾರ್, ವಿಶೇಷ ಸಲಹೆಗಾರರಾದ ಬಿ.ಪುಟ್ಟಸ್ವಾಮಿ, ಶ್ರೀ ಮಾದೇಗೌಡ, ಮುಖ್ಯ ಸಿಇಓ ಸಿ.ವಸಂತ್‌ಕುಮಾರಿ, ಆಡಳಿತ ಮಂಡಳಿ ನಿರ್ದೇಶಕರಾದ ಸಿ.ಡಿ.ಕೃಷ್ಣ, ಕೆ.ರವಿ, ಕೆ.ವಿ.ಚಿನ್ನಯ್ಯ, ದೇವೇಂದ್ರ, ಕೆ.ನಾಗರಾಜು, ಕೆ.ದಶರಥ, ಹೆಚ್.ಎಂ.ಪರಶಿವಮೂರ್ತಿ, ರಾಜೇಗೌಡ, ಎಂ.ಎಸ್.ರೇವಣ್ಣ, ಜಿ.ಅಶೋಕ್, ಸಿ.ವೆಂಕಟಪ್ಪ, ಎ.ಕುಮಾರ್, ಜಯಲಕ್ಷ್ಮಿ, ಟಿ.ಅನುಸೂಯ, ರೇವನಾಯಕ ಇನ್ನಿತರರು ಉಪಸ್ಥಿತರಿದ್ದರು.

IN THE COURT OF THE HON'BLE I ADDL. SENIOR CIVIL JUDGE AND C.J.M. AT MYSURU

R.A.No. 64/2022

Appellants: Mahadevamma @ Madamma and another

V/S

Respondents: Bhagyamma and others

1) Bhagyamma, W/o Late. Nanjunda, Aged about 58 years,
2) Rajeshwari D/o Late Nanjunda, Aged about 40 years,
3) Manjula, D/o Late. Nanjunda, Aged about 38 years,
4) Ravi S/o Late Nanjunda, Aged about 36 years,
5) Srinivasa, S/o Late. Nanjunda, Aged about 35 years,

All are R/at # 384, 8th Cross, Kyathamaranahalli, Harishchandra Ghat Road, Mysuru.

PAPER PUBLICATION

Whereas a Regular Appeal in R.A. No.64/2022 has been instituted by the Appellants against the Respondents on the file of the learned I Addl. Senior Civil Judge and CJM Court at Mysuru. It is hereby served the summons/notice through maper publication for the appearance of the Respondent No.1 to 5 before the Court on 7-8-2025 at 11-00 A.M. either in person or through their Advocate/s to answer the said appeal. Take notice that, in default of your appearance on the day before mentioned, the appeal will be heard and determined in your absence.

Given under my hand and the seal of the court, this 20th day of June 2025.

By order of the Court

Advocates for Appellants
Sd/- M. K. NARASIMHACHAR M.A., LL.B
ADVOCATE, Enroll No. 1095/2014.
#60, L.I.G.-2, KHB Colony, Kalyanagirinagar Near Rajkumar Road (SBI Bank), Mysore-570 019.
Mob: 93421 85561

ನಕ್ಕರೆ ಅದೇ ಸ್ವರ್ಗ

ಹೆಂಡತಿ : ಡಾಕ್ಟರ್ ಹತ್ತಿರ ಹೋಗಿದ್ರಾ, ಏನಂದ್ರು?
ಗಂಡ : ಏನಿಲ್ಲ, ಔಷಧಿ ಕೊಟ್ಟಿದ್ದಾರೆ.
ಹೆಂಡತಿ : ಸಮಸ್ಯೆಗಳನ್ನೆಲ್ಲ ಹೇಳಿದ್ರಿ ತಾನೆ?
ಗಂಡ : ಇಲ್ಲ... ನಿನ್ನ ಬಗ್ಗೆ ಏನೂ ಹೇಳಲಿಲ್ಲ!

ಮೈಸೂರು ಮಿತ್ರ

ಸೋಮವಾರ, 21 ಜುಲೈ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........


ನಾವು ನಮ್ಮನ್ನು ಹುರಿದುಂಬಿಸುವ ವಿಷಯಕ್ಕಿಂತಲೂ ನಮ್ಮನ್ನು ಭಯಭೀತವಾಗಿಸುವ ವಿಷಯದ ಬಗ್ಗೆಯೇ ಹೆಚ್ಚು ಯೋಚಿಸುತ್ತೇವೆ. ಇದೇ ನಮ್ಮನ್ನು ಹಿಂದೆ ಉಳಿಸುತ್ತದೆ. –ಅನಾಮಿಕ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹುರುಳಿ ಮಾರೋನ ಹತ್ತಿರ ಕುದುರೆ ಬೆಲೆ ಕೇಳಿದಂತೆ

ನಿಮ್ಮ ಪತ್ರಗಳು

ಕೆಬಿಜಿಯವರಿಗೆ ನುಡಿ ನಮನ

■ ಮೈಸೂರಿನ ಪಾಲಿಗೆ ಭಾಗ್ಯವೇ ಆಗಿದ್ದ ಕೆ.ಬಿ.ಗಣಪತಿ ಅವರಿಗೆ ಅಕ್ಷರ ನಮನ!



ಮಾನ್ಯರೆ,

ಡಾ.ಕೆ.ಬಿ.ಗಣಪತಿ ಮೈಸೂರಿನ ಪ್ರತಿಷ್ಠಿತ ಸೋದರ ದಿನ ಪತ್ರಿಕೆಗಳಾದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳನ್ನು ಸ್ಥಾಪಿಸಿ, ಬೆಳೆಸಿದ ನಮ್ಮ ನಡುವಿನ ಅಸಾಮಾನ್ಯ ಪತ್ರಕರ್ತ.

ನಮ್ಮ ಮೈಸೂರಿನ ಹೆಮ್ಮೆಯ ರಾಯಭಾರಿಯಾಗಿ ಸದಾ ಜನಮಾನಸದಲ್ಲಿ ಕಂಗೊಳಿಸುತ್ತಿದ್ದ ಕೆ.ಬಿ.ಗಣಪತಿ ಅಕಾಲಿಕ ನಿಧನ ಪತ್ರಿಕಾರಂಗ ಹಾಗೂ ಸಾಹಿತ್ಯ ವಲಯಕ್ಕೆ ತುಂಬಲಾರದ ನಷ್ಟವಾಗಿದೆ. ಕೆಬಿಜಿ ಅವರು ಕೇವಲ ಪತ್ರಿಕಾರಂಗವಲ್ಲದೆ ನಾಡಿನ ಪ್ರಸಿದ್ಧ ಕಾದಂಬರಿಕಾರ, ಲೇಖಕರಾಗಿ ಚಿರಪರಿಚಿತರು. ಇವರು ತಮ್ಮ ಪ್ರಕಟಿತ ಪುಸ್ತಕಗಳ ಅಂಕಣ, ಲೇಖನಗಳಲ್ಲಿ ಮೈಸೂರಿನ ಇತಿಹಾಸ ಕುರಿತು ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಸಮಗ್ರ ಮೈಸೂರು ಬಗ್ಗೆ ಎಳೆ ಎಳೆಯಾಗಿ ಅಮೂಲಾಗ್ರ ಮಾಹಿತಿ ನೀಡಿದ್ದಾರೆ.

'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳು ರಾಷ್ಟ್ರೀಯತೆಯನ್ನು ಪ್ರತಿಪಾದಿಸುತ ಮೈಸೂರು ಭಾಗದಲ್ಲಿ ಬೃಹತ್ತಾಗಿ ಬೆಳೆದವು. ಜೊತೆ ಜೊತೆಗೆ ವಾಸ್ತವತೆಯ, ಭಾವೈಕ್ಯತೆ ಸಂಗಮ, ಧಾರ್ಮಿಕತೆ ಚೆಲ್ಲುವ ಸ್ಪಷ್ಟ ಸಂಗತಿಗಳು ಕನ್ನಡ ಸಾಹಿತ್ಯ ನಾಡು ನುಡಿಗಾಗಿ ಟೊಂಕ ಕಟ್ಟಿ ದೇಶ ಕಟ್ಟುವ ಕಾಯಕಂಯೋಗಿಯಾಗಿ ರಾರಾಜಿಸುತ್ತ ತಮ್ಮ ನಿಷ್ಠೆ ತೋರಿಸಿ ಸಮಾಜಸೇವೆಗಾಗಿ ಮುಡಿಪಾಗಿಟ್ಟಿದ್ದು ಅನುಕರಣೀಯ.!

ಇವರ ಚಿಂತನೆಗಳು ಫಲಪ್ರದ ಎನ್ನಬಹುದು. ಅದರ ಮುಂದುವರಿದ ಭಾಗವಾಗಿ ರೈತ, ವಿದ್ಯಾರ್ಥಿಗಳ ಹೋರಾಟ, ದಲಿತಪರ ಸಂಘಟನೆಗಳ ಚಳುವಳಿ ಮುನ್ನೆಲೆಗೆ ಬರಲು ಮೈಸೂರಿನ ಪ್ರಾದೇಶಿಕ ಅಸ್ಮಿತೆ ಉಳಿಸುವ ನಿಟ್ಟಿನಲ್ಲಿ ಸ್ಥಳೀಯ ಮಟ್ಟದಲ್ಲಿ ಪ್ರಾದೇಶಿಕ ದಿನಪತ್ರಿಕೆಯೊಂದು ಇಡೀ ಏಷ್ಯಾ ಖಂಡದಲ್ಲೇ ಅತಿ ಹೆಚ್ಚು ಪ್ರಸರಣವನ್ನು ಹೊಂದುವ ಮೂಲಕ ಗಮನ ಸೆಳೆದ ಏಕೈಕ ಪತ್ರಿಕೆಯಿದು.

ಕೆ.ಬಿ.ಗಣಪತಿ ಅವರ ಅಪಾರ ಪ್ರಾಪಂಚಿಕ, ರಾಜಕೀಯ ಜ್ಞಾನ, ನೇರ ನಿಷ್ಠುರವಾದಿ ಲೇಖನಗಳು, ಅಧಿಕಾರದಲ್ಲಿ ಆಳ್ವಿಕೆ ನಡೆಸುವ ಸರ್ಕಾರಕ್ಕೆ ಸದಾ ಎಚ್ಚರಿಕೆಯ ಗಂಟೆಯಾಗಿ ಹಾಗೂ ಸಮಾಜದ ಮೇಲೆ ಓದುಗರು ಹಾಗೂ ಯುವ ಪೀಳಿಗೆಗಳ ಮೇಲೆ ಅಗಾಧವಾದ ಪರಿಣಾಮ ಬೀರುವ ಮುಖೇನ ಕೆಬಿಜಿ ಅಕ್ಷರ ಮಾಂತ್ರಿಕರಾಗಿ ಕೆಲಸ ಮಾಡಿದ್ದು ಈಗ ಅಚ್ಚಳಿಯದೆ ಉಳಿಯುವ ಇತಿಹಾಸ. ಬಹುಶಃ ಆಳ್ವಿಕೆ ನಡೆಸುವ ಸರ್ಕಾರ, ಅದರ ಸಚಿವರು ಉನ್ನತ ಮಟ್ಟದ ಅಧಿಕಾರಿಗಳಿಗಿಂತ 'ಭವಿಷ್ಯದ ಮೈಸೂರು ನಗರದ ಅಭಿವೃದ್ಧಿ ಮತ್ತು ಬೆಳವಣಿಗೆಗೆ ಕೆ.ಬಿ.ಗಣಪತಿ ಇವರ ದೂರದೃಷ್ಟಿತ್ವದ ಕನಸು ಮುಂಚೂಣಿಯಲ್ಲಿ ನಿಲ್ಲುತ್ತಿತ್ತು.' ಎಂದರೆ ಅತಿಶಯೋಕ್ತಿ ಆಗಲಾರದು.

ಸಾಂಸ್ಕೃತಿಕ ನಗರಿಯಲ್ಲಿ ಎರಡು ಕಣ್ಣುಗಳಂತೆ ಇರುವ ಬೆಳಿಗ್ಗೆ ಎದ್ದೊಡನೆ 'ಮೈಸೂರು ಮಿತ್ರ', ಸಾಯಂಕಾಲ ಆದೊಡನೆ 'ಸ್ಟಾರ್ ಆಫ್ ಮೈಸೂರ್' ಕಳೆದ ಐದು ದಶಕಗಳಿಂದ ಜನಜನಿತವಾಗಿ ಜನರ ಮನೆ ಮನದಲ್ಲಿ ಹಾಸು ಹೊಕ್ಕಾಗಿದೆ. ಬಹುಶಃ ಮೈಸೂರು ಇನ್ನಷ್ಟು ದೊಡ್ಡ ಮಟ್ಟದಲ್ಲಿ ಬೆಳವಣಿಗೆ ಅಭಿವೃದ್ಧಿಯಾಗಲು ಈ ಊರಿನಲ್ಲಿ ಹಾಗೂ ಸ್ಥಳೀಯ ಗ್ರಾಮೀಣ ಭಾಗದಲ್ಲಿರುವ ಕುಂದು ಕೊರತೆಗಳು ಸಂಬಂಧಿಸಿದಂತೆ ಈ ಭಾಗದ ಜನರ ಪ್ರಮುಖ ಧ್ವನಿಯಾಗಿ ಈ ಪತ್ರಿಕೆ ಪ್ರಮುಖ ಪಾತ್ರ ವಹಿಸುತ್ತಿತ್ತು.

ರಾಜ್ಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಪ್ರಮುಖ ದಿನ ನಿತ್ಯ ಸಂಗತಿಗಳು , ವಿಚಾರ ಮಂಥನಗಳು, ಈ ಎರಡು ದಿನ ಪತ್ರಿಕೆಗಳಲ್ಲಿ ಸರಳವಾಗಿ ಆಡು ಭಾಷೆಯಲ್ಲಿ ಸಂಪಾದಕೀಯ ಲೇಖನವಾಗಿ 'ಸ್ಟಾರ್ ಆಫ್ ಮೈಸೂರ್'ನಲ್ಲಿ 'ಅಬ್ರಕಡಬ್ರ', 'ಮೈಸೂರು ಮಿತ್ರ' ಪತ್ರಿಕೆಯಲ್ಲಿ 'ಭೂಮಂತ್ರ' ಪ್ರಕಟಣೆ ಅಪಾರ ಓದುಗರನ್ನು ಸೆಳೆಯುವಲ್ಲಿ ಯಶಸ್ವಿ ಆಗಿದ್ದವು.

ಕೆ.ಬಿ.ಗಣಪತಿ ನಿಜ ಅರ್ಥದಲ್ಲಿ ಸಮಾಜ ಸುಧಾರಣೆಯ ಭಾಗವೇ ಆಗಿದ್ದರು. ಅಕ್ಷರಶಃ ಮೈಸೂರಿನ ಪಾಲಿಗೆ ಭಾಗ್ಯವೇ ಆಗಿ ಹೋಗಿದ್ದರು! ಒಂದು ಪ್ರಾದೇಶಿಕ ಪತ್ರಿಕೆ ರಾಜ್ಯಮಟ್ಟದ ಪತ್ರಿಕೆಗಳಿಗಿಂತ ವಿಭಿನ್ನವಾಗಿ ತನ್ನ ಓದುಗರನ್ನು ಸೆಳೆಯುವಲ್ಲಿ, ಉಳಿಸಿಕೊಳ್ಳುವಲ್ಲಿ ಅತ್ಯಂತ ಯಶಸ್ವಿಯಾಗಿತ್ತು ಎನ್ನುವುದು ನಿರ್ವಿವಾದ.!

ಜನ ಸಾಮಾನ್ಯರಿಗೆ ಅಕ್ಷರ ರೂಪದಲ್ಲಿ ಸೊಗಸಾಗಿ ಅರ್ಥ ವಿವರಣೆ ಕೊಡುತ್ತಿದ್ದ ಕೆಬಿಜಿ ಅವರ ಅಂಕಣದ ರೂಪಕಗಳು. ಇನ್ನೂ ಅವೆಲ್ಲವೂ ಬರೀ ನೆನಪು ಬಹುಶಃ ಬಾಲ್ಯದಿಂದಲೂ ಈ ಪತ್ರಿಕೆಗಳನ್ನು ಓದಿ ಬೆಳೆದ ನನಗೆ ಪತ್ರಿಕೆಯ ಜೊತೆ ಅವಿನಾಭಾವ ಸಂಬಂಧ. ವೈಯಕ್ತಿಕವಾಗಿ ನಮ್ಮ ವ್ಯಕ್ತಿತ್ವ ರೂಪಿಸಿ ಕೊಳ್ಳುವಲ್ಲಿಯು 'ಮೈಸೂರು ಮಿತ್ರ' ಪತ್ರಿಕೆ ತುಂಬಾನೇ ಸಹಕಾರಿಯಾಗಿದೆ.

ಕಳೆದ ಹಲವಾರು ವರ್ಷಗಳಿಂದ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ನಾನು ಬರೆದಂತಹ ಸಾಮಾಜಿಕ ಕಳಕಳಿಯುಳ್ಳ ಸಾಕಷ್ಟು ಬರಹಗಳು 'ನಿಮ್ಮ ಪತ್ರಗಳು' ವಿಭಾಗದಲ್ಲಿ ಪ್ರಕಟ ಆಗಿವೆ. ಅದಕ್ಕೆಲ್ಲ ವಿಶಾಲ ಮನಸ್ಸಿನಿಂದ ಅವಕಾಶ ಮಾಡಿಕೊಟ್ಟಿದ್ದ ಡಾ.ಕೆ.ಬಿ.ಗಣಪತಿ ಅವರ ಸ್ಥಾಪಕ ಸಂಪಾದಕತ್ವದ ಮೈಸೂರು ಮಿತ್ರ ಪತ್ರಿಕೆಯ ವರ್ಗಕ್ಕೆ 'ನಿಮ್ಮ ಪತ್ರಗಳು ಮುಖೇನ' ತುಂಬು ಭಾರದಿಂದ ಈ ಪುಟ್ಟದೊಂದು ಲೇಖನದ ಮೂಲಕ ಅಗಲಿದ ಹಿರಿಯ ಪತ್ರಿಕೋದ್ಯಮಿ ಕೆಬಿಜಿ ಅವರಿಗೆ ನನ್ನ ಅಂತಿಮ ಭಾವಪೂರ್ಣ ನಮನಗಳು. ನೀವು, ನಿಮ್ಮ ಸಾಮಾಜಿಕ ಕಳಕಳಿಯುಳ್ಳ ಬದ್ಧತೆ ಮೈಸೂರಿನ ಜನತೆಗೆ ಎಂದು ಮಾಸದ ಭಾವನಾತ್ಮಕ ಸಂಬಂಧವೇ ಸರಿ.!

K B Ganapathi just not a name it's an emotion for mysureans..

– ಅನಿಲ್‌ಕುಮಾರ್, ನಂಜನಗೂಡು...
(ಲೇಖಕರು, ಹವ್ಯಾಸಿ ಬರಹಗಾರರು)

■ ಕೆಬಿಜಿಯವರು ಯುವ ಪತ್ರಕರ್ತರಿಗೆ ಆದರ್ಶ

ಮಾನ್ಯರೆ,

ಒಂದು ಸ್ಥಳೀಯ ಪತ್ರಿಕೆಯನ್ನು ರಾಜ್ಯ, ರಾಷ್ಟ್ರ ಪತ್ರಿಕೆಯ ಮಟ್ಟಕ್ಕೆ ಜನಪ್ರಿಯಗೊಳಿಸಿದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳು ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಬೆಳಿಗ್ಗೆ ಮತ್ತು ಸಂಜೆ ನಿರಂತರವಾಗಿ ಓದುಗರಿಗೆ ಪತ್ರಿಕೆ ತಲುಪುತ್ತಿದೆ. 'ಸ್ಟಾರ್ ಆಫ್ ಮೈಸೂರ್' ಇದ್ದದ್ದು ಇದ್ದ ಹಾಗೆ, ಕಂಡದ್ದು ಕಂಡಹಾಗೆ ಬರೆಯುತ್ತಿದ್ದ ನಿರ್ಭಿಡೆಯ 'ಪತ್ರಕರ್ತ' ಸಂಸ್ಥಾಪಕ ಸಂಪಾದಕ ಕೆ.ಬಿ.ಗಣಪತಿಯವರು. 'ಭೂಮಂತ್ರ' ಮತ್ತು 'ಅಬ್ರಕಡಬ್ರಾ' ಅಂಕಣಗಳಿಂದ ಓದುಗರನ್ನು ಜಾದೂ ಮಾಡುತ್ತಿದ್ದ 'ಜಾದೂಗಾರ'–ಡಾ.ಕೆ.ಬಿ.ಗಣಪತಿ ಅವರ ಅಗಲಿಕೆ ನೋವು ತಂದಿದೆ. ಅವರು ಮೈಸೂರಿಗೆ ಮಾತ್ರ 'ಮಿತ್ರ' ಆಗಿರಲಿಲ್ಲ. ಅಜಾತಶತ್ರು ಆಗಿದ್ದರು. ಎಷ್ಟೋ ಯುವ ಪತ್ರಕರ್ತರಿಗೆ ಆದರ್ಶರಾಗಿದ್ದರು. ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. **–ರಾಘವೇಂದ್ರ ಜೋಯಿಸ್, ಮೈಸೂರು.**



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಮಿತಿ ಇದ್ದರೆ ಸುಂದರ, ಅತಿಯಾದರೆ ಅವಾಂತರ...!

ಅಳತೆ ಮೀರಿ ಕಟ್ಟಿದ ಮನೆ, ಅಗತ್ಯ ಮೀರಿ ಮಾಡಿದ ಸಾಲವು ಮನುಷ್ಯನಿಗೆ ಸ್ವರ್ಗ ಸದೃಶವಾದ ಭೂಮಿಯ ಮೇಲೆ ನರಕವನ್ನೇ ತೋರಿಸಿಬಿಡುತ್ತದೆ. ಅದೇ ರೀತಿ ಅನುಕರಣೆಯ ಬದುಕು ಸಹ ಬದುಕಿನ ಗತಿಯನ್ನೇ ಬದಲಿಸಿ, ಕೊನೆಗೆ ಸಾವೇ ಗತಿ ಎನ್ನುವ ತೀರ್ಮಾನ ಮಾಡಬೇಕಾದ ಸನ್ನಿವೇಶ ಸೃಷ್ಟಿಮಾಡಿಬಿಡಬಹುದು. ಹೌದು, ಮನುಷ್ಯನ ಆಸೆಗೆ ಕೊನೆಯಿಲ್ಲ, ದುರಾಸೆಗೆ ಮತಿ ಇಲ್ಲ, ಆಸೆ ಈಡೇರಿಸಿಕೊಳ್ಳುವ ಭರದಲ್ಲಿ ಇತಿಮಿತಿಯನ್ನು ಅರಿಯದೆ ಅರ್ಥವಿಲ್ಲದ ತೀರ್ಮಾನ ಕೈಗೊಂಡು, ಇಡೀ ಜೀವನ ಪರ್ಯಂತ ಕೊರಗುವಂತಹ ಪರಿಸ್ಥಿತಿ ನಿರ್ಮಾಣವಾಗಿಬಿಡುತ್ತದೆ. ಪ್ರತಿಯೊಬ್ಬರು ತಮ್ಮ ಬದುಕಿನ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಲು ಬಯಸುತ್ತಾರೆ, ಆದರೆ ಅದಕ್ಕೂ ಒಂದು ಲೆಕ್ಕಾಚಾರವಿರಬೇಕು. ಆದಾಯ ಹಾಗೂ ಖರ್ಚಿನ ಮೇಲೆ ನಿಗಾ ಇರಬೇಕು. ಮನುಷ್ಯ ಸ್ಟ್ಯಾಂಡರ್ಡ್ ಆಫ್ ಲಿವಿಂಗ್ ಹೆಚ್ಚಿಸಿಕೊಳ್ಳುವ ಬದಲು ಕ್ವಾಲಿಟಿ ಆಫ್ ಲೈಫ್ ವೃದ್ಧಿಸಿಕೊಳ್ಳಬೇಕು. ಸ್ಟ್ಯಾಂಡರ್ಡ್ ಆಫ್ ಲಿವಿಂಗ್ ಎಂದರೆ ಐಷಾರಾಮಿ ಮನೆ, ದುಬಾರಿ ಕಾರು, ಬ್ರಾಂಡೆಡ್ ಬಟ್ಟೆ, ವಾಚು, ಪಾದರಕ್ಷೆಗಳು..... ಇತ್ಯಾದಿ. ಇದರಿಂದ ಸಾಲವು ಸಹ ಸ್ಟ್ಯಾಂಡರ್ಡ್ ಆಗಿಯೇ ಇರುತ್ತದೆ. ಆದರೆ ಕ್ವಾಲಿಟಿ ಆಫ್ ಲೈಫ್ ಎಂದರೆ ಶಿಸ್ತಿನ ಜೀವನ, ಕುಟುಂಬದೊಂದಿಗೆ ಸಮಯ ಕಳೆಯುವುದು, ಸಾಲ ಇರದೇ ಇರುವುದು, ಅಗತ್ಯವಿರುಷ್ಟು ನಿದ್ರಿಸುವುದು. ಎಷ್ಟೋ ಜನ ತೋರಿಕೆ ಬದುಕು ಮಾಡಲು ಹೋಗಿ, ತೀರಿಸಲಾಗದಷ್ಟು ಸಾಲ ಮಾಡಿ, ಅಕಾಲದಲ್ಲಿ ತಾವೇ ತೀರಿಹೋಗುತ್ತಿರುವುದು ದುರದೃಷ್ಟಕರ.

ಜೀವನ ಶೈಲಿಯನ್ನು ಉತ್ತಮಗೊಳಿಸಿಕೊಳ್ಳುವ ಮುನ್ನ ಹತ್ತು ಬಾರಿ ಯೋಚನೆ ಮಾಡಬೇಕು. ನನ್ನ ಸ್ನೇಹಿತ ದುಬಾರಿ ಕಾರು ಕೊಂಡುಕೊಂಡ, ನಮ್ಮ ನೆಂಟರು ದೊಡ್ಡಮನೆ ಕಟ್ಟಿದರು, ನನ್ನ ಸಹೋದ್ಯೋಗಿ ಮಗಳ ಮದುವೆಯನ್ನು ಅದ್ದೂರಿಯಾಗಿ ಮಾಡಿದ ಎಂದೆಣಿಸಿ ಕುರುಡುಕುರುಡಾಗಿ ಅನುಕರಣೆ ಮಾಡಲು ಹೋಗಬಾರದು. ಸಾಲ ಮಾಡಿ ಎಲ್ಲವನ್ನು ಮನೆಗೆ ತಂದು, ಮನೆಯಲ್ಲಿರುವ ನೆಮ್ಮದಿ ಹೊರಹೋಗಿಬಿಡುವಂತೆ ಮಾಡಿಕೊಳ್ಳಬಾರದು. ಬದುಕಿನ ಕೆಲವು ವಿಚಾರಗಳಲ್ಲಿ ಸ್ಪರ್ಧೆಗೆ ಬೀಳಬಾರದು. ನಮ್ಮ ಬದುಕಿಗೆ ಎಷ್ಟು ಅಗತ್ಯವಿದೆ ಎಂಬುದರ ಅರಿವಿರಬೇಕು. ಯಾವುದಾದರೂ ಒಂದು ವಸ್ತುವನ್ನು ಕೊಳ್ಳುವ ಮುನ್ನ ಒಂದು ಪಟ್ಟಿಯನ್ನು ಮಾಡಬೇಕು. ಅದರ ಅಗತ್ಯವಿದೆಯೇ? ಅದು ಇಲ್ಲದೆಯೂ ನಾನು ಬದುಕಬಹುದೇ? ಹಿಂದೆ ಮನೆಯಲ್ಲಿ ಖರೀದಿಸಿದ ವಸ್ತುಗಳೆಲ್ಲಾ ಪೂರ್ಣಪ್ರಮಾಣದಲ್ಲಿ ಬಳಕೆಯಾಗುತ್ತಿವೆಯೇ? ಹೀಗೆ ಪ್ರಶ್ನಿಸಿಕೊಂಡರೆ ಅನಗತ್ಯವಾಗಿ ಖರೀದಿಸುವ ಚಾಳಿಯನ್ನು ಬಿಡಬಹುದು. ನೀನು ಅನಗತ್ಯವಾದ ವಸ್ತುಗಳನ್ನು ಕೊಳ್ಳುತ್ತಾ ಹೋದರೆ, ಮುಂದೊಂದು ದಿನ ನಿನ್ನ ಅಗತ್ಯ ವಸ್ತುಗಳನ್ನು ಮಾರಬೇಕಾಗುತ್ತದೆ ಎಂದು ಸರ್ ಎಂ.ವಿಶ್ವೇಶ್ವರಯ್ಯನವರು ಹೇಳಿದ್ದಾರೆ. ಅಂದರೆ ಮನುಷ್ಯನಿಗೆ ಹಣಕಾಸು ಶಿಸ್ತು ಬಹುಮುಖ್ಯ ಎಂಬುದು ಅವರ ಮಾತಿನ ಅರ್ಥ. ಗ್ರಾಮೀಣ ಭಾಗದಲ್ಲಿ ಇದಕ್ಕೆ ಪೂರಕವಾದ ಒಂದು ಗಾದೆ ಮಾತಿದೆ, ಸಾಲ ಮಾಡಿ ವಾಲೆ(ಓಲೆ) ಮಾಡಿಸಿಕೊಂಡರು, ಸಾಲ ತೀರಿಸಲು ಹೊಲ ಮಾರಿದರು ಅಂತ.

ಊಟವಾಗಲಿ, ನಿದ್ರೆಯಾಗಲಿ ಇತಿಮಿತಿಯಲ್ಲಿರಬೇಕು. ಹೆಚ್ಚಾದರೆ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಅದೇ ರೀತಿ ಆಸೆಯಾಗಲಿ, ನಿರೀಕ್ಷೆಯಾಗಲಿ ಮಿತಿಯಾಗಿರಬೇಕು. ಅತಿಯಾದರೆ ಬದುಕಿನ ಮೇಲೆ ದುಷ್ಪರಿಣಾಮ ಬೀರುತ್ತದೆ. ನೆಮ್ಮದಿ ಮರೀಚಿಕೆಯಾಗುತ್ತದೆ. ಮನುಷ್ಯ ಯಾವುದೇ ಕೆಲಸವನ್ನು ಮಾಡಬೇಕಾದರೆ ಅದರಲ್ಲಿನ ಒಳಿತು, ಕೆಡಕನ್ನು ಯೋಚಿಸಬೇಕು. ನೆಮ್ಮದಿ ಕಸಿಯುವಂತಹ ಕೆಲಸವನ್ನು ಮಾಡಬಾರದು. ಹಣ, ಕೀರ್ತಿಯಾಸೆಗೆ ಇಲ್ಲಸಲ್ಲದ ಕೆಟ್ಟ ಕೆಲಸಗಳನ್ನು ಮಾಡಿ, ನಂತರ ಪಶ್ಚಾತ್ತಾಪ ಪಡುತ್ತಾ, ಪ್ರಾಯಶ್ಚಿತ್ತಕ್ಕಾಗಿ ಗುಡಿಗೋಪುರಗಳಿಗೆ ಅಲೆದರೆ ಏನು ಫಲ? ಪ್ರತಿನಿತ್ಯ ರಾತ್ರಿ ಮಲಗುವ ಮುನ್ನ ನಾವು ಮಾಡಿದ ಕೆಲಸಗಳ, ಆಡಿದ ಮಾತುಗಳ ಆಡಿಟ್ ಮಾಡಿಕೊಳ್ಳಬೇಕು. ತಪ್ಪುಗಳಿದ್ದರೆ ತಿದ್ದುಕೊಳ್ಳಬೇಕು. ಆಗ ಮಾತ್ರ ನೆಮ್ಮದಿ ಮನೆ ಮಾಡುತ್ತದೆ, ಇಲ್ಲವಾದಲ್ಲಿ ನೆಮ್ಮದಿ ಮನೆಯಿಂದ ಹೊರಹೋಗುತ್ತದೆ. ಎಷ್ಟೋ ಮಂದಿ ಲಕ್ಷ ರೂಪಾಯಿ ಕೊಟ್ಟು ದೊಡ್ಡ ಮಂಚ ತಂದು, ಐವತ್ತು ಸಾವಿರ ಕೊಟ್ಟು ಮೆತ್ತನೆಯ ಹಾಸಿಗೆ ತಂದು ಅಗತ್ಯವಿರುವಷ್ಟು ನಿದ್ರಿಸಲಾಗದೆ ಪರಿತಪಿಸುವುದನ್ನು, ನಿದ್ರೆ ಮಾತ್ರೆ ತೆಗೆದುಕೊಳ್ಳುತ್ತಿರುವುದನ್ನು ನೋಡಬಹುದು.

'ಸಾಕು ಎನ್ನುವವ ಸಾಹುಕಾರ, ಬೇಕು ಎನ್ನುವವ ಬಡವ' ಎಂಬ ಮಾತೊಂದಿದೆ. ಅಂದರೆ ನಮ್ಮ ಅಗತ್ಯಗಳಿಗೂ ಒಂದು ಮಿತಿ ಹೇರಿಕೊಳ್ಳುವ ಗಟ್ಟಿ ಮನಸ್ಸು ಮಾಡಬೇಕು. ನನ್ನ ಬದುಕಿಗೆ ಇಷ್ಟು ಸಾಕು, ಇರುವುದರಲ್ಲಿಯೇ ನಾನು ಸಮಾಧಾನ, ತೃಪ್ತಿಯಿಂದ ಬದುಕು ಸಾಗಿಸುತ್ತಿದ್ದೇನೆ ಎಂದು ಭಾವಿಸಿದವರು ನಿಜಸುಖಿಗಳು. ಇನ್ನಷ್ಟು ಬೇಕು, ಮತ್ತಷ್ಟು ಬೇಕು ಎಂದು ಹಪಹಪಿಸುವವರು ಪಾಪಿಗಳಾಗುವ ಸಂಭವ ಹೆಚ್ಚು. ಬಹುತೇಕರು ನನ್ನನ್ನು ಶ್ರೀಮಂತ, ವಿ.ಐ.ಪಿ. ಎಂದು ಸಮಾಜ ಗುರುತಿಸಬೇಕು ಎಂದು ಬಯಸುತ್ತಾರೆ. ಆ ಕಾರಣಕ್ಕೆ ಅಗತ್ಯ ಮೀರಿ ತೋರಿಕೆ ಬದುಕಿನ, ಶೋಕಿ ಜೀವನಶೈಲಿ ರೂಢಿಸಿಕೊಂಡಿರುತ್ತಾರೆ. ಹೆಚ್ಚು ಸಂಪತ್ತು ಇರುವವನು ನಿಜವಾದ ಸಿರಿವಂತನಲ್ಲ, ಕಡಿಮೆ ಸಾಲ ಇರುವವನು ನಿಜವಾದ ಸಿರಿವಂತ, ಊಟ–ತಿಂಡಿ ಮಾಡುವಾಗ ಯಾವುದೇ ಅಡೆತಡೆಗಳಿಲ್ಲದೆ ಸಮಾಧಾನದಿಂದ ಸೇವಿಸುವ ಸಮಾಧಾನ ಹೊಂದಿರುವವನು, ರಾತ್ರಿ ಮಲಗಿದ ತಕ್ಷಣ ನಿದ್ರಿಸುವವನು, ತನ್ನ ಕುಟುಂಬದ ಜೊತೆ ಉತ್ತಮ ಬಾಂಧವ್ಯ ಹೊಂದಿರುವವನು, ಔಷಧಿಯನ್ನು ಆಹಾರದಂತೆ ಸೇವಿಸದೆ, ಆಹಾರವನ್ನು ಔಷಧದಂತೆ ಉತ್ತಮ ಆಹಾರ ಸೇವಿಸುವವನು, ದುರಭ್ಯಾಸ/ದುಶ್ಚಟಗಳಿಂದ ಆರೋಗ್ಯ ಹಾಳುಮಾಡಿಕೊಳ್ಳದೇ ಇರುವವನು, ಬದುಕನ್ನು ಹೈರಾಣ ಮಾಡುವಷ್ಟು ಸಮಸ್ಯೆಗಳು ಇಲ್ಲದವನು ನಿಜವಾದ ಸಿರಿವಂತ.

ಇಂದಿನ ಯುವ ಪೀಳಿಗೆಯು ಬಿಸಿರಕ್ತದ ಬಿರುಸಿನಲ್ಲಿ, ಸಿಕ್ಕ ಅವಕಾಶಗಳನ್ನು ಸಿಕ್ಕಾಪಟ್ಟೆ ಉಪಯೋಗಿಸಿ ಬದುಕಿನ ಗತಿಯನ್ನೇ ಬದಲಿಸಿಕೊಳ್ಳುತ್ತಿದ್ದಾರೆ. ಸಿನೆಮಾ ನಟರುಗಳ, ಸೆಲೆಬ್ರಿಟಿಗಳ ಜೀವನಶೈಲಿಯನ್ನು ಅನುಕರಣೆ ಮಾಡಲು ಹೋಗಿ ಅನೇಕ ಅವಾಂತರಗಳನ್ನು ಎದುರಿಸುತ್ತಿದ್ದಾರೆ. ಆಹಾರ, ವಿಹಾರ, ವಸ್ತ್ರ ಸಂಹಿತೆ, ದೇಹ ದಂಡಿಸುವುದು ಎಲ್ಲದರಲ್ಲೂ ಭಿನ್ನ ಎಂದು ತೋರಿಸಿಕೊಳ್ಳಲು ಹೋಗಿ ತಾವು ನೋವು ಅನುಭವಿಸುವುದಲ್ಲದೆ ಮನೆಯವರಿಗೂ ನೋವುಂಟು ಮಾಡುತ್ತಿದ್ದಾರೆ. ಆಧುನಿಕ ಜೀವನಶೈಲಿಯಲ್ಲಿ ರೆಡಿಮೇಡ್ ಫುಡ್, ಹೋಟೆಲ್ ಫುಡ್, ಸ್ಟ್ರೀಟ್ ಫುಡ್ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಆರೋಗ್ಯದಲ್ಲಿ ಏರುಪೇರು ಮಾಡಿಕೊಳ್ಳುತ್ತಿದ್ದಾರೆ. ಅನೇಕ ನಗರಗಳಲ್ಲಿ ಮಧ್ಯರಾತ್ರಿ 1–2 ಗಂಟೆಯ ಅವಧಿಯಲ್ಲಿ ಸಿಗುವ ಯಾವುದಾವುದೋ ಫುಡ್ ರುಚಿಯನ್ನು ಅರಸಿ ತಿನ್ನಬಾರದ ಹೊತ್ತಿನಲ್ಲಿ ತಿಂದು, ಅದರಿಂದಾಗುವ ಅಡ್ಡಪರಿಣಾಮಗಳಿಂದ ಅನೇಕ ಖಾಯಿಲೆಗಳನ್ನು ಆಹ್ವಾನಿಸುತ್ತಿದ್ದಾರೆ. ಅಕಾಲದಲ್ಲಿಯೇ ಹೃದಯಾಘಾತದಿಂದ ಮರಣಹೊಂದುತ್ತಿರುವವರ ಸಂಖ್ಯೆಯೂ ಕಡಿಮೆಯಿಲ್ಲ.

ಓದುವ ವಯಸ್ಸಿನಲ್ಲಿ ಗಂಭೀರವಾಗಿ ಅಧ್ಯಯನ ಮಾಡುವುದನ್ನು ಬಿಟ್ಟು ಸಾಮಾಜಿಕ ಜಾಲತಾಣಗಳ ಮೋಹಕ್ಕೆ ಸಿಲುಕಿ ಇಲ್ಲಸಲ್ಲದ ಅಪಾಯಕಾರಿ ಸಾಹಸಗಳನ್ನು ಮಾಡಲು ಮುಂದಾಗುತ್ತಿರುವುದು ಆತಂಕಕಾರಿ ಸಂಗತಿ. ಬೈಕ್ ರೈಡ್‌ಗಳು, ಸೆಲ್ಫಿಗಳ ಹುಚ್ಚಾಟದಿಂದಲೂ ಅನೇಕ ಅವಘಡಗಳು ಜರುಗುತ್ತಿವೆ. ಧೂಮಪಾನ, ಮದ್ಯಪಾನವನ್ನು ಫ್ಯಾಷನ್ ಎಂದು ಕೆಲವು ಯುವಕರು ಭಾವಿಸಿದಂತಿದೆ. ಲಿಂಗಭೇದವಿಲ್ಲದೆ, 15–16ನೇ ವಯಸ್ಸಿಗೆ ಇವುಗಳ ಚಟ ಹತ್ತಿಸಿಕೊಂಡು, ಅಕಾಲದಲ್ಲಿ ಚಟ್ಟ ಹತ್ತುವವರು ಸಹ ಇದ್ದಾರೆ. ಪ್ರೀತಿ–ಪ್ರೇಮದ ಉನ್ಮಾದದಲ್ಲಿ ತಮ್ಮ ಸುಂದರ ಬದುಕಿಗೆ ಕೊಳ್ಳಿ ಇಟ್ಟುಕೊಳ್ಳುತ್ತಿದ್ದಾರೆ. ವಿದ್ಯಾವಂತ ಯುವ ಸಮೂಹವೇ ವಿವೇಕವಿಲ್ಲದೆ ವರ್ತಿಸುತ್ತಿರುವುದು ವಿಪರ್ಯಾಸದ ಸಂಗತಿ. ಎಲ್ಲದಕ್ಕೂ ಒಂದು ಮಿತಿ ಹೇರಿಕೊಂಡರೆ ಸ್ವಸ್ಥ ಜೀವನ ಕಂಡುಕೊಳ್ಳಬಹುದು.

ಬದುಕಿನ ವಾಸ್ತವಗಳನ್ನು ಅರಿತುಕೊಂಡು, ತಮ್ಮ ಆದಾಯಕ್ಕೆ ತಕ್ಕ ಹಾಗೆ ಖರ್ಚು ಮಾಡುವ ಒಂದು ಹಣಕಾಸಿನ ಶಿಸ್ತು ಮೈಗೂಡಿಸಿಕೊಳ್ಳಬೇಕು. ಜಗತ್ತನ್ನು ಮೆಚ್ಚಿಸುವ ಹುಚ್ಚನ್ನು ಬಿಡಬೇಕು. ನಮ್ಮ ಹತ್ತಿರದವರು ಯಾರೋ ಸಿರಿವಂತಿಕೆಯಿಂದ ಬದುಕುತ್ತಿದ್ದಾರೆ ಎಂದರೆ ಅವರಿಗೆ ಅಷ್ಟೇ ಆದಾಯವೂ ಇರಬಹುದು. ಅವರಂತೆ ನಾನು ಬದುಕುತ್ತೇನೆ ಎಂದು ಬಯಸುವುದು ಮೂರ್ಖತನವಾಗುತ್ತದೆ. ಜೀವನಶೈಲಿಯ ಅನುಕರಣೆ ಬದಲು ಅನೇಕರು ಪರಿಶ್ರಮ, ದಕ್ಷತೆ, ಪ್ರಾಮಾಣಿಕತೆಯಿಂದ ದುಡಿದು ದೊಡ್ಡವರಾಗಿರುತ್ತಾರೆ. ಅವರನ್ನು ರೋಲ್ ಮಾಡೆಲ್ ಆಗಿ ತೆಗೆದುಕೊಂಡು ಜೀವನದಲ್ಲಿ ಮೇಲೆ ಬರಬೇಕು. ಅವರ ಬದುಕು ಅವರಿಗೆ, ನಮ್ಮ ಬದುಕು ನಮಗೆ ಎಂದು ಭಾವಿಸಿದರೆ ಬದುಕು ಸುಂದರವಾಗಿರುತ್ತದೆ. ನಾನು ಅವರಿಗಿಂತ ಏನು ಕಮ್ಮಿ ಎಂದು ಹಠಕ್ಕೆ ಬಿದ್ದು ಅವರನ್ನು ಸರಿಗಟ್ಟಲು ಹೊರಟರೆ ದುಃಖ ಕಟ್ಟಿಟ್ಟಬುತ್ತಿ. ಅಂದ ಹಾಗೆ ಎಲ್ಲರ ಬದುಕು ಹೊರನೋಟಕ್ಕೆ ಕಾಣುವ ಹಾಗೆ ಸುಂದರವಾಗಿಯೇ ಇರುವುದಿಲ್ಲ. ಆ ಸತ್ಯವನ್ನು ಅರಿತರೆ ಬದುಕು ಸುಂದರ ಪಯಣವಾಗಿ ಕಾಣುತ್ತದೆ, ಇಲ್ಲವಾದಲ್ಲಿ ಹೈರಾಣವಾಗುತ್ತದೆ.

ಎಲ್ಲದಕ್ಕೂ ಮಿತಿ ಇರುವಂತೆ ದುಡಿಮೆಗೂ ಒಂದು ಮಿತಿ ಹೇರಿಕೊಳ್ಳಬೇಕು. ಬದುಕೋಕೆ ಎಷ್ಟು ಬೇಕು ಅಷ್ಟು ದುಡಿದರೆ ಸಾಕು, ಕೆಲವರು ದುಡಿಯೋಕೆ ಬದುಕಿರುವಂತೆ ಕಾಣುತ್ತಾರೆ. ಇನ್ನೂ ಕೆಲವರು ವಯಸ್ಸಿದ್ದಾಗ ಶಕ್ತಿ ಮೀರಿ, ಸಮಯಮೀರಿ ದುಡಿದು ಬಿಡೋಣ, ಆಮೇಲೆ ಆರಾಮಾಗಿ ಇದ್ದುಬಿಡೋಣ ಎಂದುಕೊಳ್ಳುತ್ತಾರೆ. ಆದರೆ ವಯಸ್ಸಾದ ಮೇಲೆ ಒಂದು ಸಣ್ಣ ಪ್ರವಾಸ ಮಾಡಲಿಕ್ಕೂ ಶಕ್ತಿ ಇರದೆ, ಅನೇಕ ಖಾಯಿಲೆಗಳಿಂದ ಉಳಿದ ಆಯುಷ್ಯವೆಲ್ಲಾ ಕೊರಗುತ್ತಲೇ ಇರುತ್ತಾರೆ. ಅಗತ್ಯವಿರುವಷ್ಟು ದುಡಿದು, ಅಗತ್ಯವಿರುವಷ್ಟು ವಿಶ್ರಾಂತಿ ಪಡೆದು, ಬಿಡುವಿನ ದಿನಗಳಲ್ಲಿ ಪ್ರವಾಸಗಳನ್ನು ಮಾಡಿ ಬದುಕನ್ನು ಅರ್ಥಪೂರ್ಣವಾಗಿಸಿಕೊಳ್ಳಬೇಕು.

ಮಿತಿಯನತಾಶೆ, ಸಮುಚಿತವ ಮರೆಯದ ಯತ್ನ, ತೈತಿಕ್ಷೆ ಕಷ್ಟಾಂಶದ ಪರಿಹಾರ್ಯತೆಗೆ, ಮೃತಿಯ ಜೀವನಕಥೆಯ ಕೊನೆಯಲ್ಲವೆಂಬರಿವು, ಹಿತಗಳಿವು ನರಕುಲಕೆ ಮಂಕುತಿಮ್ಮ. ಎಂದು ಡಿವಿಜಿಯವರು ಕಗ್ಗವೊಂದರಲ್ಲಿ ಹೇಳಿದ್ದಾರೆ. ಇದರ ಭಾವಾರ್ಥವೆಂದರೆ ತನ್ನ ಮಿತಿಯನ್ನು ತಿಳಿದುಕೊಂಡು, ಎಷ್ಟು ಬೇಕೋ ಅಷ್ಟಕ್ಕೆ ಮಾತ್ರ ಆಸೆಪಡುವುದು. ಯಾವುದು ಯೋಗ್ಯವಾದದ್ದು ಮತ್ತು ಸರಿಯಾದದ್ದು ಎನ್ನುವುದನ್ನು ಮರೆಯದಿರಲು ಪ್ರಯತ್ನಪಡುವುದು. ಕಷ್ಟಗಳನ್ನು ಹೋಗಲಾಡಿಸಲು ಸಾಧ್ಯವಾಗದಿದ್ದಾಗ ಅದನ್ನು ಸಹಿಸುವ ತಾಳ್ಮೆ...... ಹೀಗೆ ಹೇಳುತ್ತದೆ. ಮನುಷ್ಯ ತನಗೆ ಶಕ್ತಿ, ಯುಕ್ತಿ ಇದೆ ಎಲ್ಲದರ ಮೇಲೂ ಪ್ರಯೋಗ ಮಾಡಬಾರದು. ಒಳಿತು, ಕೆಡಕನ್ನೂ ಯೋಚಿಸಬೇಕು. ಮಿತಿ ಹೇರಿಕೊಂಡರೆ ಮಾನವನಾಗಿಯೂ, ಅತಿಯಾದರೆ ದಾನವನಾಗುವ ಸಂಭವ ಇದೆ. ಏನಂತೀರಿ?.

ಹೂರಣ: ಆದರ್ಶಗಳನ್ನು ಅನುಕರಿಸಿದರೆ ಸಮಾಧಾನ ಗ್ಯಾರಂಟಿ, ಆಕರ್ಷಣೆಗಳನ್ನು ಅನುಸರಿಸಿದರೆ ಅಸಮಾಧಾನ ಗ್ಯಾರಂಟಿ.



> **'ಸಾಕು ಎನ್ನುವವ ಸಾಹುಕಾರ, ಬೇಕು ಎನ್ನುವವ ಬಡವ' ಎಂಬ ಮಾತೊಂದಿದೆ. ಅಂದರೆ ನಮ್ಮ ಅಗತ್ಯಗಳಿಗೂ ಒಂದು ಮಿತಿ ಹೇರಿಕೊಳ್ಳುವ ಗಟ್ಟಿ ಮನಸ್ಸು ಮಾಡಬೇಕು. ನನ್ನ ಬದುಕಿಗೆ ಇಷ್ಟು ಸಾಕು, ಇರುವುದರಲ್ಲಿಯೇ ನಾನು ಸಮಾಧಾನ, ತೃಪ್ತಿಯಿಂದ ಬದುಕು ಸಾಗಿಸುತ್ತಿದ್ದೇನೆ ಎಂದು ಭಾವಿಸಿದವರು ನಿಜಸುಖಿಗಳು. ಇನ್ನಷ್ಟು ಬೇಕು, ಮತ್ತಷ್ಟು ಬೇಕು ಎಂದು ಹಪಹಪಿಸುವವರು ಪಾಪಿಗಳಾಗುವ ಸಂಭವ ಹೆಚ್ಚು. ಹೆಚ್ಚು ಸಂಪತ್ತು ಇರುವವನು ನಿಜವಾದ ಸಿರಿವಂತನಲ್ಲ, ಕಡಿಮೆ ಸಾಲ ಇರುವವನು ನಿಜವಾದ ಸಿರಿವಂತ, ಊಟ–ತಿಂಡಿ ಮಾಡುವಾಗ ಯಾವುದೇ ಅಡೆತಡೆಗಳಿಲ್ಲದೆ ಸಮಾಧಾನದಿಂದ ಸೇವಿಸುವ ಸಮಾಧಾನ ಹೊಂದಿರುವವನು, ರಾತ್ರಿ ಮಲಗಿದ ತಕ್ಷಣ ನಿದ್ರಿಸುವವನು, ತನ್ನ ಕುಟುಂಬದ ಜೊತೆ ಉತ್ತಮ ಬಾಂಧವ್ಯ ಹೊಂದಿರುವವನು, ಬದುಕನ್ನು ಹೈರಾಣ ಮಾಡುವಷ್ಟು ಸಮಸ್ಯೆಗಳು ಇಲ್ಲದವನು ನಿಜವಾದ ಸಿರಿವಂತ.**

ಯಾವುದೇ ಕ್ಷೇತ್ರದಲ್ಲಿರುವ ಆಸಕ್ತರೂ ಸಾಹಿತ್ಯ ರಚಿಸಬಹುದು

ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ. ನೀಲಗಿರಿ ತಳವಾರ್ ಅಭಿಮತ

ಮೈಸೂರು,ಜು.20(ಎಂಟಿವೈ)–ಸಾಹಿತ್ಯ ಯಾರೊಬ್ಬರ ಸ್ವತ್ತಲ್ಲ. ಕನ್ನಡ ಅಧ್ಯಾಪಕರೇ ಸಾಹಿತ್ಯ ರಚಿಸಬೇಕೆಂಬ ನಿಯಮವಿಲ್ಲ. ಯಾವುದೇ ಕ್ಷೇತ್ರದಲ್ಲಿರುವ ಆಸಕ್ತಿಯುಳ್ಳವರು ಸಾಹಿತ್ಯ ರಚಿಸಬಹುದು ಎಂದು ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ನೀಲಗಿರಿ ತಳವಾರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಬೆಳಕು ಚಾರಿಟಬಲ್ ಟ್ರಸ್ಟ್ ಹಾಗೂ ಪ್ರಗತಿ ಪ್ರಕಾಶನ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಂಡ್ಯ ಜಿಲ್ಲೆ ಅಕ್ಕಿಹೆಬ್ಬಾಳು ಸರ್ಕಾರಿ ಪದವಿಪೂರ್ವ ಕಾಲೇಜಿನ ಭೌತಶಾಸ್ತ್ರ ಉಪನ್ಯಾಸಕ ಎಲ್.ಸಿ.ಶಂಕರ ಅವರ 'ಮಂಥನ ಮುತ್ತುಗಳು' ಚುಟುಕು ಸಂಕಲನವನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಸಾಹಿತ್ಯ ಕ್ಷೇತ್ರಕ್ಕೆ ನಿರ್ದಿಷ್ಟವಾದ ಪರಿಧಿಯಿಲ್ಲ. ಕನ್ನಡ ಅಧ್ಯಾಪಕರೇ ಸಾಹಿತ್ಯ ರಚಿಸಬೇಕೆಂಬ ನಿಯಮವಿಲ್ಲ. ಜೀವವಿಜ್ಞಾನ ಓದಿದ್ದ ಬಿಜಿಎಲ್ ಸ್ವಾಮಿ, ಭೂ ವಿಜ್ಞಾನ ಓದಿದ್ದ ಪ್ರೊ.ಕೆ.ಎಸ್. ನಿಸಾರ್ ಅಹಮದ್, ಬ್ಯಾಂಕ್ ಅಧಿಕಾರಿಯಾಗಿದ್ದ ಹೆಚ್.ಡುಂಡಿರಾಜ್ ಸೇರಿದಂತೆ ಅನೇಕರು ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಗಮನಿಸಬೇಕು. ಮೂಲತಃ ವಕೀಲರಾಗಿರುವ ಡಾ.ಫ.ಗು.ಹಳಕಟ್ಟಿ ಅವರು ವಚನ ಸಾಹಿತ್ಯವನ್ನು ಸಂರಕ್ಷಿಸಿ ನಮಗೆ ಕೊಡುಗೆ ನೀಡಿದ್ದಾರೆ. ಹೀಗಾಗಿ ಓದಿಗೂ, ವೃತ್ತಿಗೂ, ಬರವಣಿಗೆಗೂ ಸಂಬಂಧವಿಲ್ಲ. ಆಸಕ್ತಿ ಇರುವವರೆಲ್ಲಾ ಸಾಹಿತ್ಯ ರಚಿಸಬಹುದು. ಕಾವ್ಯಕ್ಕೆ ಹೊಸ ಹೊಸ ನೀರು ಬರುತ್ತಾ ಇರಬೇಕು ಎಂದರು.

ಸಾಹಿತ್ಯ ಲೋಕಕ್ಕೆ ಯಾರೇ ಹೊಸಬರು ಬಂದರೂ ಸ್ವಾಗತಿಸುವುದು ನಮ್ಮ ಕರ್ತವ್ಯವಾಗಬೇಕು ಎಂದ ಅವರು, ಶಂಕರ ಅವರು ಚುಟುಕುಗಳಲ್ಲಿ ಪರಿಸರ, ಸಾರ್ವಜನಿಕ, ಕೌಟುಂಬಿಕ ಪ್ರಜ್ಞೆಯ ಚಿಂತನೆ ವ್ಯಾಪಕವಾಗಿ ಮೂಡಿಬಂದಿದೆ. ಖಿನ್ನತೆ ಬಿಟ್ಟು ಭಿನ್ನತೆ. ಭ್ರಾತೃತ್ವ ಕಂಡು ಬರುತ್ತದೆ. ಹೀಗಾಗಿ ಈ ಚುಟುಕುಗಳು ಆತ್ಮಾವಲೋಕನಕ್ಕೆ ಪ್ರೇರೇಪಣೆ ನೀಡುತ್ತವೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ನೆರಳು ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಡಾ.ಅಮ್ಮಸಂದ್ರ ಸುರೇಶ್ ಮಾತನಾಡಿ, ಇಲ್ಲಿರುವ ಚುಟುಕುಗಳು ಚಿಕಿತ್ಸಕ ಗುಣ ಹೊಂದಿವೆ. ಸಮಾಜದಲ್ಲಿ ಸಮಾನತೆ, ಭ್ರಾತೃತ್ವ, ಶಾಂತಿಯ ಭಾವನೆ, ಕಂದಾಚಾರದ ವಿರುದ್ಧ ಅರಿವು ಮಾಡಿಸುತ್ತವೆ. ಸಮಾಜಕ್ಕೆ ಮುದ ನೀಡುವಂತಹ ವಿಷಯಗಳು ಅಡಕವಾಗಿವೆ ಎಂದರು.

ಇದಕ್ಕೂ ಮುನ್ನ ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಸಾಹಿತ್ಯ ಎಲ್ಲರನ್ನು ಒಳಗೊಳ್ಳಬೇಕು. ಎಲ್ಲಾ ವರ್ಗದ ಜನರು ಬರೆದಾಗ ಮಾತ್ರ ಸಾಹಿತ್ಯ ಶ್ರೀಮಂತವಾಗುತ್ತದೆ ಎಂದರು.

ಪ್ರಗತಿ ಪ್ರಕಾಶನದ ಪುರುಷೋತ್ತಮ ಮಾತನಾಡಿ, ಇಲ್ಲಿರುವ ಚುಟುಕುಗಳು ಮನರಂಜನೆಯ ಜೊತೆಗೆ ಮನಃಪರಿವರ್ತನೆಗೆ ಕಾರಣವಾಗುತ್ತವೆ ಎಂದರು.

ಕನ್ನಡ ಉಪನ್ಯಾಸಕ ಶಿವಾನಂದ ಅವರು ಲೇಖಕರನ್ನು ಪರಿಚಯಿಸಿದರು. ಕೆ.ಆರ್.ನಗರ ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕ ಶ್ರೀನಿವಾಸ್ ನಿರೂಪಿಸಿದರು.

ಸಂಗೀತ ಶಿಕ್ಷಕಿ ಡಿ.ಜ್ಞಾನೇಶ್ವರಿ ಪ್ರಾರ್ಥಿಸಿದರು. ಪ್ರೌಢಶಾಲಾ ಶಿಕ್ಷಕಿ ರೋಹಿಣಿ ಸ್ವಾಗತಿಸಿದರು. ಪಿಯು ಕಾಲೇಜು ಉಪನ್ಯಾಸಕ ಗಿಡ್ಡಶೆಟ್ಟಿ ವಂದಿಸಿದರು.

ಕಾರ್ಯಕ್ರಮದಲ್ಲಿ ನೆರಳು ಚಾರಿಟಬಲ್ ಟ್ರಸ್ಟಿನ ಕಾರ್ಯದರ್ಶಿ ಕುಮಾರ್, ಅಕ್ಕಿಹೆಬ್ಬಾಳು ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಬಾಲಕೃಷ್ಣ, ಪ್ರೌಢಶಾಲಾ ಮುಖ್ಯ ಶಿಕ್ಷಕ ಚಲುವರಾಜ್, ಗೃಹರಕ್ಷಕ ದಳದ ನಿವೃತ್ತ ಕಮಾಂಡೆಂಟ್ ವಿ.ಪುರುಷೋತ್ತಮ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಂಸ್ಥೆ ಸಭಾಂಗಣದಲ್ಲಿ ಭಾನುವಾರ ಎಲ್.ಸಿ.ಶಂಕರ ಅವರ 'ಮಂಥನ ಮುತ್ತುಗಳು' ಚುಟುಕು ಸಂಕಲನವನ್ನು ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ನೀಲಗಿರಿ ತಳವಾರ ಬಿಡುಗಡೆ ಮಾಡಿದರು.

> ಮಾನವ ಕಲ್ಯಾಣಕ್ಕಾಗಿ ಸಾಹಿತ್ಯ ಮತ್ತು ವಿಜ್ಞಾನ ಸಂಗಮವಾಗಬೇಕು. ಕಾವ್ಯಕ್ಕೆ ವಿಜ್ಞಾನ ಖಚಿತತೆಯ ಸ್ಪರ್ಶ ನೀಡಬೇಕು. ವಿಜ್ಞಾನಕ್ಕೆ ಮಾನವೀಯತೆಯ ಸ್ಪರ್ಶ ಬೇಕು. ಹಾಗಾದಾಗ ಮಾತ್ರ ವಿಜ್ಞಾನ ವಿನಾಶದ ಬದಲು ಪ್ರಗತಿಗೆ ಕಾರಣವಾಗಬಹುದು. ಕಾವ್ಯದ ಮೂಲದ್ರವ್ಯ ಎಂದರೇ ಭಾವತೀವ್ರತೆ ಮತ್ತು ಭಾಷೆ. ಕಾವ್ಯಕ್ಕೆ ಉತ್ಕಟವಾದ ಭಾವತೀವ್ರತೆ ಇರಬೇಕು. ಹೊರಮೈಯಲ್ಲಿ ಭಾಷೆ ಇರಬೇಕು. ಪ್ರಾಣಕ್ಕೆ ಉಸಿರಿನಂತೆ ಕಾವ್ಯಕ್ಕೆ ಭಾಷೆ ಇರಬೇಕು. ಭಾವ, ಭಾಷೆ, ಪ್ರತಿಭೆ ಸಂಗಮವಾದಾಗ ಕಾವ್ಯ ಮೂಡುತ್ತದೆ. ಕಾವ್ಯಕ್ಕೆ ವಸ್ತು ಮತ್ತು ಪರಿಸರ ಕೂಡ ಮುಖ್ಯವಾಗುತ್ತದೆ. ಲೌಕಿಕ, ಆನುಭಾವಿಕ ಕಾವ್ಯವಾಗುತ್ತದೆ.
> **–ಪ್ರೊ.ನೀಲಗಿರಿ ತಳವಾರ**

ಕೋರ್ಸ್‌ಗಳ ಪ್ರವೇಶಾತಿ ದಿನಾಂಕ ವಿಸ್ತರಣೆ

ಮೈಸೂರು,ಜು.20–ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿದ್ಯಾಲಯ ಹಾಗೂ ಡಾ.ಗಂಗೂಬಾಯಿ ಹಾನಗಲ್ ಗುರುಕುಲ ಹುಬ್ಬಳ್ಳಿ ಪ್ರಾದೇಶಿಕ ಕೇಂದ್ರಕ್ಕೆ 2025–26ನೇ ಶೈಕ್ಷಣಿಕ ಸಾಲಿನಿಂದ ನಡೆಸುವ ಸ್ನಾತಕ, ಸ್ನಾತಕೋತ್ತರ ಪದವಿ (ಬಿಪಿಎ, ಎಂಪಿಎ) ಡಿ.ಲಿಟ್ ಪದವಿ ಡಿಪ್ಲೊಮಾ, ಸರ್ಟಿಫಿಕೇಟ್ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಪ್ರವೇಶಾತಿ ದಿನಾಂಕವನ್ನು ಆ.30ರವರೆಗೆ ಶುಲ್ಕ ರಹಿತವಾಗಿ ವಿಸ್ತರಿಸಲಾಗಿದೆ. ಹಾಗೆಯೇ 2025–26ನೇ ಶೈಕ್ಷಣಿಕ ಸಾಲಿನ ಪಿಎಚ್.ಡಿ ಕೋರ್ಸ್‌ಗೆ ಆ.30ರವರೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9480150826 ಸಂಪರ್ಕಿಸಬಹುದು.

ಜು.23, ತರಬೇತಿ

ಮೈಸೂರು, ಜು. 20–ನಾಗನಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಜು.23 ರಂದು ರೈತರು ಮತ್ತು ಕೃಷಿ ಪಂಪು, ಉಪಕರಣಗಳ ತಂತ್ರಜ್ಞರಿಗೆ ಬಿಇಇ, ಸ್ಟಾರ್ ಲೇಬಲ್‌ವುಳ್ಳ ಇಂಧನ ದಕ್ಷ ಪಂಪ್‌ಸೆಟ್ ಮತ್ತು ನೀರಿನ ಸಂರಕ್ಷಣೆ ಎಂಬ ವಿಷಯದ ಬಗ್ಗೆ ರೈತರು ಮತ್ತು ಕೃಷಿ ಪಂಪು, ಉಪಕರಣಗಳ ತಂತ್ರಜ್ಞರಿಗೆ ಒಂದು ದಿನದ ತರಬೇತಿ ಮತ್ತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಆಸಕ್ತರು ತಮ್ಮ ಹೆಸರನ್ನು ಈ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕರ ಮೊ. 8277933116ಗೆ ಕರೆ ಮಾಡಿ ನೋಂದಾಯಿಸಿಕೊಳ್ಳಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮುಂದಿನ 5 ವರ್ಷದಲ್ಲಿ ವಿವಿಧ ಕ್ಷೇತ್ರದಲ್ಲಿ ಎಐ ತಂತ್ರಜ್ಞಾನ ಪರಿಣಾಮಕಾರಿ ಪ್ರಭಾವ ಬೀರುತ್ತದೆ

ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಹಿರಿಯ ನಿರ್ದೇಶಕ ಪ್ರಕಾಶ್ ಬೆಳವಾಡಿ ಅಭಿಪ್ರಾಯ

ಮೈಸೂರು,ಜು.20(ಎಂಟಿವೈ)– ಮುಂದಿನ ಐದು ವರ್ಷದಲ್ಲಿ ಆರೋಗ್ಯ, ಶಿಕ್ಷಣ, ಕಲಾ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ (ಎಐ) ಪರಿಣಾಮಕಾರಿಯಾದ ಪ್ರಭಾವ ಬೀರುತ್ತದೆ ಎಂದು ಹಿರಿಯ ನಿರ್ದೇಶಕ ಪ್ರಕಾಶ್ ಬೆಳವಾಡಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜು(ಕಾವಾ) ಸಭಾಂಗಣದಲ್ಲಿ ಕುಂಚಕಾವ್ಯ ಸಾಂಸ್ಕೃತಿಕ ಸಮಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಸ್ತುತ ಸಂದರ್ಭದಲ್ಲಿ ಕೃತಕ ಬುದ್ಧಿಮತ್ತೆ ಯುಗ ಆರಂಭವಾಗಿದೆ. ಎಲ್ಲಾ ಕ್ಷೇತ್ರಗಳಲ್ಲೂ ಎಐ ತಂತ್ರಜ್ಞಾನ ಬಳಕೆಯಾಗುತ್ತಿದೆ. ಎಲ್ಲರಿಗೂ ತಮ್ಮ ಮೊಬೈಲ್‌ನಲ್ಲಿ ಎಐ ಸಿಗುತ್ತಿದೆ. ಮುಂದಿನ ಐದು ವರ್ಷದಲ್ಲಿ ಎಐ ವಿವಿಧ ಕ್ಷೇತ್ರಗಳಲ್ಲಿ ಪರಿಣಾಮಕಾರಿ ಪ್ರಭಾವ ಬೀರಲಿದೆ. ಆರೋಗ್ಯ ಕ್ಷೇತ್ರದಲ್ಲಿ ನ್ಯಾನೋ ಡಿಸ್ಟೆನ್ಸ್‌ನಲ್ಲಿ ಶಸ್ತ್ರಚಿಕಿತ್ಸೆ ಮಾಡುವ ಚಾಕಚಕ್ಯತೆ ಎಐಗೆ ಇರುತ್ತದೆ. ಎಷ್ಟೇ ಮಾಹಿತಿ ಕೇಳಿದರೂ ಬೇಸರ ಮಾಡಿಕೊಳ್ಳುವುದಿಲ್ಲ. ಹಾಗಾಗಿ ಮುಂದಿನ ದಿನಗಳಲ್ಲಿ ಶಿಕ್ಷಣ, ಕಲೆ ಮತ್ತು ದೃಶ್ಯಕಲೆ ಸೇರಿದಂತೆ ಎಲ್ಲೆಡೆ ಎಐ ಪ್ರಭಾವ ಬೀರುವ ಲಕ್ಷಣ ಗೋಚರಿಸುತ್ತಿದೆ ಎಂದರು.


ಯಾವುದೇ ವಿಚಾರದಲ್ಲಿ ಹೇಳುವ, ಕೇಳುವ ವ್ಯವಧಾನ ನಮಗೆ ಇರದಿದ್ದರೆ ಕಲಿಯಲು ಸಾಧ್ಯವಾಗುವುದಿಲ್ಲ. ಎಐ ಹೊಸದಾಗಿ ಏನನ್ನೂ ಹೇಳುವುದಿಲ್ಲ. ಇಲ್ಲಿಯವರೆಗೂ ಏನೇನು ತಿಳಿದಿದೆಯೋ, ಅದನ್ನೇ ವೇಗವಾಗಿ ಹೇಳುತ್ತದೆ. ಒಂದು ಸೆಕೆಂಡ್‌ನಲ್ಲಿ ಬಿಲಿಯನ್ ಪುಟಗಳಲ್ಲಿರುವ ಮಾಹಿತಿಯನ್ನು ಕ್ರೂಢೀಕರಿಸಿ 3 ಸೆಕೆಂಡ್‌ನಲ್ಲಿ ಉತ್ತರ ಕೊಡುತ್ತದೆ. ಅದು ಹ್ಯೂಮನ್ ಲರ್ನಿಂಗ್. ಎಲ್ಲೋ ದಾಖಲೆಯಾಗಿರುವುದನ್ನೇ ಡಿಜಿಟಲೈಜ್ಡ್ ಆಗಿ ಹೇಳುತ್ತದೆ. ಮೂರು ಗಂಟೆ ಭಾಷಣದಲ್ಲಿ ನೀವು ಒಂದು ವರ್ಷದಷ್ಟು ಕಲಿಯಬಹುದು. ಎಐನಲ್ಲಿ ಯಾವ ಭಾಷೆಯಲ್ಲಾದರೂ ಮಾಹಿತಿ ಸಿಗುತ್ತದೆ ಎಂದು ಪ್ರಕಾಶ್ ಬೆಳವಾಡಿ ತಿಳಿಸಿದರು.

ಎಐಗೆ ಪ್ರತಿಷ್ಠೆ ಇರಲ್ಲ. ಕಪ್ಪು, ಬಿಳಿ, ಜಾತಿ, ಧರ್ಮದ ಬಗ್ಗೆ ಕೇರ್ ಮಾಡಲ್ಲ. ಕೇಳಿದ ಮಾಹಿತಿಯನ್ನು ಎಲ್ಲರಿಗೂ ಹೇಳುತ್ತದೆ. ಇದು ಶಿಕ್ಷಣ, ನ್ಯಾಯಾಂಗ ಕ್ಷೇತ್ರಕ್ಕೂ ಕಾಲಿಡುವ ಸಾಧ್ಯತೆ ಇದೆ. ಈಗಾಗಲೇ ಕೆಲವೆಡೆ ಎಐ ಶಿಕ್ಷಕರು ಪಾಠ ಮಾಡುವ ವ್ಯವಸ್ಥೆಯೂ ಇದೆ. ನ್ಯಾಯಾಂಗ ವ್ಯವಸ್ಥೆಯಲ್ಲಿ ಈ ವರ್ಷ ನ್ಯಾಯಾಧೀಶರು, ವಕೀಲರು 155 ದಿನ ಮಾತ್ರ ಕೆಲಸ ಮಾಡಲು ನಿರ್ಧರಿಸಿದ್ದಾರೆ. ವಾದ ವಿವಾದ ಕೇಳಿ ಕೇಳಿ ಅವರು ಒತ್ತಡಕ್ಕೆ ಒಳಗಾಗಿದ್ದಾರೆ. ಆ ಕಾರಣದಿಂದ ಅವರಿಗೂ ರಜೆ ಬೇಕಾಗಿರುತ್ತದೆ. ಪ್ರಸ್ತುತ ದೇಶದಲ್ಲಿ 5 ಕೋಟಿ ಪ್ರಕರಣ ಇತ್ಯರ್ಥವಾಗದೇ ಹಾಗೆ ಇದೆ. ಅದನ್ನು ಎಐಗೆ ಕೊಟ್ಟರೆ 48 ಗಂಟೆಯಲ್ಲಿ ತ್ವರಿತವಾಗಿ ವಿಲೇವಾರಿ ಮಾಡುತ್ತದೆ. ಮೂರು ವರ್ಷದಲ್ಲಿ ಇತ್ಯರ್ಥವಾಗುವ ಪ್ರಕರಣವನ್ನು, ಮೂರು ಸೆಕೆಂಡ್‌ನಲ್ಲಿ ಹಳೆಯ ತೀರ್ಪು, ಸಂವಿಧಾನ, ಐಪಿಸಿ, ಸಿಆರ್‌ಪಿಸಿ ನಿಯಮ ಅನುಸರಿಸಿ ತೀರ್ಪು ನೀಡುತ್ತದೆ. ಮೂರು ಸೆಕೆಂಡ್‌ನಲ್ಲಿ ಯಾರೂ ಅಧ್ಯಯನ ಮಾಡಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಮುಂದಿನ ದಿನಗಳಲ್ಲಿ ಸಿನಿಮಾ ಕ್ಷೇತ್ರಕ್ಕೂ ಎಐ ಬಂದು ನಟರೇ ಇಲ್ಲದಂತೆ ಸಿನಿಮಾ ರಚಿಸಬಹುದಾದ ಎಲ್ಲಾ ಲಕ್ಷಣಗಳಿವೆ. ಈಗಾಗಲೇ ಚಂಡಿಗಢ್‌ನಲ್ಲಿ ಒಂದು ಸಿನಿಮಾ ತಯಾರಾಗುತ್ತಿದ್ದು, ಅದರಲ್ಲಿ ನಟರೇ ಇಲ್ಲ. ಮುಂದಿನ ದಿನಗಳಲ್ಲಿ ಯಾವುದಾದರೂ ಸಿನಿಮಾವನ್ನು ತಮಗೆ ಬೇಕಾದ ನಟರೊಂದಿಗೆ ನೋಡಬೇಕು ಎಂದು ಬಯಸಿದರೆ, ಅದಕ್ಕೂ ಎಐ ಉತ್ತರ ಕೊಡಲಿದೆ. ಎಐ ನಿಮಗೆ ಬೇಕಾದಂತೆ ಸಿನಿಮಾ ಮಾಡಿಕೊಡುತ್ತದೆ. ಚಿತ್ರಕಲೆ, ದೃಶ್ಯಕಲೆ, ವಾಸ್ತುಶಿಲ್ಪ ಕ್ಷೇತ್ರದಲ್ಲೂ ಎಐ ಪಾರುಪತ್ಯ ಬೀರಲಿದೆ. ನಿಮಗೆ ಬೇಕಾದಂತೆ ಚಿತ್ರ ರಚಿಸಿಕೊಡುತ್ತದೆ. ಅಭಿರುಚಿಗೆ ತಕ್ಕಂತೆ ಮನೆ ನಿರ್ಮಾಣಕ್ಕೆ ವಾಸ್ತುಶಿಲ್ಪ ತಯಾರಿಸಿಕೊಡುತ್ತದೆ ಎಂದು ಹೇಳಿದರು.

ಕಾವಾ ವಿದ್ಯಾರ್ಥಿಗಳು ಕೋರ್ಸ್ ಮಾಡಿದ ನಂತರ ನಮಗೆ ಸ್ಕೋಪ್ ಇದೆ ಎಂದು ಭಾವಿಸಿದರೆ ನೀವು ಸೋತಂತೆ. ನಿಮ್ಮಲ್ಲೇನಿದೆ ಎಂದು ತಿಳಿದುಕೊಳ್ಳಬೇಕು. ಆಗ ಮಾತ್ರ ಸಾಧನೆ ಮಾಡಲು ಸಾಧ್ಯ. ವಿದ್ಯಾರ್ಥಿಗಳಿಗೆ ಅಸೈನ್ಮೆಂಟ್ ಕೊಟ್ಟರೆ ಎಐ ಮೊರೆ ಹೋಗುತ್ತಿದ್ದಾರೆ. ನಟನೆ, ಚಿತ್ರ ಬಿಡಿಸುವುದರಿಂದ ಬದುಕು ಕಟ್ಟಿಕೊಳ್ಳುತ್ತೇನೆ ಎಂದರೆ ಕಷ್ಟ, ಕಲೆಯಿಂದಲೇ ಬದುಕುತ್ತೇವೆ ಎಂದರೆ ಡೇಂಜರ್. ಕಳೆದ ವರ್ಷ 277 ಸಿನಿಮಾ ಬಿಡುಗಡೆಯಾಗಿದ್ದು, ಅವುಗಳಲ್ಲಿ 6 ಸಿನಿಮಾ ಹಣ ಮಾತ್ರ ವಾಪಸ್ ಬಂದಿದೆ ಎಂದು ತಿಳಿಸಿದರು.

ಕಾವಾ ಡೀನ್ ಎ.ದೇವರಾಜು ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ದೃಶ್ಯ ಕಲಾವಿದ ಎಂ.ಎಸ್.ಉಮೇಶ್, ಕಾವಾ ಆಡಳಿತಾಧಿಕಾರಿ ನಿರ್ಮಲಾ ಮಠಪತಿ, ಕಾವಾ ಶೈಕ್ಷಣಿಕ ಸಂಯೋಜಕ ಎ.ಪಿ.ಚಂದ್ರಶೇಖರ್, ಕುಂಚಕಾವ್ಯ ಸಾಂಸ್ಕೃತಿಕ ಸಮಿತಿ ಕಾರ್ಯದರ್ಶಿ ಹೇಮಂತ್ ಜೆ.ಆಚಾರ್ಯ, ಎಸ್.ಆರ್.ನೀಲಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜು(ಕಾವಾ) ಸಭಾಂಗಣದಲ್ಲಿ ಭಾನುವಾರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಹಿರಿಯ ನಿರ್ದೇಶಕ ಪ್ರಕಾಶ್ ಬೆಳವಾಡಿ ಮಾತನಾಡಿದರು.

ಡಾ.ಕೆಬಿಜಿ, ಡಾ.ಸರೋಜಾದೇವಿಯವರಿಗೆ ಶ್ರದ್ಧಾಂಜಲಿ



'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರು ಹಾಗೂ ಹಿರಿಯ ನಟಿ ಡಾ.ಬಿ.ಸರೋಜಾದೇವಿ ಅವರಿಗೆ ಸರ್.ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಜಯನಗರ ಮಹೇಶ್, ಕಾರ್ಯದರ್ಶಿ ರವಿಕುಮಾರ್, ಉಪಾಧ್ಯಕ್ಷ ಸುರೇಶ್‌ಕುಮಾರ್, ನಿರ್ದೇಶಕರಾದ ಚಂದ್ರೇಗೌಡ, ಸಂತೋಷ್‌ಕುಮಾರ್, ಶಿವರಾಜ್ ಉಪಸ್ಥಿತರಿದ್ದರು.

ಶ್ರೀ ಚಾಮುಂಡೇಶ್ವರಿ ಪೂಜಾ ಮಹೋತ್ಸವ



ಮೈಸೂರಿನ ವಿಜಯನಗರ 3ನೇ ಹಂತದ ವೈಎನ್‌ಎಸ್ ಸರ್ಕಲ್ ಗೆಳೆಯರ ಬಳಗದ ವತಿಯಿಂದ ತಾಯಿ ಚಾಮುಂಡೇಶ್ವರಿಯ ಆಷಾಢ ಮಾಸದ ಪೂಜಾ ಮಹೋತ್ಸವವನ್ನು ಏರ್ಪಡಿಸಲಾಗಿತ್ತು. ಈ ವೇಳೆ ಸಾರ್ವಜನಿಕರಿಗೆ ಪ್ರಸಾದ ವಿತರಿಸಲಾಯಿತು. ಲೋಕೇಶ್, ಗಿರೀಶ್, ಚಂದ್ರು, ನಾಗರಾಜು, ರಾಮಕೃಷ್ಣ, ಕೃಷ್ಣೇಗೌಡ, ರಮೇಶ್, ಅಮಿತ್, ಪ್ರವೀಣ್, ವೀರೇಶ್ ಉಪಸ್ಥಿತರಿದ್ದರು.

ಪಂಚಮಸಾಲಿ ಶ್ರೀ ಆರೋಗ್ಯದಲ್ಲಿ ಚೇತರಿಕೆ

ಬಾಗಲಕೋಟೆ: ಅನಾರೋಗ್ಯಕ್ಕೆ ತುತ್ತಾಗಿದ್ದ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ. ಬಾಗಲಕೋಟೆ ಕೆರೂಡಿ ಆಸ್ಪತ್ರೆಯಲ್ಲಿ ಶ್ರೀಗಳು ಚಿಕಿತ್ಸೆ ಪಡೆಯುತ್ತಿದ್ದು, ಆರೋಗ್ಯದಲ್ಲಿ ಚೇತರಿಕೆ ಕಂಡ ಬಂದ ಹಿನ್ನೆಲೆಯಲ್ಲಿ ಭಕ್ತರು ಅವರನ್ನು ಭೇಟಿ ಮಾಡಿ, ವಿಚಾರಿಸುತ್ತಿದ್ದಾರೆ.

ಬಾಗಲಕೋಟೆ ಮಾಜಿ ಶಾಸಕ ವೀರಣ್ಣ ಚರಂತಿಮಠ, ಸಂಸದ ಪಿ.ಸಿ.ಗದ್ದಿಗೌಡರ್ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು. ಮಧ್ಯಾಹ್ನ ಆಸ್ಪತ್ರೆಗೆ ಧಾರವಾಡದ ಶಾಸಕ ಅರವಿಂದ್ ಬೆಲ್ಲದ್ ಭೇಟಿ ನೀಡಿ, ಶ್ರೀಗಳ ಆರೋಗ್ಯ ವಿಚಾರಿಸಿದರು. ಲೋಬಿಪಿ, ವಾಂತಿ, ಎದೆನೋವು, ತಲೆನೋವಿನಿಂದ ಬಳಲುತ್ತಿರುವ ಸ್ವಾಮೀಜಿ ಶನಿವಾರ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಉದ್ಯೋಗ ಮೇಳಕ್ಕೆ ಶಾಸಕ ಶ್ರೀವತ್ಸ ಚಾಲನೆ



ಮೈಸೂರು ಸಿದ್ಧಾರ್ಥನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಉದ್ಯೋಗ ಮೇಳಕ್ಕೆ ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ ನೀಡಿದರು.

ಮೈಸೂರು, ಜು.20– ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ಧಾರ್ಥ ಲೇಔಟ್, ಮೈಸೂರು ಹಾಗೂ ಸಮರ್ಥನಂ ಅಂಗವಿಕಲರ ಸಂಸ್ಥೆ ಇವರ ಆಶ್ರಯದಲ್ಲಿ ಮತ್ತು ಬಾರ್ಕ್ಲೇಸ್ ಸಂಸ್ಥೆಯ ಸಹಯೋಗದೊಂದಿಗೆ, ಸಿದ್ಧಾರ್ಥನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿತ್ತು.

ಶಾಸಕ ಟಿ.ಎಸ್.ಶ್ರೀವತ್ಸ ಉದ್ಯೋಗ ಮೇಳಕ್ಕೆ ಚಾಲನೆ ನೀಡಿ ಮಾತನಾಡುತ್ತಾ, ಉದ್ಯೋಗವು ವ್ಯಕ್ತಿಯ ಆರ್ಥಿಕ ಅಭಿವೃದ್ಧಿ, ಸಾಮಾಜಿಕ ಸ್ಥಿರತೆ ಮತ್ತು ಮಾನವೀಯ ಘನತೆಗೆ ಅಡಿಪಾಯವಾಗಿದ್ದು, ಈಚಿನ ದಿನಗಳಲ್ಲಿ ಸರ್ಕಾರಗಳು ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿರುವುದರಿಂದ ಸರ್ಕಾರಿ ಶಾಲಾ–ಕಾಲೇಜುಗಳಲ್ಲಿ ದಾಖಲಾತಿ ಹೆಚ್ಚಾಗುತ್ತಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಉದ್ಯೋಗ ಮೇಳದ ಲಾಭ ಪಡೆದು, ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದರು. ಅಲ್ಲದೆ, ಸರ್ಕಾರಿ ಯೋಜನೆಗಳಲ್ಲಿ ಲಭ್ಯವಿರುವ ಆರ್ಥಿಕ ಸಹಾಯವನ್ನು ಪಡೆದು ಬದುಕನ್ನು ಸುಧಾರಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಆಡಳಿತ ತರಬೇತಿ ಸಂಸ್ಥೆ ಜಂಟಿ ನಿರ್ದೇಶಕಿ ಶ್ರೀಮತಿ ಸಾಧನಾ ಎ.ಪೋಟೆ, ವ್ಯಕ್ತಿಯು ತನ್ನ ವೃತ್ತಿ ಜೀವನವನ್ನು ರೂಪಿಸಿಕೊಳ್ಳಲು ಈ ರೀತಿಯ ವೇದಿಕೆಗಳು ಅತ್ಯುತ್ತಮ ಅವಕಾಶವನ್ನು ಒದಗಿಸುತ್ತವೆ. ತರಬೇತಿ, ಕೌಶಲಾಭಿವೃದ್ಧಿ ಮತ್ತು ಶಿಕ್ಷಣವು ಉತ್ತಮ ಉದ್ಯೋಗ ಸಾಧ್ಯತೆಯ ಹಾದಿಯಾಗಿದೆ ಎಂದು ವಿವರಿಸಿದರು.

ಸಮರ್ಥನಂ ಸಂಸ್ಥೆಯ ಉದ್ಯೋಗ ವಿಭಾಗದ ಅಧಿಕಾರಿ ಸತೀಶ್ ಕೆ ಮಾತನಾಡಿ, ಈ ಉದ್ಯೋಗಮೇಳ ಪ್ರತಿಭಾವಂತ ಉದ್ಯೋಗಾಕಾಂಕ್ಷಿಗಳು ಮತ್ತು ಉದ್ಯೋಗದಾತರನ್ನು ಒಂದೇ ವೇದಿಕೆಯಲ್ಲಿ ತರುವ ಮೂಲಕ ಅರ್ಥಪೂರ್ಣ ಸಂಪರ್ಕ ಮತ್ತು ಉದ್ಯೋಗಾವಕಾಶಗಳಿಗೆ ದಾರಿ ಮಾಡಿಕೊಡುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯರಾದ ಪ್ರೊ.ಮಾಯಾದೇವಿ, ಉದ್ಯೋಗ ಮತ್ತು ಮಾರ್ಗದರ್ಶನ ಕೋಶದ ಸಂಚಾಲಕ ಡಾ.ಸಿದ್ದರಾಮು, ಐಕ್ಯೂಎಸಿ ಸಂಚಾಲಕಿ ಪ್ರೊ.ಸವಿತಾ ಜೆ.ಪಿ. ಹಾಗೂ ಸಮರ್ಥನಂ ಸಂಸ್ಥೆಯ ಪ್ರತಿನಿಧಿಗಳಾದ ಶಿವರಾಜು, ಸುಭಾಷ್, ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸದರಿ ಉದ್ಯೋಗ ಮೇಳದಲ್ಲಿ 500ಕ್ಕೂ ಹೆಚ್ಚು ಉದ್ಯೋಗ ಆಕಾಂಕ್ಷಿಗಳು, 24 ಕಂಪನಿಗಳು ಭಾಗವಹಿಸಿ ಸುಮಾರು 120ಕ್ಕೂ ಹೆಚ್ಚು ಅಭ್ಯರ್ಥಿಗಳು ಪ್ರಥಮ ಸಂದರ್ಶನ ಮುಗಿಸಿ, ದ್ವಿತೀಯ ಸಂದರ್ಶನಕ್ಕೆ ಆಯ್ಕೆ ಆಗಿರುತ್ತಾರೆ.

ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳಿಂದ ಜು.28ರಂದು

ಮದ್ದೂರಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

ಅಧಿಕಾರಿಗಳೊಂದಿಗೆ ಶಾಸಕ ಉದಯ್ ಸಿದ್ಧತೆ ಪರಿಶೀಲನೆ



ಸೋಮನಹಳ್ಳಿಯ ತಿಮ್ಮದಾಸ್ ಹೋಟೆಲ್ ಮೈದಾನದಲ್ಲಿ ನಿರ್ಮಿಸಲಾಗುತ್ತಿರುವ ವೇದಿಕೆ ಸಿದ್ದತೆಯನ್ನು ಶಾಸಕ ಕೆ.ಎಂ.ಉದಯ್ ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಿದರು. ಡಾ.ಕುಮಾರ್, ಕೆ.ಆರ್.ನಂದಿನಿ, ಪರಶುರಾಮ್, ರಾಮಲಿಂಗಯ್ಯ ಇದ್ದರು.

ಮದ್ದೂರು: ಜುಲೈ 28ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮದ್ದೂರು ತಾಲೂಕಿಗೆ 1400 ಕೋಟಿ ರೂ.ಗಳ 75 ಅಭಿವೃದ್ಧಿ ಕಾಮಗಾರಿಗಳಿಗೆ ಶಂಕು ಸ್ಥಾಪನೆ ಮತ್ತು ಉದ್ಘಾಟನೆ ನೆರವೇರಿಸುವುದರಿಂದ ಸಮೀಪದ ಸೋಮನಹಳ್ಳಿಯ ತಿಮ್ಮದಾಸ್ ಹೋಟೆಲ್ ಮೈದಾನದಲ್ಲಿ ಬೃಹತ್ ವೇದಿಕೆ ನಿರ್ಮಾಣವಾಗುತ್ತಿದ್ದು ಶಾಸಕ ಕೆ.ಎಂ.ಉದಯ್ ಅಧಿಕಾರಿಗಳೊಂದಿಗೆ ಸಿದ್ಧತೆಯನ್ನು ಪರಿಶೀಲಿಸಿದರು.

ತಾಲೂಕಿನ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ಹಾಗೂ ಉದ್ಘಾಟನಾ ಕಾರ್ಯಕ್ರಮ ಈ ವೇದಿಕೆಯಲ್ಲಿ ನಡೆಯಲಿದ್ದು, ತಾಲೂಕಿನ ವಿವಿಧ ಗ್ರಾಮಗಳಿಂದ ಸಾವಿರಾರು ಜನರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಹಾಗಾಗಿ ಕಾರ್ಯಕ್ರಮದಲ್ಲಿ ಯಾವುದೆ ಸಮಸ್ಯೆ ಬಾರದಂತೆ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಬೇಕು ಎಂದು ಅಧಿಕಾರಿಗಳಿಗೆ ಶಾಸಕರು ಸೂಚಿಸಿದರು.

ರಾಜ್ಯ ಸರ್ಕಾರದ ಎರಡು ವರ್ಷಗಳ ಸಾಧನೆ ಹಾಗೂ ಮದ್ದೂರು ಕ್ಷೇತ್ರದ ಅಭಿವೃದ್ಧಿ ಯೋಜನೆಗಳನ್ನು ಹಾಗೂ ಸಾಧನೆಗಳನ್ನು ಜನತೆಗೆ ತಿಳಿಸುವ ವಿಶೇಷ ಬೃಹತ್ ಸಮಾವೇಶ ಇದಾಗಿದ್ದು, ಮೂಲ ಸೌಕರ್ಯಗಳ ಬಗ್ಗೆ ಎಚ್ಚರ ವಹಿಸಬೇಕು ಎಂದು ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲಾಧಿಕಾರಿ ಡಾ.ಕುಮಾರ, ಜಿಪಂ ಸಿಇಒ ಕೆ.ಆರ್.ನಂದಿನಿ, ತಹಸೀಲ್ದಾರ್ ಪರಶುರಾಮ್ ಸತ್ತಿಗೇರಿ, ತಾಪಂ ಇಒ ರಾಮಲಿಂಗಯ್ಯ, ಪುರಸಭೆ ಮುಖ್ಯಾಧಿಕಾರಿ ಮೀನಾಕ್ಷಿ, ಸಿಪಿಐ ಶಿವಕುಮಾರ್ ಇದ್ದರು.

ಹೆಚ್ಚಿನ ಅನುದಾನ ತಂದು ಮದ್ದೂರು ಮಾದರಿ ತಾಲೂಕಾಗಿ ಮಾಡುವೆ



ಗುದ್ದಲಿ ಪೂಜೆ ನೆರವೇರಿಸುತ್ತಿರುವ ಶಾಸಕ ಕೆ.ಎಂ.ಉದಯ್.

ಮದ್ದೂರು: ಆತಗೂರು ಹೋಬಳಿಯ ಜನರ ಬಹುದಿನದ ಬೇಡಿಕೆಯಾದ 19 ಕೆರೆಗಳಿಗೆ ನೀರು ತುಂಬಿಸುವುದು, ಶಿಂಷಾ ನದಿಗೆ ತಡೆಗೋಡೆ ನಿರ್ಮಾಣ, ಕೆರೆ ಕಟ್ಟೆಗಳ ಪುನಶ್ಚೇತನ ಇನ್ನಿತರ ಅಭಿವೃದ್ಧಿ ಕಾಮಗಾರಿಗಳಿಗೆ ಸಿಎಂ, ಡಿಸಿಎಂ ಚಾಲನೆ ನೀಡಲಿದ್ದಾರೆ ಎಂದು ಶಾಸಕ ಕೆಎಂ.ಉದಯ್ ತಿಳಿಸಿದರು.

ಆತಗೂರು ಹೋಬಳಿ ವ್ಯಾಪ್ತಿಯ ತೂಬಿನಕೆರೆ ಗ್ರಾಮದ ರಸ್ತೆ ಚರಂಡಿ ಅಭಿವೃದ್ಧಿಗೆ 20 ಲಕ್ಷ ಹಾಗೂ ಮಲ್ಲನಕುಪ್ಪೆ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಬಿಡುಗಡೆಯಾಗಿರುವ 50 ಲಕ್ಷ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದರು. ಈ ಭಾಗದ ಗ್ರಾಮಗಳನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸಬೇಕೆಂಬ ನಿಟ್ಟಿನಲ್ಲಿ ಹೆಚ್ಚಿನ ಅನುದಾನವನ್ನು ಪ್ರತಿ ಗ್ರಾ.ಪಂಗೆ ಹಂಚಿಕೆ ಮಾಡಿ ಈಗಾಗಲೇ ಕಾಮಗಾರಿಗಳು ನಡೆಯುತ್ತಿದ್ದು ಶೀಘ್ರವಾಗಿ ಪೂರ್ಣಗೊಂಡು ಗ್ರಾಮಸ್ಥರಿಗೆ ಅನುಕೂಲವಾಗಲಿದೆ ಎಂದರು.

ರಾಜ್ಯದಲ್ಲೇ ಮದ್ದೂರು ಕ್ಷೇತ್ರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಇತರೆ ಇಲಾಖೆ ಅಧಿಕಾರಿಗಳು ಹೆಚ್ಚಿನ ಅನುದಾನವನ್ನು ಬಿಡುಗಡೆಗೊಳಿಸಿದ್ದು ಮುಂದಿನ ದಿನಗಳಲ್ಲಿ ಮತ್ತಷ್ಟು ಅನುದಾನವನ್ನು ತಂದು ಮಾದರಿ ಕ್ಷೇತ್ರವನ್ನಾಗಿಸಲು ಪಣ ತೊಟ್ಟಿರುವುದಾಗಿ ಹೇಳಿದರು.

ಟಿಎಪಿಸಿಎಂಎಸ್ ನಿರ್ದೇಶಕ ಶಂಕರಲಿಂಗಯ್ಯ, ಗ್ರಾಪಂ. ಸದಸ್ಯರಾದ ಪ್ರಕಾಶ್, ತಿಮ್ಮರಾಜು, ವಾಸು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚೆಲುವರಾಜು, ಮುಖಂಡರಾದ ಕೆ.ದಾಸೇಗೌಡ, ಪ್ರಕಾಶ್, ಅಶೋಕ್, ಸುರೇಶ್, ರವಿ, ಮಧು ಇತರರಿದ್ದರು.

ಬೊಮ್ಮಲಾಪುರ ಡೇರಿ ನಿರ್ದೇಶಕರ ಸ್ಥಾನಕ್ಕೆ ಚುನಾವಣೆ

ಡಾಲು ರವಿ ಬಣ 8 ಸ್ಥಾನಗಳಲ್ಲಿ ಜಯಭೇರಿ



ಚುನಾವಣೆಯಲ್ಲಿ ಜಯಭೇರಿ ಭಾರಿಸಿದ ಡಾಲು ರವಿ ಬಣದ ನಿರ್ದೇಶಕರನ್ನು ಅಭಿನಂದಿಸಲಾಯಿತು.

ಕೆ.ಆರ್.ಪೇಟೆ,ಜು.20– ತಾಲೂಕಿನ ಬೊಮ್ಮಲಾಪುರ ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಆಡಳಿತ ಮಂಡಳಿಯ ನೂತನ ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಮನ್‌ಮುಲ್ ನಿರ್ದೇಶಕ ಡಾಲು ರವಿ ಬಣದ ನಿರ್ದೇಶಕರು ಜಯಭೇರಿ ಭಾರಿಸಿದ್ದಾರೆ.

ಒಟ್ಟು 10 ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಡಾಲು ರವಿ ಬಣದ 8ಮಂದಿ ನಿರ್ದೇಶಕರಾಗಿ ಗೆಲುವು ಸಾಧಿಸಿದ್ದಾರೆ.

ಗಿರಿಜಮ್ಮ ಭೀಮೇಶ್, ಜಗದಾಂಬ ಶಿವ ನಂಜಪ್ಪ, ನೀಲಾವತಿ ಶೇಖರ್, ಪ್ರೇಮ ಪಾಪಣ್ಣ, ಮಣಿಯಮ್ಮ ದೇವಪ್ಪ, ಶೋಭಾ ಮಂಜಪ್ಪ ಸುಂದರಮ್ಮ ಮಾದಪ್ಪ ಮಂಜುಳ ಶಿವಲಿಂಗಪ್ಪ ಗೀತಾ ದೇವಪ್ಪ, ಕುಮಾರಮ್ಮ ಸಿಂಗ್ರಯ್ಯ ಅವರುಗಳು ಬೊಮ್ಮಲಾಪುರ ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಕೆ.ಹೇಮಲತಾ ತಿಳಿಸಿದ್ದಾರೆ.

ನೂತನ ನಿರ್ದೇಶಕರನ್ನು ಮನ್‌ಮುಲ್ ನಿರ್ದೇಶಕರಾದ ಡಾಲು ರವಿ, ಎಂ.ಬಿ. ಹರೀಶ್, ಗ್ರಾಮದ ಮುಖಂಡರಾದ ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಪಟೇಲ್ ಪಾಪಣ್ಣ, ಮುಖಂಡರಾದ ಪುಟ್ಟರಾಜು, ಶೇಖರಪ್ಪ, ಸ್ಕೂಲ್ ಮಾಸ್ಟರ್ ಬೀರಪ್ಪ, ಗ್ರಾಪಂ ಸದಸ್ಯೆ ರೇಖಾಮಂಜು, ಪುಟ್ಟಪ್ಪ, ಬಸವಣ್ಣ, ಶಿವಲಿಂಗಪ್ಪ ಮತ್ತಿತರರು ಅಭಿನಂದಿಸಿದ್ದಾರೆ.

ಚುನಾವಣಾಧಿಕಾರಿಯಾಗಿ ಪಾಂಡವಪುರ ಸಹಕಾರ ಅಭಿವೃದ್ಧಿ ಅಧಿಕಾರಿ ಕೆ. ಹೇಮಲತಾ, ಸಹ ಚುನಾವಣಾಧಿಕಾರಿಯಾಗಿ ಸಂಘದ ಕಾರ್ಯದರ್ಶಿ ಯಶೋಧ ಶಿವಕುಮಾರ್ ಕಾರ್ಯನಿರ್ವಹಣೆ ಮಾಡಿದರು.

ಚುನಾವಣಾ ಫಲಿತಾಂಶ ಘೋಷಣೆಯಾಗುತ್ತಿದ್ದಂತೇ ಗ್ರಾಮದ ದೇವಾಲಯದ ಆವರಣದಲ್ಲಿ ಸಭೆ ಸೇರಿದ ವಿಜೇತ ಅಭ್ಯರ್ಥಿಗಳು ಹಾಗೂ ಮುಖಂಡರು ಮನ್‌ಮುಲ್ ನಿರ್ದೇಶಕ ಡಾಲು ರವಿ ಮತ್ತು ಎಂ.ಬಿ.ಹರೀಶ್ ಅವರ ಪರವಾಗಿ ಘೋಷಣೆ ಕೂಗಿ ಸಂತಸ ವ್ಯಕ್ತ ಪಡಿಸಿದ ಪಟಾಕಿ, ಸಿಡಿಸಿ, ಸಿಹಿ ವಿತರಣೆ ಮಾಡಿ ವಿಜಯೋತ್ಸವ ಆಚರಣೆ ಮಾಡಿದರು.

ಕಿಕ್ಕೇರಿಯಲ್ಲಿ ಛಾಯಾ ಸಂಘ ಉದ್ಘಾಟನೆ



ಕಿಕ್ಕೇರಿಯಲ್ಲಿ ನೂತನವಾಗಿ ಛಾಯಾ ಸಂಘ ಉದ್ಘಾಟಿಸಲಾಯಿತು. ಆರ್‌ಟಿಒ ಮಲ್ಲಿಕಾರ್ಜುನ, ಕೆಪಿಸಿಸಿ ಸದಸ್ಯ ಸುರೇಶ್, ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯ ಹೇಮಗಿರಿ ಶಾಖೆಯ ಕಾರ್ಯದರ್ಶಿ ಜೆ.ಎನ್. ರಾಮಕೃಷ್ಣೇಗೌಡ, ಕುರುಹಿನ ಶೆಟ್ಟಿ ಸಂಘದ ಅಧ್ಯಕ್ಷ ಸೂರ್ಯನಾರಾಯಣ್, ಜೆಡಿಎಸ್ ಯುವ ಘಟಕ ಅಧ್ಯಕ್ಷ ವೆಂಕಟೇಶ್, ಮುಖಂಡರಾದ ಕಡಹೆಮ್ಮಿಗೆ ರಮೇಶ್ ಇದ್ದರು.

ಕೆ.ಆರ್.ಪೇಟೆ ಕೆಪಿಎಸ್ ಪ್ರಾಂಶುಪಾಲರಿಗೆ ಅಭಿನಂದನೆ



ಕೆ.ಆರ್.ಪೇಟೆ ಕೆಪಿಎಸ್ ಶಾಲೆಗೆ ನೂತನ ಪ್ರಾಂಶುಪಾಲರಾಗಿ ಅಧಿಕಾರ ವಹಿಸಿಕೊಂಡಿರುವ ಡಿ.ಟಿ.ಪುಲಗೇರಯ್ಯನವರನ್ನು ಶಾಲೆಯ ಹಿರಿಯ ವಿದ್ಯಾರ್ಥಿಗಳು ಅಭಿನಂದಿಸಿ ಸ್ವಾಗತಿಸಿದರು.

ಕೆ.ಆರ್.ಪೇಟೆ,ಜು.20– ಎರಡು ದಶಕಗಳಿಂದಲೂ ನಿಗಧಿತ ಅವಧಿಗೆ ಕಾಲೇಜಿಗೆ ಬಂದು ನಿಷ್ಠೆಯಿಂದ ಪಾಠವನ್ನು ಮಾಡುವ ಜೊತೆಗೆ ಈಗ ಕೆಪಿಎಸ್ ಶಾಲೆಗೆ ಪ್ರಾಂಶುಪಾಲರಾಗಿ ಅಧಿಕಾರ ವಹಿಸಿಕೊಂಡಿರುವ ಡಿ.ಟಿ.ಪುಲಗೇರಯ್ಯ ಎಲ್ಲರಿಗೂ ಮಾದರಿಯಾಗಿದ್ದಾರೆ ಎಂದು ಶಾಲೆಯ ಹಿರಿಯ ವಿದ್ಯಾರ್ಥಿ ಕೆ.ಎನ್. ಮಧುಸೂಧನ್ ತಿಳಿಸಿದರು.

ಪಟ್ಟಣದ ಹೃದಯ ಭಾಗದಲ್ಲಿರುವ ಶತಮಾನದ ಶಾಲೆ ಈಗ ಕೆ.ಪಿಎಸ್ ಶಾಲೆಯಾಗಿದ್ದು ಈ ಶಾಲೆಗೆ ನೂತನ ಪ್ರಾಂಶುಪಾಲರಾಗಿ ಅಧಿಕಾರ ವಹಿಸಿಕೊಂಡಿರುವ ಡಿ.ಟಿ.ಪುಲಗೇರಯ್ಯ ಅವರಿಗೆ ಹಿರಿಯ ವಿದ್ಯಾರ್ಥಿಗಳ ತಂಡದೊಂದಿಗೆ ಹೃದಯಸ್ಪರ್ಶಿಯಾಗಿ ಅಭಿನಂದಿಸಿ ಮಾತನಾಡಿದರು.

ಈ ಸಮಯದಲ್ಲಿ ತಾಲೂಕು ಉಪನ್ಯಾಸಕರ ಸಂಘದ ಅಧ್ಯಕ್ಷ ಬಿ.ಎಲ್. ಮಂಜುನಾಥ್, ಹಿರಿಯ ಉಪನ್ಯಾಸಕರಾದ ಗೋವಿಂದರಾಜು, ಗಂಗಾಧರಯ್ಯ, ಹಿರಿಯ ವಿದ್ಯಾರ್ಥಿಗಳಾದ ಸಾಧಿಕ್, ಪುರುಷೋತ್ತಮ್, ಚಂದ್ರು, ಮಣಿ, ನಟೇಶಾಚಾರ್, ಹೆಚ್.ಬಿ. ಮಂಜುನಾಥ್, ನಿರಂಜನ್, ಶಿವಕುಮಾರ್, ಬಸವರಾಜು, ಮತ್ತಿತರರು ಹಾಜರಿದ್ದು ನೂತನ ಪ್ರಾಂಶುಪಾಲರಿಗೆ ಶುಭ ಹಾರೈಸಿದರು.

ಸೌರಶಕ್ತಿ ಸ್ವ–ಉದ್ಯೋಗ ಮೇಳದಲ್ಲಿ ರೈತ ಮಹಿಳೆಯರಿಗೆ ಅರಿವು



ಪಾಂಡವಪುರ, ಜು.20– ಗ್ರಾಮೀಣ ಪ್ರದೇಶದ ಮಹಿಳೆಯರ ಆರ್ಥಿಕ ಸಬಲೀಕರಣ, ಸ್ವಾವಲಂಬನೆ ಮತ್ತು ಜೀವನ ಮಟ್ಟ ಸುಧಾರಣೆಯ ಉದ್ದೇಶದಿಂದ ಪಟ್ಟಣದ ಟಿಎಪಿಸಿಎಂಎಸ್ ರೈತ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಸೌರಶಕ್ತಿ ಸ್ವ–ಉದ್ಯೋಗ ಮೇಳದಲ್ಲಿ ಸ್ವ ಸಹಾಯ ಸಂಘದ ಸಾವಿರಾರು ಮಹಿಳೆಯರು ಭಾಗವಹಿಸಿ ಕಾರ್ಯಕ್ರಮದ ಮಹತ್ವ ತಿಳಿದುಕೊಂಡರು.

ಪುಟ್ಟಣ್ಣಯ್ಯ ಫೌಂಡೇಶನ್ ಮತ್ತು ಸೆಲ್ಕೋ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ ಸ್ವ–ಉದ್ಯೋಗ ಮೇಳದಲ್ಲಿ ಸೌರ ಶಕ್ತಿ ಚಾಲಿತ ಕಿರು ಯಂತ್ರೋಪಕರಣ ಹಾಗೂ ಸ್ಥಳೀಯವಾಗಿ ಲಭ್ಯವಿರುವ ಕಚ್ಚಾ ಸಂಪನ್ಮೂಲಗಳನ್ನು ಬಳಸಿಕೊಂಡು ಯಾವ್ಯಾವ ಉದ್ಯಮ ನಡೆಸಬಹುದು, ಅದರ ತಯಾರಿಕೆ, ಮಾರಾಟ ಮತ್ತು ಅದರಿಂದ ಮಹಿಳೆಯರಿಗಾಗುವ ಅನುಕೂಲಗಳ ಬಗ್ಗೆ ಪ್ರಾತ್ಯಕ್ಷಿಕೆ ನೀಡಲಾಯಿತು. ಕಾರ್ಯಕ್ರಮದಲ್ಲಿ ತಾಲೂಕಿನ ಕಸಬಾ ಹೋಬಳಿ ವ್ಯಾಪ್ತಿಯ ನೂರಾರು ಸ್ವ ಸಹಾಯ ಗುಂಪುಗಳ ಮಹಿಳೆಯರು ಭಾಗವಹಿಸಿ ಕಿರು ಯಂತ್ರೋಪಕರಣಗಳ ಮೂಲಕ ಗುಡಿ ಕೈಗಾರಿಕೆ ನಡೆಸಲು ಅಗತ್ಯವಿದ್ದ ಮಾಹಿತಿಗಳನ್ನು ಪಡೆದುಕೊಂಡರು.

ಮೇಳದಲ್ಲಿ ಸೋಲಾರ್ ಚಾಲಿತ ಹಪ್ಪಳ ತಯಾರಿಕೆ ಯಂತ್ರ, ರಾಗಿ ಸಂಸ್ಕರಣಾ ಯಂತ್ರ, ಭತ್ತ, ಕಬ್ಬಿನ ರಸ, ಗಂಧದ ಕಡ್ಡಿ ತಯಾರಿಕೆ ಯಂತ್ರ, ಭತ್ತದ ನಾಟಿ ಯಂತ್ರ, ಆಯಿಲ್ ಮಿಲ್, ಯಾಂತ್ರಿಕವಾಗಿ ಮಡಿಕೆ ತಯಾರಿಕೆ ಯಂತ್ರ ಸೇರಿದಂತೆ ಆಹಾರ ಪದಾರ್ಥಗಳ ಮತ್ತು ಕೃಷಿಗೆ ಅಗತ್ಯವಾದ ಯಂತ್ರೋಪಕರಣಗಳ ಮೂಲಕ ಮಹಿಳೆಯರಿಗೆ ಪ್ರಾತ್ಯಕ್ಷಿಕೆ ನೀಡಲಾಯಿತು.

ಶಾಸಕ ದರ್ಶನ್ ಪುಟ್ಟಣ್ಣಯ್ಯ, ಜಿಪಂ ಕಾರ್ಯನಿರ್ವಾಹಕ ಅಧಿಕಾರಿ ಕೆ.ಆರ್. ನಂದಿನಿ, ಸ್ಮಿತಾ ಪುಟ್ಟಣ್ಣಯ್ಯ ಮಾತನಾಡಿದರು. ಕಾರ್ಯಕ್ರಮದಲ್ಲಿ ರೈತನಾಯಕಿ ಸುನೀತಾ ಪುಟ್ಟಣ್ಣಯ್ಯ, ರೈತಸಂಘ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ, ತಾಲೂಕು ಅಧ್ಯಕ್ಷ ಕೆನ್ನಾಳು ವಿಜಯಕುಮಾರ್, ತಹಸೀಲ್ದಾರ್ ಎಸ್.ಸಂತೋಷ್, ತಾಪಂ ಸಹಾಯಕ ನಿರ್ದೇಶಕ ಸುರೇಂದ್ರ, ಸೆಲ್ಕೊ ಫೌಂಡೇಶನ್ ಮುಖ್ಯಸ್ಥ ನಾಗೇಶ್, ಕಿರು ಉದ್ಯಮಿಗಳಾದ ಪದ್ಮಾಕ್ಷಿ, ಗಿರಿಜಾ ಇತರರು ಇದ್ದರು.

ಒಂದನೇ ಪುಟದಿಂದ

ನರ್ಸಿಂಗ್ ವಿದ್ಯಾರ್ಥಿಗಳು ಜಲಸಮಾಧಿ

ನಂತರ ಈಜುತ್ತಿದ್ದ ಐವರು ವಿದ್ಯಾರ್ಥಿಗಳು ನೀರಿನ ಸೆಳೆತಕ್ಕೆ ಒಳಗಾಗಿದ್ದಾರೆ. ನೀರಿನಲ್ಲಿ ಮುಳುಗುತ್ತಿದ್ದ ಇಬ್ಬರನ್ನು ದಡದಲ್ಲಿ ನಿಂತಿದ್ದ ರಕ್ಷಿಸಿದ್ದಾನೆ. ಸ್ಥಳೀಯರು ಮತ್ತು ಇನ್ನಿತರ ಪ್ರವಾಸಿಗರು ನೆರವಿಗೆ ಬರುವ ವೇಳೆಗೆ ಮೂವರೂ ಹಿನ್ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿದ್ದರು. ಇದರಿಂದ ಅವರನ್ನು ಸ್ಥಳೀಯರಿಗೆ ರಕ್ಷಿಸಲು ಸಾಧ್ಯವಾಗಲಿಲ್ಲ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಹಿನ್ನೀರಿನಲ್ಲಿ ಮೂವರು ವಿದ್ಯಾರ್ಥಿಗಳು ಮುಳುಗಿರುವ ವಿಷಯ ತಿಳಿಯುತ್ತಿದ್ದಂತೆ ಇಲವಾಲ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಮಹೇಂದ್ರ ಸಿಬ್ಬಂದಿಗಳೊಂದಿಗೆ ಆಗಮಿಸಿ ಪರಿಶೀಲಿಸಿದರು. ಸ್ಥಳಕ್ಕೆ ಅಗ್ನಿಶಾಮಕ ಸಿಬ್ಬಂದಿ ನುರಿತ ಈಜುಗಾರರನ್ನು ಕರೆಸಿ ಸತತ 2 ಗಂಟೆ ಕಾರ್ಯಾಚರಣೆ ನಡೆಸಿದ ಬಳಿಕ ಸಂಜೆ 4 ಗಂಟೆಗೆ ಮೂವರು ವಿದ್ಯಾರ್ಥಿಗಳ ಮೃತದೇಹ ಪತ್ತೆಯಾಯಿತು. ನಂತರ ಮಹಜರ್ ನಡೆಸಿ ಮೈಸೂರಿನ ಸರ್ಕಾರಿ ಮೆಡಿಕಲ್ ಕಾಲೇಜಿನ ಶವಾಗಾರಕ್ಕೆ ದೇಹಗಳನ್ನು ಸ್ಥಳಾಂತರಿಸಲಾಯಿತು. ಮೃತಪಟ್ಟ ಮೂವರು ವಿದ್ಯಾರ್ಥಿ ಗಳ ಪೋಷಕರಿಗೆ ಮಾಹಿತಿ ನೀಡಲಾಗಿದೆ. ಸಂಜೆ ವೇಳೆಗೆ ಪಿರಿಯಾಪಟ್ಟಣದ ಪ್ರಶಾಂತ್ ಹಾಗೂ ಸಂತೇಮರಹಳ್ಳಿಯ ಸಿದ್ದೇಶ್ ಪೋಷಕರು ಶವಾಗಾರದ ಬಳಿ ಆಗಮಿಸಿದ್ದಾರೆ. ಮಕ್ಕಳನ್ನು ಕಳೆದುಕೊಂಡ ಅವರ ಗೋಳಾಟ ಹೇಳತೀರದ್ದಾಗಿದೆ. ಬೆಳಗ್ಗೆ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ವಾರಸುದಾರರಿಗೆ ದೇಹವನ್ನು ಒಪ್ಪಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಇಲವಾಲ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಇನ್ನೆಷ್ಟು ಜೀವಗಳು ಬಲಿಯಾಗಬೇಕು?

ನಶೆಯಲ್ಲಿ ಈಜಲು ನೀರಿಗಿಳಿಯುತ್ತಾರೆ. ಹೇಳುವವರು–ಕೇಳುವವರು ಯಾರೂ ಇಲ್ಲದ ಕಾರಣ ಯಾವ ಅಂಕೆ–ಶಂಕೆ ಇಲ್ಲದೆ ಮನಬಂದಂತೆ ವರ್ತಿಸುತ್ತಾರೆ.

ಸ್ನೇಹಿತರೊಟ್ಟಿಗೆ ಪ್ರವಾಸಕ್ಕೆ ಬರುವ ಅಮಾಯಕ ಯುವಕರು ಬಲವಂತಕ್ಕೆ ನೀರಿಗಿಳಿದು ಮುಳುಗಿ ಸಾವನ್ನಪ್ಪಿರುವ ಘಟನೆಗಳು ನಡೆದಿವೆ. ಈಜು ಬರುವವರೂ ಆಕಸ್ಮಿಕವಾಗಿ ದುರಂತ ಸಾವಿಗೀಡಾಗಿದ್ದಾರೆ. ಕೆಲ ಹೊತ್ತಿನ ಸಂಭ್ರಮಕ್ಕೆ ಅಮೂಲ್ಯವಾದ ಜೀವವನ್ನೇ ಕಳೆದುಕೊಳ್ಳುತ್ತಿದ್ದಾರೆ. ದುರಂತ ಸಂಭವಿಸಿದ ಬಳಿಕ ಪೊಲೀಸರು, ಅಗ್ನಿಶಾಮಕ ಸಿಬ್ಬಂದಿ ಹಾಗೂ ಈಜು ಪರಿಣಿತರು ದಿನಗಟ್ಟಲೆ ಮೃತದೇಹಗಳಿಗೆ ಹುಡುಕಾಟ ನಡೆಸುವುದು, ಸಿಕ್ಕ ಬಳಿಕ ಮಹಜರು ನಡೆಸಿ ಶವಾಗಾರಕ್ಕೆ ಸಾಗಿಸುವುದು, ಪ್ರಕರಣ ದಾಖಲಿಸಿಕೊಳ್ಳುವುದು ಸೇರಿದಂತೆ ನಿಯಮಾನುಸಾರ ಪ್ರಕ್ರಿಯೆಗಳು ನಡೆಯುತ್ತವೆ. ಆದರೆ ಹೋದ ಜೀವ ಮತ್ತೆ ಬರುವುದಿಲ್ಲ. ಮನೆ ಮಕ್ಕಳನ್ನು ಕಳೆದುಕೊಂಡ ಕುಟುಂಬದವರ ದುಃಖ ಭರಿಸಲಾಗುವುದಿಲ್ಲ. ಪೊಲೀಸರು ಆರಂಭದಲ್ಲೇ ಸೂಕ್ತ ಕ್ರಮ ಕೈಗೊಂಡಿದ್ದರೆ ದುರಂತಗಳು ಮರುಕಳಿಸುತ್ತಿರಲಿಲ್ಲ. ಪತ್ರಿಕೆಯಲ್ಲಿ ಸಚಿತ್ರ ವರದಿ ಪ್ರಕಟವಾದ ನಂತರವಾದರೂ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬಹುದಿತ್ತು. ವಾರಾಂತ್ಯ ದಿನಗಳಲ್ಲಿ ಹೆಚ್ಚು ಜನ ಬರುತ್ತಾರೆಂಬ ಕನಿಷ್ಠ ಜ್ಞಾನದಿಂದ ಮುಂಜಾಗ್ರತೆ ವಹಿಸಬೇಕಿತ್ತು. ಇಂದು ಮೂವರು ವಿದ್ಯಾರ್ಥಿಗಳ ಸಾವಿಗೆ ಪೊಲೀಸರ ನಿರ್ಲಕ್ಷ್ಯವೇ ಕಾರಣ. ಈಗಲಾದರೂ ಎಚ್ಚೆತ್ತುಕೊಳ್ಳುವ ಮೂಲಕ ಜೀವಬಲಿಯನ್ನು ತಡೆಯಬೇಕಿದೆ ಎಂಬುದು ಸಾರ್ವಜನಿಕರ ಆಗ್ರಹವಾಗಿದೆ.

ಹಿನ್ನೀರು ಪ್ರದೇಶಕ್ಕೆ ಅನತಿ ದೂರದಲ್ಲಿ ರೆಸಾರ್ಟ್‌ಗಳು ತಲೆ ಎತ್ತಿದ್ದು, ಅಲ್ಲಿ ಯಾವುದೇ ನಿಯಮಗಳನ್ನು ಪಾಲಿಸಿದಂತಿಲ್ಲ. ಆಸುಪಾಸಿನಲ್ಲಿ ಅಕ್ರಮ ಮದ್ಯ ಮಾರಾಟ ಎಗ್ಗಿಲ್ಲದೆ ನಡೆಯುತ್ತಿದೆ. ಇದರಿಂದ ಹಿನ್ನೀರು ಬಳಿ ಮೋಜು ಮಸ್ತಿ ಹೆಚ್ಚಾಗಿದೆ. ಈ ಬಗ್ಗೆ ಸ್ಥಳೀಯ ಗ್ರಾಮ ಪಂಚಾಯ್ತಿ, ಕಾವೇರಿ ನೀರಾವರಿ ನಿಗಮ ಹಾಗೂ ಅಬಕಾರಿ ಇಲಾಖೆ ಅಧಿಕಾರಿಗಳು ಚಕಾರ ಎತ್ತುತ್ತಿಲ್ಲ ಎಂದು ಜನ ಆರೋಪಿಸಿದ್ದಾರೆ.

ಸಂಸತ್ ಮುಂಗಾರು ಅಧಿವೇಶನ

(ಶರದ್ ಪವಾರ್ ಬಣ) ಸುಪ್ರಿಯಾ ಸುಳೆ, ಡಿಎಂಕೆಯ ಟಿ.ಆರ್. ಬಾಲು ಮತ್ತು ಆರ್‌ಪಿಐ (ಎ) ನಾಯಕ, ಕೇಂದ್ರ ಸಚಿವ ರಾಮದಾಸ್ ಅಠಾವಳೆ ಭಾಗವಹಿಸಿದ್ದರು. ಕಾಂಗ್ರೆಸ್, ಬಿಜೆಪಿ, ಟಿಎಂಸಿ, ಡಿಎಂಕೆ, ಜೆಡಿಯು, ಸಿಪಿಎಂ, ಸಿಪಿಐ, ಶಿವಸೇನಾ, ಜನಸೇನಾ ಹಾಗೂ ಎನ್‌ಸಿಪಿ(ಎಸ್‌ಪಿ) ಪಕ್ಷಗಳಿಗೆ ಸೇರಿದ 50 ಸಂಸದರು ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ ಶೂನ್ಯ ವೇಳೆ ವಿವಿಧ ವಿಚಾರಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಲು ಸಜ್ಜಾಗಿದ್ದಾರೆ. ವಿವಿಧ ಪಕ್ಷಗಳ ಸಂಸದರಿಂದ 34 ಪ್ರಶ್ನೆಗಳ ಸಲ್ಲಿಕೆಯಾಗಿವೆ ಎಂದು ಮೂಲಗಳು ತಿಳಿಸಿವೆ. ಈ ಪೈಕಿ, ಏರ್ ಇಂಡಿಯಾ ವಿಮಾನ ಪತನಕ್ಕೆ ಸಂಬಂಧಿಸಿ ಲೋಕಸಭೆಯಲ್ಲಿ 23 ಪ್ರಶ್ನೆಗಳು ಹಾಗೂ ರಾಜ್ಯಸಭೆಯಲ್ಲಿ 11 ಪ್ರಶ್ನೆಗಳನ್ನು ಕೇಳಲಾಗುತ್ತದೆ ಎಂದು ತಿಳಿದುಬಂದಿದೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಸ್ವಾಗತ

ಎಂಬುದು ನಮ್ಮ ಆಶಯ ಎಂದು ಕೆ.ಪಾರ್ಶ್ವನಾಥ್ ಜೈನ್ ಆಗ್ರಹಿಸಿದ್ದಾರೆ. ಪದೇ ಪದೇ ಆರೋಪಗಳನ್ನು ಮಾಡಿ ಶ್ರೀ ಕ್ಷೇತ್ರ ಧರ್ಮಸ್ಥಳ ಕುರಿತು ಸಾರ್ವಜನಿಕರಲ್ಲಿ ಗೊಂದಲ ಸೃಷ್ಟಿಸುವ ಕೆಲಸಗಳು ನಡೆಯುತ್ತಿದೆ. ಹೀಗಾಗಿ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಇದರ ಸತ್ಯಾಸತ್ಯತೆ ಸಾರ್ವಜನಿಕರ ಮುಂದೆ ತನಿಖೆ ಮೂಲಕ ಬಹಿರಂಗಪಡಿಸಬೇಕು ಎಂದು ಧರ್ಮಸ್ಥಳ ಆಗ್ರಹಿಸುತ್ತಿದೆ ಎಂದಿದ್ದಾರೆ.

ಕಬಿನಿಗೆ ಬಾಗಿನ ಸಮರ್ಪಣೆ



ಬೆಳಗ್ಗೆ ರಾಮಕೃಷ್ಣನಗರದಲ್ಲಿರುವ ತಮ್ಮ ಸ್ವಗೃಹದಿಂದ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ತೆರಳಿ ಅಲ್ಲಿಂದ ಹೆಲಿಕಾಪ್ಟರ್‌ನಲ್ಲಿ ಹೆಚ್.ಡಿ.ಕೋಟೆಯ ಅತಿಥಿ ಗೃಹದ ಬಳಿ ಇರುವ ಹೆಲಿಪ್ಯಾಡ್‌ಗೆ ಬಂದಿಳಿದರು. ಬಳಿಕ ಅಲ್ಲಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವ ಮಹದೇವಪ್ಪ ಹಾಗೂ ಶಾಸಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಐರಾವತ ಬಸ್‌ನಲ್ಲಿ ಕಬಿನಿ ಜಲಾಶಯದ ಮುಖ್ಯ ದ್ವಾರದವರೆಗೆ ಆಗಮಿಸಿದರು. ಬಳಿಕ ಜಲಾಶಯದ ಮೇಲೆ ಪೂಜಾ ಸ್ಥಳದವರೆಗೂ ಎಲ್ಲಾ ಗಣ್ಯರು ಒಟ್ಟಿಗೆ ಬಂದು ಗಂಗೆ ಪೂಜೆಯಲ್ಲಿ ಪಾಲ್ಗೊಂಡರು.

ಅರ್ಚಕ ಭಾಸ್ಕರ್ ಕಿತ್ತೂರು ಹಾಗೂ ಚಾಮುಂಡಿಬೆಟ್ಟದ ಪ್ರಧಾನ ಆಗಮಿಕ ಡಾ. ಎನ್.ಶಶಿಶೇಖರ್ ದೀಕ್ಷಿತ್ ನೇತೃತ್ವದಲ್ಲಿ ಗಂಗೆ ಪೂಜೆ ಜರುಗಿತು. ಬಳಿಕ ಕನ್ಯಾ ಲಗ್ನದಲ್ಲಿ ಅಭಿಜಿನ್ ಮುಹೂರ್ತದಲ್ಲಿ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಜಲಾಶಯಕ್ಕೆ ಬಾಗಿನ ಅರ್ಪಿಸಿ ನಮಿಸಿದರು.

ಬಾಗಿನ ಅರ್ಪಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಕಬಿನಿ ಜಲಾಶಯದ ಪುನಶ್ಚೇತನ ಅಭಿವೃದ್ಧಿಗಾಗಿ 32.25 ಕೋಟಿ ರೂ.ಗಳನ್ನು ನೀಡಲಾಗಿದೆ. ಕಬಿನಿ ಜಲಾಶಯ ತುಂಬಿರುವುದರಿಂದ ಕಬಿನಿ ಜಲಾನಯನ ಪ್ರದೇಶದ ವ್ಯಾಪ್ತಿಯಲ್ಲಿ 1.25 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಆಗಲಿದ್ದು ಈ ಪ್ರದೇಶದ ರೈತರಿಗೆ ಬೆಳೆ ಬೆಳೆಯಲು ಅನುಕೂಲ ಆಗಲಿದೆ ಎಂದರು.

ಮೇಕೆದಾಟು ಯೋಜನೆ ಪ್ರಾರಂಭಿಸಲು ನಮ್ಮ ಸರ್ಕಾರ ಸಿದ್ದವಿದೆ ಅದಕ್ಕೆ ಕೇಂದ್ರದ ಅನುಮತಿ ನೀಡಬೇಕು. ಈ ಯೋಜನೆ ಜಾರಿಗಾಗಿ ನಾವು ಪಾದಯಾತ್ರೆ ನಡೆಸಿದವು ಎಂದರು. ತಾರಕ ಜಲಾಶಯ ಮತ್ತು ಮುಖ್ಯ ನಾಲೆ ಹಾಗೂ ಉಪ ಕಾಲುವೆ ಪುನಶ್ಚೇತನ ಅಭಿವೃದ್ಧಿಗೆ ಶಾಸಕ ಅನಿಲ್ ಚಿಕ್ಕಮಾದು ಅವರು ಮನವಿ ಮಾಡಿದ್ದಾರೆ ಮುಂದಿನ ದಿನಗಳಲ್ಲಿ ತಾರಕ ಜಲಾಶಯ ಪುನಶ್ಚೇತನಕ್ಕೆ ಹಣ ಬಿಡುಗಡೆ ಮಾಡುವುದಾಗಿ ಭರವಸೆ ನೀಡಿದರು.

> **6 ತಾರಕ ಜಲಾಶಯ ಪುನಶ್ಚೇತನ. ಕೆಆರ್‌ಎಸ್ ಮಾದರಿಯಲ್ಲಿ ಕಬಿನಿ ಜಲಾಶಯ ಬೃಂದಾವನ. ತಾಲೂಕಿನ ಪ್ರಮುಖ ರಸ್ತೆಗಳ ಅಭಿವೃದ್ಧಿ, ಜಲಾಶಯದ ನಾಲೆಗಳ ಅಭಿವೃದ್ಧಿ ಕೆಲಸ ಹಾಗೂ ಇತ್ಯಾದಿ ಅಭಿವೃದ್ಧಿ ಕಾರ್ಯಗಳಿಗೆ 300 ರೂ. ಕೋಟಿ ಅಭಿವೃದ್ಧಿ ಕಾಮಗಾರಿಗೆ ಎಂದು ಮುಖ್ಯಮಂತ್ರಿಗಳಿಗೆ ಮನವಿ ಪತ್ರ ನೀಡಿದ್ದೇನೆ.**
>
> **-ಶಾಸಕ ಅನಿಲ್ ಚಿಕ್ಕಮಾದು.**

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಸಚಿವ ಸಂಪುಟದಲ್ಲಿ ತೀರ್ಮಾನಿಸಿದಂತೆ 32.25 ಕೋಟಿ ರೂ ಜೊತೆಗೆ ಡ್ರಿಪ್ ಯೋಜನೆ ಅಡಿಯಲ್ಲಿ ಕಬಿನಿ ಜಲಾಶಯದ ಭದ್ರತೆ ಸೇರಿದಂತೆ ಕ್ರಸ್ಟ್ ಗೇಟ್‌ಗಳ ಆಧುನಿಕರಣ ಹಾಗೂ ಪುನಶ್ಚೇತನಕ್ಕೆ 88 ಕೋಟಿ ರೂಗಳ ಅಭಿವೃದ್ಧಿಗಾಗಿ ಅನುಮೋದನೆಗೆ ಸಿದ್ದತೆ ಮಾಡಿಕೊಳ್ಳಲಾಗಿದೆ ಎಂದರು.

ಕಬಿನಿ ಜಲಾಶಯವು ರಾಜ್ಯದಲೇ ಮೊದಲು ತುಂಬುವ ಜಲಾಶಯವಾಗಿದ್ದು, ತಮಿಳುನಾಡು ಮತ್ತು ಕರ್ನಾಟಕ ನಡುವೆ ಜಲಾವಿವಾದ ಆಗದಂತೆ ತಡೆಯಲು ಕಬಿನಿ ಜಲಾಶಯವು ನಮಗೆ ವರದಾನವಾಗಿದೆ. ಮೇಕೆದಾಟು ಯೋಜನೆ ನಂತರ ಕಬಿನಿ ಜಲಾನಯನ ಪ್ರದೇಶದ ವ್ಯಾಪ್ತಿಯಲ್ಲಿ ಅಚ್ಚುಕಟ್ಟು ಪ್ರದೇಶವನ್ನು ಹೆಚ್ಚಿಸಲು ಮುಂದಾಗುವುದಾಗಿ ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಹಾಗೂ ಶಾಸಕ ಅನಿಲ್ ಚಿಕ್ಕಮಾದು ಅವರನ್ನು ಮಂಗಳವಾದ್ಯ, ಚಂಡೆ, ಯಕ್ಷಗಾನ ಹಾಗೂ ಪೂರ್ಣ ಕುಂಭ ಕಳಸದೊಂದಿಗೆ ಜಲಾಶಯಕ್ಕೆ ಸ್ವಾಗತಿಸಿದರು. ಕಬಿನಿ ಜಲಾಶಯದ ಅಣೆಕಟ್ಟನ್ನು ವಿವಿಧ ಹೂಗಳಿಂದ ಶೃಂಗರಿಸಲಾಗಿತ್ತು ಅದಲ್ಲದೆ ಜಲಾಶಯದ ಉದ್ದಕ್ಕೂ ಕನ್ನಡ ಬಾವುಟ ರಾರಾಜಿಸುತ್ತಿತ್ತು.

ಸಂಸದೀಯ ಸಮಿತಿ ವರದಿ ಮಂಡನೆ

ವಿಭಾಗಗಳ ಸಂಖ್ಯೆ 536 ಆಗಿದೆ. ಆದಾಯ ತೆರಿಗೆ ಮಸೂದೆ 2025 57 ಕೋಷ್ಟಕಗಳನ್ನು ಹೊಂದಿದೆ, ಇದು ಅಸ್ತಿತ್ವದಲ್ಲಿರುವ ಕಾಯ್ದೆಯಲ್ಲಿ 18 ಕ್ಕೆ ಹೋಲಿಸಿದರೆ ಮತ್ತು 1,200 ನಿಬಂಧನೆಗಳು ಮತ್ತು 900 ವಿವರಣೆಗಳನ್ನು ತೆಗೆದುಹಾಕಲಾಗಿದೆ.

ವಿನಾಯಿತಿಗಳು ಮತ್ತು ಟಿಡಿಎಸ್/ಟಿಸಿಎಸ್‌ಗೆ ಸಂಬಂಧಿಸಿದ ನಿಬಂಧನೆಗಳನ್ನು ಕೋಷ್ಟಕ ಸ್ವರೂಪದಲ್ಲಿ ಇರಿಸುವ ಮೂಲಕ ಮಸೂದೆಯಲ್ಲಿ ಹೆಚ್ಚು ಸ್ಪಷ್ಟವಾಗಿ ಮಾಡಲಾಗಿದೆ, ಆದರೆ ಲಾಭರಹಿತ ಸಂಸ್ಥೆಗಳಿಗೆ ಅಧ್ಯಾಯವನ್ನು ಸರಳ ಭಾಷೆಯ ಬಳಕೆಯೊಂದಿಗೆ ಸಮಗ್ರಗೊಳಿಸಲಾಗಿದೆ. ಇದರ ಪರಿಣಾಮವಾಗಿ, ಪದಗಳ ಸಂಖ್ಯೆ 34,547 ರಷ್ಟು ಕಡಿಮೆಯಾಗಿದೆ.

ತೆರಿಗೆದಾರರಿಗೆ ಅನುಕೂಲಕರವಾದ ಕ್ರಮದಲ್ಲಿ, ಮಸೂದೆಯು 1961 ರ ಆದಾಯ ತೆರಿಗೆ ಕಾಯ್ದೆಯಲ್ಲಿ ಉಲ್ಲೇಖಿಸಿರುವ ಹಿಂದಿನ ವರ್ಷ ಎಂಬ ಪದವನ್ನು 'ತೆರಿಗೆ ವರ್ಷ' ಎಂದು ಬದಲಾಯಿಸುತ್ತದೆ. ಅಲ್ಲದೆ, ಮೌಲ್ಯಮಾಪನ ವರ್ಷದ ಪರಿಕಲ್ಪನೆಯನ್ನು ತೆಗೆದುಹಾಕಲಾಗಿದೆ.

ಲೋಕಸಭೆಯಲ್ಲಿ ಮಸೂದೆಯನ್ನು ಪರಿಚಯಿಸುವಾಗ, ನಿರ್ಮಲಾ ಸೀತಾರಾಮನ್ ಮಸೂದೆಯಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡಲಾಗಿದೆ ಎಂದು ಹೇಳಿದ್ದರು. ಪದಗಳ ಸಂಖ್ಯೆಯನ್ನು 5.12 ಲಕ್ಷದಿಂದ ಅರ್ಧಕ್ಕೆ ಇಳಿಸಲಾಗಿದೆ ಮತ್ತು ವಿಭಾಗಗಳನ್ನು 819 ರಿಂದ 236 ಕ್ಕೆ ಇಳಿಸಲಾಗಿದೆ. ಮಸೂದೆಯನ್ನು ಲೋಕಸಭೆಯ ಆಯ್ಕೆ ಸಮಿತಿಗೆ ಉಲ್ಲೇಖಿಸಿ ಮುಂದಿನ ಅಧಿವೇಶನದ ಮೊದಲ ದಿನದೊಳಗೆ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ಆದೇಶಿಸಲಾಯಿತು. ಸಂಸತ್ತಿನ ಮಳೆಗಾಲ ಅಧಿವೇಶನವು ನಾಳೆಯಿಂದ ಆಗಸ್ಟ್ 21 ರವರೆಗೆ ನಡೆಯಲಿದೆ.

ಬಿಜೆಪಿ, ಸಹಾಯವಾಣಿ ಆರಂಭ

ಕಟ್ಟಬೇಕು ಎಂದು ವ್ಯಾಪಾರಿಗಳಿಗೆ ನೋಟಿಸ್ ಕಳುಹಿಸಿದ್ದಾರೆ. ಆದರೆ ಇದು ಸಲ್ಲದು ಎಂದು ಅವರು ಆಕ್ಷೇಪಿಸಿದರು.

ವ್ಯಾಪಾರಿಗಳು ಯಾವುದೇ ಕಾರಣಕ್ಕೂ ಕಳ್ಳರಲ್ಲ ಮತ್ತು ತೆರಿಗೆಯನ್ನು ವಂಚಿಸುವವರಲ್ಲ. ಆದರೆ ತೆರಿಗೆಯ ಪರಿಸ್ಥಿತಿ ಅವರಿಗೆ ಅರ್ಥವಾಗಿಲ್ಲ ಮತ್ತು ಸರಕಾರದವರು ಅವರಿಗೆ ಅರ್ಥ ಮಾಡಿಸಿಲ್ಲ. ಬಡ ವ್ಯಾಪಾರಿಗಳು ಗೊಂದಲದಲ್ಲಿದ್ದಾರೆ ಹಾಗೂ ಆತಂಕಗೊಂಡಿದ್ದಾರೆ. ಆದ್ದರಿಂದ ಸರಕಾರ ಇದನ್ನು ಗಮನಿಸಿ, ಬಡಜನರ ರಕ್ಷಣೆಗೆ ಧಾವಿಸಬೇಕು ಎಂದು ಅವರು ಆಗ್ರಹಿಸಿದರು. ಶೇ.90ರಷ್ಟು ವರ್ತಕರಿಗೆ ರಾಜ್ಯ ಜಿಎಸ್‌ಟಿ ಘಟಕದ ವತಿಯಿಂದ ಯಾವುದೇ ಮಾಹಿತಿ ನೀಡದೆ ಮತ್ತು ತೆರಿಗೆ ಮಾಹಿತಿಯನ್ನು ಕೊಡದೆ ಸಣ್ಣ ವ್ಯಾಪಾರಿಗಳಲ್ಲಿ ಆತಂಕ ಸೃಷ್ಟಿಸಿದ್ದಾರೆ. ಆದ್ದರಿಂದ ಅಧಿಕಾರಿಗಳು ವ್ಯಾಪಾರಿ ಗಳಿಗೆ ನೀಡಿರುವ 14,000 ನೋಟಿಸ್ ಕಾನೂನಿಗೆ ವಿರುದ್ಧವಾಗಿದೆ ಮತ್ತು ಸಂವಿಧಾನ ವಿರುದ್ಧವಾಗಿದೆ ಎಂದು ಅವರು ಆಕ್ಷೇಪಿಸಿದರು.

ಈ ನಡುವೆ ನೋಟಿಸ್ ಕುರಿತು ಸ್ಪಷ್ಟನೆ ನೀಡಿರುವ ವಾಣಿಜ್ಯ ತೆರಿಗೆ ಇಲಾಖೆ, ಹಲವಾರು ಮಂದಿ ಜಿಎಸ್‌ಟಿ ನೋಂದಣಿ ಮಾಡಿಕೊಳ್ಳದೆ ಯುಪಿಐ ಮೂಲಕವೇ ಮಿತಿ ಮೀರಿ ಲಕ್ಷಾಂತರ ರೂಪಾಯಿ ಸ್ವೀಕರಿಸಿರುವುದು ಪರಿಶೀಲನೆ ವೇಳೆ ಕಂಡು ಬಂದಿದೆ. ಸ್ವೀಕರಿಸಿರುವ ಮೊತ್ತದ ಕುರಿತು ವ್ಯಾಪಾರಿಗಳು ಸೂಕ್ತ ವಿವರಣೆ ನೀಡಿದಲ್ಲಿ ಜಿಎಸ್‌ಟಿ ಮೊತ್ತ ಕಡಿಮೆಯಾಗಲಿದೆ ಎಂದು ಹೇಳಿದೆ.

ಅಧಿಕಾರಿಗಳನ್ನೊಳಗೊಂಡ ಎಸ್‌ಐಟಿ ರಚನೆ

ಈ ಸಂಬಂಧ ದಾಖಲಾಗಿರುವ ಮತ್ತು ದಾಖಲಾಗಬಹುದಾದ ಎಲ್ಲ ಅಪರಾಧ ಪ್ರಕರಣಗಳ ತನಿಖೆ ನಡೆಸುವಂತೆ ತಂಡಕ್ಕೆ ನಿರ್ದೇಶನ ನೀಡಲಾಗಿದೆ. ಆರೋಪಗಳ ಕುರಿತಂತೆ ಈಗಾಗಲೇ ದಾಖಲಾಗಿರುವ ಎಲ್ಲ ಪ್ರಕರಣಗಳನ್ನು ಪೊಲೀಸ್ ಮಹಾನಿರ್ದೇಶಕರು ತನಿಖಾ ತಂಡಕ್ಕೆ ವರ್ಗಾಯಿಸಿ, ಅಗತ್ಯ ಇರುವ ಅಧಿಕಾರಿ, ಸಿಬ್ಬಂದಿಯನ್ನು ಒದಗಿಸಬೇಕು. ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಲಭ್ಯ ಇರುವ ಸಂಪನ್ಮೂಲಗಳನ್ನು ತನಿಖಾ ತಂಡ ಬಳಸಿಕೊಳ್ಳಬೇಕು ಎಂದು ಆದೇಶದಲ್ಲಿ ವಿವರಿಸಲಾಗಿದೆ.

ತನಿಖೆಗೆ ಸಂಬಂಧಿಸಿದ ಪ್ರಗತಿಯನ್ನು ಪೊಲೀಸ್ ಮಹಾನಿರ್ದೇಶಕರಿಗೆ ಆಗಿಂದಾಗ್ಗೆ ವರದಿ ಮಾಡಬೇಕು. ಅಲ್ಲದೆ, ಎಲ್ಲ ಪ್ರಕರಣಗಳ ಸಮಗ್ರ ತನಿಖೆ ನಡೆಸಿ ಆದಷ್ಟು ಬೇಗ ವರದಿಯನ್ನು ಪೊಲೀಸ್ ಮಹಾನಿರ್ದೇಶಕರ ಮೂಲಕ ಸರ್ಕಾರಕ್ಕೆ ಸಲ್ಲಿಸಬೇಕು ಎಂದೂ ಗೃಹ ಇಲಾಖೆ ನಿರ್ದೇಶನ ನೀಡಿದೆ.

ಏನಿದು ಪ್ರಕರಣ?: ಧರ್ಮಸ್ಥಳ ಗ್ರಾಮದಲ್ಲಿ ಈ ಹಿಂದಿನಿಂದ ಹಲವಾರು ಅಪರಾಧ ಕೃತ್ಯಗಳು ನಡೆದಿವೆ. ನನಗೆ ಜೀವಬೆದರಿಕೆ ಒಡ್ಡಿ, ಈ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಮೃತದೇಹಗಳನ್ನು ರಹಸ್ಯವಾಗಿ ವಿಲೇವಾರಿ ಮಾಡಿಸಿದ್ದಾರೆ ಎಂದು ವ್ಯಕ್ತಿಯೊಬ್ಬರು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ಹಾಗೂ ಧರ್ಮಸ್ಥಳ ಪೊಲೀಸ್ ಠಾಣೆಗೆ ಜುಲೈ 3ರಂದು ದೂರು ನೀಡಿದ್ದರು. ಈ ಬಗ್ಗೆ ಭಾರತೀಯ ನ್ಯಾಯ ಸಂಹಿತೆಯ ಕಲಂ 211 (ಎ) ಅಡಿಯಲ್ಲಿ ಧರ್ಮಸ್ಥಳ ಠಾಣೆಯಲ್ಲಿ ಜುಲೈ 4ರಂದು ಪ್ರಕರಣ ದಾಖಲಾಗಿತ್ತು.

ಜುಲೈ 11ರಂದು ವಕೀಲರ ಜತೆ ಬೆಳ್ತಂಗಡಿ ನ್ಯಾಯಾಲಯಕ್ಕೆ ಹಾಜರಾಗಿದ್ದ ಅದೇ ದೂರುದಾರ, ಧರ್ಮಸ್ಥಳ ಭಾಗದಲ್ಲಿ ನೂರಾರು ಮೃತದೇಹಗಳನ್ನು ದಫನ ಮಾಡಿರುವುದಾಗಿ ಹೇಳಿಕೆ ನೀಡಿ ದ್ದರು. ಕಳೆದ ಎರಡು ದಶಕಗಳಲ್ಲಿ ಅತ್ಯಾಚಾರ, ಹತ್ಯೆ ಮತ್ತು ದೌರ್ಜನ್ಯಗಳು ಈ ಭಾಗ ದಲ್ಲಿ ನಡೆದಿವೆ ಎಂದೂ ಹೇಳಿಕೆ ದಾಖಲಿಸಿದ್ದರು.

ಎಂ.ಟೆಕ್ ಎನ್ವಿರಾನ್ಮೆಂಟಲ್ ಕೋರ್ಸ್ ಆರಂಭ

ಮೈಸೂರು,ಜು.20(ಜಿಎ)–ಮೈಸೂರು ತಾಲೂಕಿನ ತಾಂಡವಪುರದ ಮಹಾರಾಜ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ನೂತನವಾಗಿ ಎಂಟೆಕ್ ಇನ್ ಎನ್ವಿರಾನ್ಮೆಂಟಲ್ ಎಂಜಿನಿಯರಿಂಗ್ ಕೋರ್ಸ್ ಪ್ರಾರಂಭಿಸಲಾಗಿದೆ ಎಂದು ಕಾಲೇಜಿನ ಅಡ್ಮಿಶನ್ ಕೌನ್ಸೆಲರ್ ಮಹಮ್ಮದ್ ಸಲಾಮತ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಾರಾಜ ಎಜುಕೇಶನ್ ಟ್ರಸ್ಟ್ ಹೆಸರಿನಲ್ಲಿ ಎಲ್‌ಕೆಜಿಯಿಂದ ವೃತ್ತಿಪರ ಕೋರ್ಸ್‌ಗಳವರೆಗೆ ಅನೇಕ ವಿಭಾಗಗಳನ್ನು ಸಂಸ್ಥೆಯು ಹೊಂದಿದೆ. ಸ್ಥಳೀಯ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಎಂಟೆಕ್ ಆರಂಭಿಸಲಾಗಿದೆ. ವಿದ್ಯಾರ್ಥಿಗಳು ಪ್ರಯೋಜನ ಪಡೆಯಬೇಕು. ವಿವಿಧ ಸರ್ಕಾರಿ ಹುದ್ದೆಗಳಿಗೆ ಈ ಕೋರ್ಸ್ ಸಹಕಾರಿಯಾಗಲಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಜಂಟಿ ಕಾರ್ಯದರ್ಶಿ ಹೆಚ್.ಕೆ.ಚೇತನ್, ಸಿವಿಲ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಬಿ.ಸಿ.ನಾಗೇಂದ್ರ ಪ್ರಸಾದ್, ಉಪನ್ಯಾಸಕ ಮನು ಎಸ್.ಗೌಡ ಇದ್ದರು.

ವಿಕಲಚೇತನ ದಿನಾಚರಣೆ 2025ರ ಅಂಗವಾಗಿ ರಾಷ್ಟ್ರಪ್ರಶಸ್ತಿಗೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಮೈಸೂರು, ಜು.20– ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ ನವದೆಹಲಿ ಇವರಿಂದ ಪ್ರತಿ ವರ್ಷದ ಡಿಸೆಂಬರ್ 3ನೇ ದಿನಾಂಕದಂದು ಆಚರಿಸಲಾಗುವ ರಾಷ್ಟ್ರ ಮಟ್ಟದ 'ವಿಶ್ವ ವಿಕಲಚೇತನರ ದಿನಾಚರಣೆ' ಸಮಾರಂಭದಲ್ಲಿ ವಿಕಲಚೇತನರ ಕ್ಷೇತ್ರಕ್ಕೆ ಗಣನೀಯವಾಗಿ ಸೇವೆ ಸಲ್ಲಿಸಿದ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ 'ರಾಷ್ಟ್ರ ಪ್ರಶಸ್ತಿ' 2025 ನೀಡುವ ಸಂಬಂಧ ಅರ್ಜಿಯನ್ನು ಸಲ್ಲಿಸಲು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ ನವದೆಹಲಿ ಇವರ ಜಾಲತಾಣ www.depwd.gov.in ಮತ್ತು ರಾಷ್ಟ್ರೀಯ ಪುರಸ್ಕಾರ ಪೋರ್ಟಲ್ www.awards.gov.in ಗಳಲ್ಲಿ ಜುಲೈ 31 ಒಳಗಾಗಿ ಆನ್‌ಲೈನ್‌ನ ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821–2490111 ಗೆ ಸಂಪರ್ಕಿಸಬಹುದು ಎಂದು ಮೈಸೂರು ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಶಂಕರಗೌಡ ಪಾಟೀಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ ಸೋಮವಾರ 21 ಜುಲೈ 2025

ಆನೆಗಳನ್ನು ಕಾಡಿಗಟ್ಟಿದ ಅರಣ್ಯ ಇಲಾಖೆ

ಸಿದ್ದಾಪುರ,ಜು.20–ತಿತಿಮತಿ ಅರಣ್ಯ ವಲಯಕ್ಕೆ ಒಳಪಡುವ ಪಾಲಿಬೆಟ್ಟ ವ್ಯಾಪ್ತಿಯ ಚೆನ್ನಯ್ಯನಕೋಟೆ, ಮಾಲ್ದಾರೆ ಸುತ್ತಮುತ್ತಲ ಕಾಫಿ ತೋಟಗಳಲ್ಲಿ ಬೀಡು ಬಿಟ್ಟಿದ್ದ ಸುಮಾರು 27 ಕಾಡಾನೆಗಳನ್ನು ಮರಳಿ ಅರಣ್ಯಕ್ಕೆ ಅಟ್ಟುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ.

ಕಾಫಿ ತೋಟಗಳಲ್ಲಿ ಕಾಡಾನೆಗಳು ಬೀಡು ಬಿಟ್ಟಿದ್ದರಿಂದ ಕಾರ್ಮಿಕರು ಪ್ರತಿನಿತ್ಯ ಆತಂಕ ದಲ್ಲೇ ಕೆಲಸ ಮಾಡುತ್ತಿದ್ದರು. ಇದರಿಂದಾಗಿ ಆನೆಗಳನ್ನು ಮರಳಿ ಅರಣ್ಯಕ್ಕೆ ಅಟ್ಟುವಂತೆ ಒತ್ತಾಯ ಕೇಳಿ ಬಂದಿದ್ದ ಹಿನ್ನೆಲೆಯಲ್ಲಿ ಸತತ ಎರಡು ದಿನಗಳ ಕಾಲ ಕಾರ್ಯಾಚರಣೆ ನಡೆಸಿದ ಅರಣ್ಯ ಇಲಾಖೆ ಸುಮಾರು 27 ಕಾಡಾನೆಗಳನ್ನು ಮರಳಿ ಅರಣ್ಯಕ್ಕೆ ಅಟ್ಟುವಲ್ಲಿ ಯಶಸ್ವಿಯಾಗಿದೆ.



ಕಾಫಿ ತೋಟಗಳಲ್ಲಿದ್ದ ಕಾಡಾನೆಗಳನ್ನು ಅಟ್ಟುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ.

ಕಾಡಾನೆ ಕಾರ್ಯಾಚರಣೆ ನಡೆಯುತ್ತಿದ್ದ ಹಿನ್ನೆಲೆಯಲ್ಲಿ ಈ ಭಾಗದ ಕಾರ್ಮಿಕರಿಗೆ 2 ದಿನಗಳ ರಜೆ ನೀಡಲಾಗಿತ್ತು. ಆದರೂ ಕೆಲ ಮಾಲೀಕರು ರಜೆ ನೀಡದೆ ಕಾರ್ಮಿಕರನ್ನು ಕೆಲಸದಲ್ಲಿ ತೊಡಗಿಸಿಕೊಂಡಿದ್ದರು ಎಂದು ಅರಣ್ಯಾಧಿಕಾರಿಗಳು ಮಾಹಿತಿ ನೀಡಿದ್ದಾರೆ. ವಿರಾಜಪೇಟೆ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಜಗನ್ನಾಥ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಗೋಪಾಲ್ ನಿರ್ದೇಶನದ ಮೇರೆಗೆ ವಲಯ ಅರಣ್ಯ ಅಧಿಕಾರಿ ಗಂಗಾಧರ್ ನೇತೃತ್ವದಲ್ಲಿ ಉಪವಲಯ ಅರಣ್ಯ ಅಧಿಕಾರಿ ಶಶಿ ಪಿ.ಟಿರನ್ನೊಳಗೊಂಡ ಅರಣ್ಯ ಇಲಾಖೆಯ ಸಿಬ್ಬಂದಿ ಕಾಡಾನೆಗಳನ್ನು ಅರಣ್ಯಕ್ಕೆ ಓಡಿಸುವಲ್ಲಿ ಯಶಸ್ವಿಯಾದರು.

ಕಾರ್ಯಾಚರಣೆಯಲ್ಲಿ ಅರಣ್ಯ ರಕ್ಷಕ ರಾಜೇಶ್, ವನ್ಯಜೀವಿ ವಲಯದ ಅರಣ್ಯ ರಕ್ಷಕ ಮತ್ತು ಸಿಬ್ಬಂದಿಗಳು, ಚನ್ನಂಗಿ ಆರ್‌ಆರ್‌ಟಿ ಸಿಬ್ಬಂದಿಗಳು ದೇವಮಚ್ಚಿ ಶಾಖೆಯ ಆರ್‌ಆರ್‌ಟಿ ಸಿಬ್ಬಂದಿಗಳು, ಟಾಟಾ ಕಾಫಿ ಸಂಸ್ಥೆಯ ಎಲಿಫೆಂಟ್ ಟ್ರ್ಯಾಕರ್ಸ್ ಭಾಗವಹಿಸಿದ್ದರು.

ಆಸ್ತಿಗಾಗಿ ಅಪ್ಪನನ್ನೇ ಕೊಲೆ ಮಾಡಿದ ಪುತ್ರನ ಬಂಧನ

ಮಡಿಕೇರಿ,ಜು.20–ಹಣ ಮತ್ತು ಆಸ್ತಿಗಾಗಿ ಅಪ್ಪನನ್ನೇ ಅಪಹರಿಸಿ ಕಾವೇರಿ ನದಿಗೆ ಎಸೆದು ಕೊಲೆ ಮಾಡಿ ಸಾಕ್ಷ್ಯ ನಾಶಕ್ಕೆ ಯತ್ನಿಸಿದ ಆರೋಪಿ ಪುತ್ರನನ್ನು ಕುಶಾಲನಗರ ಗ್ರಾಮಾಂತರ ಠಾಣಾ ಪೊಲೀಸರು ಬಂಧಿಸಿದ್ದಾರೆ. ಕೆ.ಎಂ. ಚಂದ್ರಶೇಖರ್(28) ಎಂಬಾತನೇ ಬಂಧಿತ ಆರೋಪಿಯಾಗಿದ್ದು, ಕೃತ್ಯಕ್ಕೆ ಸಹಕರಿಸಿದ ಇತರ ಆರೋಪಿಗಳ ಬಂಧನಕ್ಕಾಗಿ ಪೊಲೀಸರು ಕ್ರಮ ಕೈಗೊಂಡಿದ್ದಾರೆ.

ಘಟನೆ ಹಿನ್ನೆಲೆ : ಚಿಕ್ಕಬೆಟ್ಟಗೇರಿ ಗ್ರಾಮದ ಕಾವೇರಿ ನದಿಯಲ್ಲಿ ಅಪರಿಚಿತ ವ್ಯಕ್ತಿಯ ಮೃತದೇಹ ಪತ್ತೆಯಾಗಿತ್ತು. ಇದರ ಪತ್ತೆಗೆ ಮುಂದಾದಾಗ ಈ ವ್ಯಕ್ತಿ ಕೂಡು ಮಂಗಳೂರು ನಿವಾಸಿ ಮಂಜಣ್ಣ ಎಂಬುದಾಗಿ ತಿಳಿದು ಬಂದಿತ್ತು. ತನಿಖೆ ಸಂದರ್ಭದಲ್ಲಿ ಮಂಜಣ್ಣ ಕೌಟುಂಬಿಕ ಸಮಸ್ಯೆಯಿಂದಾಗಿ 14 ವರ್ಷಗಳಿಂದ ತನ್ನ ಕುಟುಂಬದಿಂದ ದೂರ ಉಳಿದಿರುವುದು ಪತ್ತೆಯಾಗಿತ್ತು. ಮಾತ್ರವಲ್ಲದೇ ಸ್ಥಳೀಯ ಕಾಫಿ ಕ್ಯೂರಿಂಗ್‌ನಲ್ಲಿ ಕೆಲಸ ಮಾಡುತ್ತಿದ್ದಾಗ ಮಿಷನ್‌ಗೆ ಎಡಕಾಲು ಸಿಲುಕಿಕೊಂಡ ಪರಿಣಾಮ ಕಾಲು ತುಂಡರಿಸಲ್ಪಟ್ಟಿರುವ ವಿಚಾರವೂ ಬೆಳಕಿಗೆ ಬಂದಿತ್ತು.




ಚಂದ್ರ ಶೇಖರ್

ಕಾಲು ತುಂಡಾಗಿ ನಡೆಯಲು ಕಷ್ಟವಾಗಿರುವಾಗ ಕಾವೇರಿ ನದಿಯಲ್ಲಿ ಮುಳುಗಿ ಮೃತಪಟ್ಟಿರುವ ಬಗ್ಗೆ ಅವರ ಪತ್ನಿ, ಶಂಕೆ ವ್ಯಕ್ತಪಡಿಸಿ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದರು.

ಪೂರ್ವ ನಿಯೋಜಿತ ಕೃತ್ಯ : ಪ್ರಕರಣದ ತನಿಖೆಗಾಗಿ ಸೋಮವಾರಪೇಟೆ ಡಿವೈಎಸ್ಪಿ ಚಂದ್ರಶೇಖರ್ ನೇತೃತ್ವ ದಲ್ಲಿ ವಿಶೇಷ ತನಿಖಾ ತಂಡವನ್ನು ರಚಿಸಲಾಗಿತ್ತು. ಮಾಹಿತಿ ಸಂಗ್ರಹಿಸಿದ ತನಿಖಾ ತಂಡ ಮೃತರ ಪುತ್ರ ಚಂದ್ರಶೇಖರ್ ಎಂಬಾತನನ್ನು ವಿಚಾರಣೆಗೆ ಒಳಪಡಿಸಿದೆ. ಹಣ ಮತ್ತು ಆಸ್ತಿ ವಿಚಾರಕ್ಕೆ ಚಂದ್ರಶೇಖರ್ ಪೂರ್ವ ನಿಯೋಜಿತವಾಗಿ ತನ್ನ ಸ್ನೇಹಿತರನ್ನು ಬಳಸಿಕೊಂಡು ಮಾ. 14ರಂದು ಕೂಡು ಮಂಗಳೂರು ಗ್ರಾಮದ ಮನೆಯಿಂದ ತಂದೆ ಮಂಜಣ್ಣ ಅವರನ್ನು ಕಾರಿನಲ್ಲಿ ಅಪಹರಿಸಿದ್ದರು. ಮಂಜಣ್ಣ ಕಾರಿನಲ್ಲಿ ಕೂಗಿಕೊಂಡಾಗ ಚಂದ್ರಶೇಖರ್ ಮತ್ತವನ ಸ್ನೇಹಿತರು ಹಲ್ಲೆ ನಡೆಸಿದ್ದು, ಇದರಿಂದ ಮಂಜಣ್ಣ ಪ್ರಜ್ಞೆ ತಪ್ಪಿದ್ದಾರೆ. ಮಂಜಣ್ಣ ಮೃತ ಪಟ್ಟಿರುವುದಾಗಿ ಭಾವಿಸಿ ದೇಹವನ್ನು ಚಿಕ್ಕಬೆಟ್ಟಗೇರಿಯ ಕಾವೇರಿ ನದಿಯಲ್ಲಿ ಎಸೆದು ಆರೋಪಿಗಳು ಪರಾರಿಯಾಗಿದ್ದಾರೆ ಮಂಜಣ್ಣ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದರು. ಅಪಹರಣ, ಸಾಕ್ಷ್ಯ ನಾಶಪಡಿಸಲು ಪ್ರಯತ್ನಿಸಿರುವುದು ತನಿಖೆಯಲ್ಲಿ ಕಂಡು ಬಂದಿದ್ದು, ಪ್ರಕರಣದ ಪ್ರಮುಖ ಆರೋಪಿ ಚಂದ್ರಶೇಖರ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ಕೃತ್ಯದಲ್ಲಿ ಭಾಗಿಯಾದ ಇತರ ಆರೋಪಿಗಳ ಪತ್ತೆಗೆ ಪೊಲೀಸರು ಕ್ರಮ ಕೈಗೊಂಡಿದ್ದಾರೆ.

ಶೂಗಾಗಿ ಪ್ರವಾಹದ ನೀರಿಗೆ ಜಿಗಿದ ಯುವಕ




ಬೆಟ್ ಕಟ್ಟಿಕೊಂಡು 35 ಅಡಿ ಎತ್ತರದ ಕಕ್ಕಬೆಯ ಸೇತುವೆಯಿಂದ ಪ್ರವಾಹದ ನೀರಿಗೆ ಜಿಗಿದ ಯುವಕ

ನಾಪೋಕ್ಲು, ಜು.20– ಐದು ಸಾವಿರ ರೂ. ಬೆಟ್ಟಿಂಗ್ ಕಟ್ಟಿಕೊಂಡು ಯುವಕ ಸುಮಾರು 35 ಅಡಿ ಎತ್ತರದ ಸೇತುವೆಯಿಂದ ಹೊಳೆಗೆ ಹಾರಿದ ಘಟನೆ ಕಕ್ಕಬೆಯಲ್ಲಿ ಜರುಗಿದೆ.

ಸಮೀಪದ ಕುಂಜಿಲ ಗ್ರಾಮದ ಯುವಕರು 5000 ರೂ ಶ್ಯೂಸ್ (ಬೂಟಿಗೆ ಬೆಟ್)ಗೆ ಚಾಲೆಂಜ್ ಮಾಡಿ ಈ ಸಾಹಸಕ್ಕೆ ಇಳಿದಿದ್ದಾರೆ ಎನ್ನಲಾಗಿದೆ. ಯುವಕ ನೋರ್ವ ಕಕ್ಕಬೆ ಪೇಟೆಯಲ್ಲಿರುವ ಸೇತುವೆ ಮೇಲೆಯಿಂದ ಜಿಗಿಯುತ್ತಿರುವ ವಿಡಿಯೋ ತುಣುಕು ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಯುವಕ ಜೀವದ ಹಂಗು ತೊರೆದು ಸೇತುವೆ ಮೇಲಿಂದ ಸುಮಾರು 10 ಅಡಿ ಪ್ರವಾಹದ ನೀರಿಗೆ ಜಿಗಿದಿದ್ದು ಈಜಿ ದಡ ಸೇರಿ ಚಾಲೆಂಜನ್ನು ಪೂರೈಸಿದ್ದಾನೆ. ಇದೀಗ ಈ ಹುಚ್ಚು ಸಾಹಸದ ಬಗ್ಗೆ ಪರ, ವಿರೋಧಗಳ ಚರ್ಚೆಗೆ ಗ್ರಾಸವಾಗಿದೆ.

ಸೋರಿಕೆಯಾಗುತ್ತಿರುವ ವಡ್ಡರಮಾಡು ಕಟ್ಟೆ ಕೆರೆ: ಗೇಟ್ ದುರಸ್ತಿಗೆ ಆಗ್ರಹ



ವಡ್ಡರಮಾಡು ಕಟ್ಟೆ ಕೆರೆಯ ಗೇಟ್ ದುರಸ್ತಿಯಿಂದ ನೀರು ಸೋರಿಕೆಯಾಗುತ್ತಿದೆ

ಮಡಿಕೇರಿ,ಜು.20– ನಾಗರಹೊಳೆ ರಾಷ್ಟ್ರೀಯ ಉದ್ಯಾನ ಸರಹದ್ದಿನಲ್ಲಿರುವ ವಡ್ಡರಮಾಡು ಕಟ್ಟೆ ಕೆರೆಯ ನೀರು ಸೋರಿಕೆಯಾಗುತ್ತಿದ್ದು ಗೇಟ್ ದುರಸ್ತಿಗೆ ಒಳಗಾಗಿದೆ. ಸುಮಾರು 15 ಎಕರೆ ವಿಸ್ತೀರ್ಣದ ಕೆರೆ ಕಟ್ಟೆ ನಿರ್ಮಾಣವಾಗಿ 75 ವರ್ಷ ಕಳೆದಿದ್ದು ಇಲಾಖೆಗಳ ಮೂಲಕ ಕಾಯಕಲ್ಪಕ್ಕೆ ಕಾಯುತ್ತಿದೆ.

ಜನ, ಜಾನುವಾರು, ಕಾಡು ಪ್ರಾಣಿಗಳಿಗೆ ಬೇಸಿಗೆಯಲ್ಲಿ ನೀರುಣಿಸುತ್ತಿದ್ದ ವಡ್ಡರ ಮಾಡು ಬೃಹತ್ ಕೆರೆ ಪೊನ್ನಂಪೇಟೆ ನಿಟ್ಟೂರು ವ್ಯಾಪ್ತಿಯ ಸುಮಾರು 200 ಎಕರೆಗೂ ಅಧಿಕ ಭತ್ತದ ಗದ್ದೆ, ತೋಟಗಳಿಗೆ ಬೇಸಿಗೆಯಲ್ಲಿ ನೀರಿನ ಆಸರೆಗೆ ಮೂಲವಾಗಿರುವ ಕೆರೆ ಕಟ್ಟೆಯಲ್ಲಿ 25 ಅಡಿ ನೀರು ಸಂಗ್ರಹವಾಗುತ್ತಿತ್ತು. ಮಳೆಗಾಲದಲ್ಲಿ ತುಂಬಿ ತುಳುಕುತ್ತಿದ್ದ ಕೆರೆಯ ನೀರು 3 ವರ್ಷದಿಂದ ಸೋರಿಕೆ ಯಾಗುತ್ತಿದ್ದು, ಕೇವಲ 7 ಅಡಿಗೆ ಕುಸಿದಿದೆ.

ನಾಗರಹೊಳೆ ಕಟ್ಟೆಹಾಡಿಯ ಸುಮಾರು 10 ಕುಟುಂಬ ನಿಟ್ಟೂರು, ಬಾಳೆಲೆಗೆ, ಶಾಲಾ ಕಾಲೇಜು ಸಂಪರ್ಕ ಹೊಂದಲು ವಡ್ಡರಮಾಡು ಕಟ್ಟೆ ಮೇಲ್ಭಾಗದ ಕಾಲು ಹಾದಿಯನ್ನೇ ಬಳಸುತ್ತಿದ್ದರು. ಇದೀಗ ಅಲ್ಲೆಲ್ಲಾ ಕಾಡು ಬೆಳೆದು ಮಳೆಗಾಲದಲ್ಲಿ ಓಡಾಟಕ್ಕೆ ಅಡ್ಡಿಯಾಗಿದೆ. ಕೆಳ ಭಾಗದಲ್ಲಿ ರಸ್ತೆ ಇದ್ದು ಇದೀಗ ವಾಹನ ಓಡಾಟಕ್ಕೆ ಯಾವುದೇ ಅಡ್ಡಿ ಇಲ್ಲದಿದ್ದರೂ ವಿಶಾಲ ಕೆರೆಯ ವೀಕ್ಷಣೆಗೆ ಎತ್ತರದ ಕಟ್ಟೆಯ ಮೇಲಿನ ಕಾಲು ದಾರಿಯ ಕಾಡು ಕಡಿಯುವ ಕೆಲಸ ಆಗಬೇಕಿದೆ.

ನಾಗರಹೊಳೆ ವನ್ಯಜೀವಿ ವಿಭಾಗದ ಅಧಿಕಾರಿಗಳು ವಡ್ಡರಮಾಡು ಕಟ್ಟೆಯ ಕೆಲವು ಭಾಗ ಶಿಥಿಲಗೊಂಡಿದ್ದು ಸಂಬಂಧಿಸಿದ ಅಧಿಕಾರಿಗಳು ಬೇಸಿಗೆ ಯಲ್ಲಿ ನೀರು ಸೋರಿಕೆಯಾಗುವ ಭಾಗವನ್ನು ಗುರುತಿಸಿ ದುರಸ್ಥಿಪಡಿಸಬೇಕಾಗಿದೆ. ಸ್ಥಳೀಯ ಸಮಾಜ ಸೇವಕ ತೀತೀರ ಚೋಂದಮ್ಮ ಜಯಾ ಈಗಾಗಲೇ ವಿರಾಜಪೇಟೆ ಶಾಸಕ ಪೊನ್ನಣ್ಣರಿಗೆ ಮಾಹಿತಿ ನೀಡಿರುವುದಾಗಿ ತಿಳಿಸಿದ್ದಾರೆ.

ಇದೀಗ ತಾನೇ ತನ್ನ ಗಮನಕ್ಕೆ ಬಂದಿದೆ. ಶೀಘ್ರ ವಡ್ಡರಮಾಡು ಕಟ್ಟೆ ಗೇಟ್ ರಿಪೇರಿ ಕಾರ್ಯ ಕೈಗೊಂಡು ಎಂದಿನಂತೆ ನೀರು ಸಂಗ್ರಹಕ್ಕೆ ಅನುವು ಮಾಡಿಕೊಡುವುದಾಗಿಯೂ, ಶೀಘ್ರವೇ ನಿಟ್ಟೂರಿನ ವಡ್ಡರಮಾಡು ಕಟ್ಟೆಗೆ ಭೇಟಿ ನೀಡಿ ಪರಿಶೀಲಿಸುವುದಾಗಿ ಸಣ್ಣ ನೀರಾವರಿ ಇಲಾಖೆ ಸಹಾಯಕ ಕಾರ್ಯಪಾಲಕ ಅಭಿಯಂತರ ಕುಮಾರ ಸ್ವಾಮಿ ಭರವಸೆ ನೀಡಿದ್ದಾರೆ.

ಮೇಲ್ಚಾವಣಿ ಹಾರಿದ್ದ ಮನೆಗೆ ಪೊನ್ನಣ್ಣ ಭೇಟಿ



ಅಗ್ನಿ ಸ್ಪರ್ಶದಿಂದ ಆಗಿರುವ ಹಾನಿಯನ್ನು ಶಾಸಕ ಪೊನ್ನಣ್ಣ ಭೇಟಿ ನೀಡಿ ಪರಿಶೀಲಿಸಿದರು.

ವಿರಾಜಪೇಟೆ: ಪಟ್ಟಣದ ಗಡಿಯಾರ ಕಂಬದ ಬಳಿಯಿರುವ ಲೋಕೋಪಯೋಗಿ ಇಲಾಖೆಗೆ ಸೇರಿದ ಮನೆಯಲ್ಲಿ ಅಗ್ನಿ ಸ್ಪರ್ಶದಿಂದ ಉಂಟಾಗಿದ್ದ ಹಾನಿ ಬಗ್ಗೆ ಶಾಸಕ ಪೊನ್ನಣ್ಣ ಭೇಟಿ ನೀಡಿದ್ದರು

ಅಭಿಯಂತರ ಪಿ.ಸತೀಶ್ ಮಾತನಾಡಿ 14 ರ ಮಧ್ಯಾಹ್ನ 12 ಗಂಟೆಯಲ್ಲಿ ಇಲಾಖೆಗೆ ಸೇರಿದ ಈ ಮನೆಯಲ್ಲಿ ದಟ್ಟವಾದ ಹೊಗೆ ಕಾಣಿಸಿಕೊಂಡು ಮನೆಯಲ್ಲಿದ್ದ ಸಾಮಾಗ್ರಿಗಳು, ನಿರೀಕ್ಷಣಾ ಮಂದಿರಕ್ಕೆ ಸಂಬಂಧಿಸಿದ ಮಂಚ, ಹಾಸಿಗೆ, ಫ್ರಿಜ್, ಫ್ಯಾನ್, ಟಿ.ವಿ, ಮಿಕ್ಸಿ ಸಾಮಾಗ್ರಿಗಳು ಸುಟ್ಟು ಹೋಗಿದ್ದಾಗಿ ಹೇಳಿದಾಗ ಇಲ್ಲಿ ನೂತನ ಕಟ್ಟಡವನ್ನು ಕಟ್ಟಿ ನಿಮಗೆ ಬೇಕಾಗಿರುವ ಸಹಕಾರವನ್ನು ನೀಡುವುದಾಗಿ ಹೇಳಿದರು

ತಾಲೂಕು ಕಚೇರಿ ಮುಂಭಾಗದಲ್ಲಿರುವ ಗ್ರಂಥಾಲಯವನ್ನು ವೀಕ್ಷಿಸಿದ ಶಾಸಕ ಪೊನ್ನಣ್ಣ ತುಂಬಾ ಹಳೆಯ ಗ್ರಂಥಾಲಯವಾಗಿರುವುದರಿಂದ ಇದನ್ನು ದುರಸ್ತಿ ಮಾಡುವ ಬದಲಿಗೆ ಹೊಸಕಟ್ಟಡ ನಿರ್ಮಿಸಿ ಗ್ರಂಥಾಲಯದಲ್ಲಿ ಈಗಿರುವ ಪುಸ್ತಕಗಳೊಂದಿಗೆ ಎಲ್ಲ ರೀತಿಯ ಪುಸ್ತಕಗಳನ್ನು ಹೆಚ್ಚು ಒದಗಿಸಿ ಕೊಡುವಂತಾಗಬೇಕೆಂದರು

ಕಾರ್ಯಪಾಲಕ ಸಹಾಯಕ ಇಂಜಿನಿಯರ್ ಪಿ. ಸತೀಶ್ ಮತ್ತು ಟಿ.ಪಿ. ಸುಬ್ಬಯ್ಯ, ಪುರಸಭಾಧ್ಯಕ್ಷೆ ದೇಚಮ್ಮ ಕಾಳಪ್ಪ, ಉಪಾಧ್ಯಕ್ಷೆ ಫಸಿಹಾ ತಬ್ಸುಂ, ಇಓ ಪಿ.ಕೆ. ನಾಚಪ್ಪ, ಸದಸ್ಯರಾದ ಎಸ್.ಹೆಚ್. ಮತೀನ್, ಸಿ.ಕೆ.ಪೃಥ್ವಿನಾಥ್, ಸಾಹುಲ್ ಹಮೀದ್, ಅತಿಫ್‌ಮನ್ನ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಜಿ ಪೂಣಚ್ಚ, ಯುವ ಕಾಂಗ್ರೆಸ್‌ನ ಶಬೀರ್, ಪಕ್ಷದ ಜೋಕಿಂ ರಾಡ್ರಿಗಾಸ್, ಎ.ವಿ. ಮಂಜುನಾಥ್, ಮಂಜುದೇವಯ್ಯ ಇತರರಿದ್ದರು.

ಯುವಕ ಕೊಚ್ಚಿ ಹೋಗಿರುವ ಹಿನ್ನೆಲೆ

ಎನ್‌ಡಿಆರ್‌ಎಫ್ ತಂಡದಿಂದ ಶೋಧನಾ ಕಾರ್ಯ

ಮಡಿಕೇರಿ: ಕರಿಕೆ–ಕಾಸರಗೋಡು ಗಡಿಯ ಮಂಞಡ್ಕ ನದಿಯಲ್ಲಿ ಯುವಕನೊಬ್ಬ ಕೊಚ್ಚಿ ಹೋಗಿರುವ ಹಿನ್ನೆಲೆಯಲ್ಲಿ ಶೋಧ ಕಾರ್ಯಾಚರಣೆಗೆ ಕಾಸರಗೋಡು ಎನ್‌ಡಿಆರ್‌ಎಫ್ ತಂಡ ಅಖಾಡಕ್ಕಿಳಿದೆ.

ಕಳೆದ 3 ದಿನಗಳಿಂದ ನಾಪತ್ತೆಯಾಗಿರುವ ಬೆಳಗಾಂನ ಸಿಂಧೋಗಿ ತಾಲೂಕಿನ ದುರಗಪ್ಪ ಮಾದಾರನಿಗಾಗಿ ಕಾಸರಗೋಡು ಪೊಲೀಸರು, ಅಗ್ನಿ ಶಾಮಕ ದಳ, ಕಂದಾಯ ಇಲಾಖೆ ಅಧಿಕಾರಿಗಳು ನಿರಂತರ ಶೋಧ ಕಾರ್ಯ ನಡೆಸಿದರೂ ನಿರೀಕ್ಷಿತ ಫಲ ದೊರಕಿಲ್ಲ. ಪೊಲೀಸರ ಮನವಿಗೆ ಸ್ಪಂದಿಸಿ ಸ್ಥಳಕ್ಕಾಗಮಿಸಿದ ಕಾಸರಗೋಡು ಎನ್‌ಡಿಆರ್‌ಎಫ್ ತಂಡದ 20 ಯೋಧರು ರ್‍ಯಾಫ್ಟ್ ಬಳಸಿ ನದಿಯ



ಮಂಞಡ್ಕ ನದಿಯಲ್ಲಿ ಯುವಕ ಕೊಚ್ಚಿ ಹೋಗಿರುವ ಹಿನ್ನೆಲೆಯಲ್ಲಿ ಎನ್‌ಡಿಆರ್‌ಎಫ್ ತಂಡ ಶೋಧ ಕಾರ್ಯ ನಡೆಸಿತು.

ಎರಡೂ ಬದಿಗಳಲ್ಲಿ ನಾಪತ್ತೆಯಾಗಿರುವ ಯುವಕನಿಗಾಗಿ ನಿರಂತರ ಶೋಧ ಕಾರ್ಯಾಚರಣೆ ನಡೆಸಿದರು. ಇವರ ಜೊತೆಯಲ್ಲಿಯೇ ಸ್ಥಳೀಯ ನುರಿತ ಈಜುಗಾರರು ಮತ್ತು ಕೇರಳ ಸಿವಿಲ್ ಡಿಫೆನ್ಸ್ ಸ್ವಯಂ ಸೇವಕರು ಕೂಡ ಶೋಧ ಕಾರ್ಯಾಚರಣೆಯಲ್ಲಿ ಪಾಲ್ಗೊಂಡರು. ಮಂಞಡ್ಕ ನದಿ ಮಳೆಯ ನೀರಿನಿಂದ ಇಳಿಜಾರು ಪ್ರದೇಶದ ಕಡೆಗೆ ಉಕ್ಕಿ ಹರಿಯುತ್ತಿದ್ದು, ಶೋಧ ಕಾರ್ಯಾಚರಣೆ ರಕ್ಷಣಾ ತಂಡಕ್ಕೆ ಸವಾಲಾಗಿ ಪರಿಣಮಿಸಿದೆ.

ನಿರಂತರ ಮಳೆಯ ಕಾರಣ ಶೋಧ ಕಾರ್ಯಾಚರಣೆಯನ್ನು ಸಂಜೆ 5 ಗಂಟೆ ವೇಳೆಗೆ ತಾತ್ಕಾಲಿಕವಾಗಿ ಸ್ಥಗಿತ ಮಾಡಲಾಗಿದ್ದು, ನಾಳೆಯೂ ಕಾರ್ಯಾಚರಣೆ ಮುಂದುವರಿಯಲಿದೆ ಎಂದು ಕರಿಕೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಬಾಲಚಂದ್ರ ನಾಯರ್ ಮಾಹಿತಿ ನೀಡಿದ್ದಾರೆ.

ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿಗೆ 25 ಲಕ್ಷ ರೂ. ನೆರವು : ಕೆ.ವೆಂಕಟೇಶ್



ಪತ್ರಿಕಾ ದಿನಾಚರಣೆಯ ಅಂಗವಾಗಿ ಜಿಲ್ಲೆಯ ಐವರು ಹಿರಿಯ ಪತ್ರಕರ್ತರಿಗೆ ವಾರ್ಷಿಕ ಪ್ರಶಸ್ತಿ ನೀಡಿ ಜಿಲ್ಲಾ ಉಸ್ತುವಾರಿ ಸಚಿವ ವೆಂಕಟೇಶ್, ಶಾಸಕ ಪುಟ್ಟರಂಗಶೆಟ್ಟಿ ಸನ್ಮಾನಿಸಿದರು.

ಚಾಮರಾಜನಗರ, ಜು.20– ಜಿಲ್ಲೆಯ ಪತ್ರಕರ್ತರ ಹಿತ ಕಾಪಾಡುವ ನಿಟ್ಟಿನಲ್ಲಿ ಕ್ಷೇಮಾಭಿವೃದ್ಧಿ ನಿಧಿಗೆ 25 ಲಕ್ಷ ರೂ. ನೆರವು ಕೊಡಿಸುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಹೇಳಿದ್ದಾರೆ.

ನಗರದ ವರ್ತಕರ ಭವನದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ನಡೆಸಿದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುವ ಪತ್ರಕರ್ತರು ಬಹಳಷ್ಟು ಮಂದಿ ಇದ್ದಾರೆ. ನಮ್ಮ ಸರ್ಕಾರ ಎರಡು ವರ್ಷಗಳಿಂದ ಜಿಲ್ಲೆಯ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡುತ್ತಿದ್ದು, ಅಭಿವೃದ್ಧಿಯತ್ತ ಜಿಲ್ಲೆ ಮುನ್ನುಗ್ಗುತ್ತಿದೆ. ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿಗೆ ಮುಖ್ಯಮಂತ್ರಿಗಳಿಂದ 25 ಲಕ್ಷ ರೂ. ಕೊಡಿಸುವುದಾಗಿ ತಿಳಿಸಿದರು. ಮಾಧ್ಯಮ ಕಾರ್ಯದರ್ಶಿ ಕೆ.ವಿ. ಪ್ರಭಾಕರ್‌ರಲ್ಲೂ ಮನವಿ ಮಾಡಿ ಕೊಂಡಿದ್ದೇನೆ. ಸಂಘದ ಭವನದ ಕಾಮಗಾರಿಗೂ ಸಹ ಅನುದಾನ ಕೊಡಿಸಲು ಬದ್ಧವಾಗಿರುವುದಾಗಿ ತಿಳಿಸಿದರು.


ಜಿಲ್ಲೆಯನ್ನು ಅಭಿವೃದ್ಧಿ ಪಡಿಸಲು ನಾವೆಲ್ಲರು ಒಗ್ಗಟ್ಟಿನಿಂದ ದುಡಿಯೋಣ. ಅಭಿವೃದ್ಧಿಗೆ ಪೂರಕವಾದ ವಾತಾವರಣ ಕಲ್ಪಿಸುವುದು ಹಾಗೂ ಯೋಜನೆಗಳನ್ನು ರೂಪಿಸುವುದಕ್ಕೆ ಸರ್ಕಾರದ ಮೊದಲ ಅದ್ಯತೆಯಾಗಿದೆ. ಪತ್ರಕರ್ತರು ಜಿಲ್ಲೆಯ ಹಿತದೃಷ್ಟಿಯಿಂದ ಉತ್ತಮ ಲೇಖನ ಪ್ರಕಟಿಸುವ ಮೂಲಕ ಸಮಸ್ಯೆಯ ಬಗ್ಗೆ ಬೆಳಕು ಚೆಲ್ಲಬೇಕು. ಪ್ರಾಮಾಣಿಕತೆಯನ್ನು ಮೆರೆಯುವ ಜೊತೆಗೆ ವಸ್ತು ನಿಷ್ಠ ವರದಿಗಳನ್ನು ಮಾಡಿ, ನೊಂದವರ ಪರವಾಗಿ ನಿಂತು ನ್ಯಾಯ ಕಲ್ಪಿಸಲು ಮುಂದಾಗಬೇಕು ಎಂದರು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಡಿವಿಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿ, ಪತ್ರಕರ್ತರ ವೃತ್ತಿ ಅತ್ಯಂತ ಪವಿತ್ರವಾಗಿದ್ದು, ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಜೊತೆಗೆ ಜನ ಪ್ರತಿನಿಧಿಗಳಿಗೆ ಮಾರ್ಗ ದರ್ಶನ ನೀಡಿ, ಸಮಾಜದ ಅಭಿವೃದ್ಧಿಯಲ್ಲಿ ತನ್ನದೇ ಆದ ಸೇವೆಯನ್ನು ಸಲ್ಲಿಸುತ್ತಿದೆ. ಜಿಲ್ಲೆಯಲ್ಲಿರುವ ಎಲ್ಲಾ ಪತ್ರಕರ್ತರಿಗೂ ನಿವೇಶನ ಕೊಡುವ ನಿಟ್ಟಿನಲ್ಲಿ ಕ್ರಮ ವಹಿಸಲಾಗಿದೆ. ನಗರದಲ್ಲಿರುವ ಕಾರ್ಯನಿರತ ಪತ್ರಕರ್ತರ ಭವನದ ಕಾಮಗಾರಿಗೆ25 ಲಕ್ಷ ರೂ. ಅನುದಾನ ನೀಡುವೆ. ಕ್ಷೇಮಾಭಿವೃದ್ಧಿಗೆ ನಿಧಿಗೆ ಎಂಎಸ್‌ಐಎಲ್ ನಿಂದ ಹಣ ಕೊಡುವುದಾಗಿ ತಿಳಿಸಿದರು.

ಜಿಲ್ಲೆಯ ಐದು ತಾಲೂಕುಗಳ ಹಿರಿಯ ಪತ್ರಕರ್ತರಾದ ವಿ.ಗಂಗಾಧರ್, ಗುಂಡ್ಲುಪೇಟೆ ತಾಲೂಕಿನ ಮಹೇಶ್ ಮಡಹಳ್ಳಿ, ಯಳಂದೂರು ತಾಲೂಕಿನ ಇರ್ಫಾನ್, ಕೊಳ್ಳೇಗಾಲ ತಾಲೂಕಿನ ಎಂ.ಮರಿಸ್ವಾಮಿ ಹಾಗೂ ಹನೂರು ತಾಲೂಕಿನ ಸುರೇಶ್ ಅಜ್ಜೀಪುರ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್, ಶಾಸಕ ಸಿ. ಪುಟ್ಟರಂಗಶೆಟ್ಟಿ ಶಾಲುಹೊದಿಸಿ, ನೆನಪಿನ ಕಾಣಿಕೆ ನಗದು ಪುರಸ್ಕಾರ ನೀಡಿ ಸನ್ಮಾನಿಸಿದರು. ಇದೇ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಶೇ.75 ಕ್ಕಿಂತ ಹೆಚ್ಚು ಅಂಕ ಗಳಿಸಿರುವ ಪತ್ರಕರ್ತರ ಮಕ್ಕಳಾದ ಡಿ.ಎಸ್. ಬೇಬಿ, ಈಶಾನಿ, ಹರ್ಷಿತ್‌ಗೌಡ, ಅರ್ಜುನ್ ಅವರನ್ನು ಗೌರವಿಸಲಾಯಿತು.

ಕ್ರೀಡಾಕೂಟಗಳಲ್ಲಿ ವಿಜೇತರಾದ ಪತ್ರಕರ್ತರು ಹಾಗೂ ಅವರ ಕುಟುಂಬದವರಿಗೆ ಬಹುಮಾನ ವಿತರಣೆ ಮಾಡಲಾಯಿತು. ವೇದಿಕೆಯಲ್ಲಿ ಜಿ.ಪಂ. ಸಿಇಓ ಮೋನಾ ರೋತ್, ಎಸ್ಪಿ ಡಾ.ಬಿ.ಟಿ. ಕವಿತಾ, ಅಪರ ಜಿಲ್ಲಾಧಿಕಾರಿ ಜವರೇಗೌಡ, ಸಂಘದ ಅಧ್ಯಕ್ಷ ದೇವರಾಜ್ ಕಪ್ಪಸೋಗೆ, ಪ್ರಧಾನ ಕಾರ್ಯದರ್ಶಿ ಲಕ್ಕೂರು ಪ್ರಸಾದ್, ರಾಜ್ಯ ಸಮಿತಿ ಸದಸ್ಯ ಗೂಳಿಪುರ ನಂದೀಶ್, ವಾರ್ತಾ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ರಮೇಶ್ ಉಪಸ್ಥಿತರಿದ್ದರು.

ತಾಳ್ಮೆ, ಸಹನೆ, ಪ್ರಾಮಾಣಿಕತೆ ಇದ್ದಾಗ ಮಾತ್ರ ಸಂಘ ಬೆಳೆಯುತ್ತದೆ: ಸುತ್ತೂರುಶ್ರೀ



ಜಿಲ್ಲಾ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ರಜತ ಮಹೋತ್ಸವದ ಸ್ಮರಣ ಸಂಚಿಕೆಯನ್ನು ಸ್ವಾಮೀಜಿ ಮತ್ತು ಶಾಸಕರು ಬಿಡುಗಡೆ ಮಾಡಿದರು

ಚಾಮರಾಜನಗರ, ಜು.20– ತಾಳ್ಮೆ, ಸಹನೆ, ಪ್ರಾಮಾಣಿಕತೆ ಇದ್ದಾಗ ಮಾತ್ರ ಸಂಘ, ಸಂಸ್ಥೆಗಳು ಬೆಳೆಯುತ್ತದೆ ಎಂದು ಸುತ್ತೂರು ಶ್ರೀಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದ್ದಾರೆ.

ನಗರದ ಶ್ರೀಸಿದ್ದಮಲ್ಲೇಶ್ವರ ವಿರಕ್ತ ಮಠದ ಶ್ರೀಬಸವರಾಜಸ್ವಾಮಿಗಳವರ ಅನುಭವ ಮಂಟಪದಲ್ಲಿ ಜಿಲ್ಲಾ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ರಜತ ಮಹೋತ್ಸವ ಸಮಾರೋಪ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಸಂಘದಲ್ಲಿ ಪ್ರಾಮಾಣಿಕತೆ, ನೈತಿಕ ಮೌಲ್ಯಗಳನ್ನು ಅಳವಡಿಸಿಕೊಂಡು ಮುಂದುವರೆದಾಗ ಮಾತ್ರ ಸಂಘ, ಸಂಸ್ಥೆಗಳು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಈ ದೇಶದಲ್ಲಿ ಸುಸಂಸ್ಕೃತರು, ಮಹಾಪುರುಷರು ನೆಲೆ ನಿಂತು ನಮಗೆಲ್ಲಾ ಮಾರ್ಗದರ್ಶನ ನೀಡಿ ಹೋಗಿದ್ದಾರೆ. ಅಂತಹ ವ್ಯವಸ್ಥೆಯಲ್ಲೂ ನಾಡಿನಲ್ಲಿ ಅಹಿತಕರ ಘಟನೆಗಳು ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ...ಜನರು ಜಾಗೃತರಾಗಿ ಧಾರ್ಮಿಕ ಆಚರಣೆಯ ಪರಂಪರೆ, ಮೌಲ್ಯಗಳನ್ನು ಉಳಿಸಿ–ಬೆಳೆಸಿಕೊಂಡು ಹೋಗಬೇಕಿದೆ ಎಂದರು.

ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಕಾರ್ಯಕ್ರಮ ಉದ್ಘಾಟಿಸಿ, ಜಿಲ್ಲಾ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘವು 25 ವರ್ಷಗಳಿಂದ ಸಮಾಜದ ಅಭಿವೃದ್ಧಿ ಕೆಲಸದೊಂದಿಗೆ ತೊಡಗಿಸಿಕೊಂಡು ಕೆಲಸ ಮಾಡುತ್ತಿರುವುದು ಒಳ್ಳೆಯ ಬೆಳವಣಿಯಾಗಿದೆ ಸಂಘವು ಕಡಿಮೆ ಬಡ್ಡಿದರದಲ್ಲಿ ಗೃಹ ನಿವೇಶನ ಖರೀದಿಯೂ ಸೇರಿದಂತೆ ನಾನಾ ಅಗತ್ಯಗಳಿಗೆ ಆರ್ಥಿಕ ಸಹಾಯ ನೀಡುತ್ತಿರುವುದು ಅಲ್ಲದೆ ಸಂಗಮ ಗೃಹ ನಿರ್ಮಾಣ ಸಹಕಾರ ಸಂಘದಿಂದ ಅತಿ ಕಡಿಮೆ ಬೆಲೆಯಲ್ಲಿ ಭೂಮಿ ನೀಡುತ್ತಿರುವುದು ಹೆಮ್ಮೆಯ ವಿಚಾರವಾಗಿದೆ. ಈ ಸಂಘಗಳು ಮತ್ತಷ್ಟು ಸಮಾಜಮುಖಿ ಕೆಲಸ ಮಾಡಲಿ ಎಂದು ಆಶಿಸಿದರು. ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಮರಿಯಾಲ ಮಹಾಸಂಸ್ಥಾನ ಶ್ರೀ ಇಮ್ಮಡಿ ಮುರುಘರಾಜೇಂದ್ರಸ್ವಾಮೀಜಿ, ಶ್ರೀ ಸಿದ್ಧಮಲ್ಲೇಶ್ವರ ವಿರಕ್ತ ಮಠದ ಚನ್ನ ಬಸವಸ್ವಾಮೀಜಿ ದಿವ್ಯ ಉಪಸ್ಥಿತಿ ವಹಿಸಿದ್ದರು. ಸಂಘದ ಅಧ್ಯಕ್ಷ ಸಿದ್ಧಮಲ್ಲಪ್ಪ. ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಕಾಡಾಧ್ಯಕ್ಷ ಪಿ.ಮರಿಸ್ವಾಮಿ, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಕ್ಷರಿ, ರಾಜ್ಯ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸೋಮಶೇಖರಯ್ಯ, ಶ್ರೀಬಸವೇಶ್ವರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಂ.ಗೌರಿ ಶಂಕರ, ಸಂಗಮ ಗೃಹ ನಿರ್ಮಾಣ ಸಹ ಕಾರ ಸಂಘದ ಅಧ್ಯಕ್ಷ ಬಿ.ಎಲ್.ಮುದ್ದು ಬಸವಣ್ಣ ಇತರರಿದ್ದರು.

ನಿಸರ್ಗ ಕಾಲೇಜ್‌ಗೆ ಅತ್ಯುತ್ತಮ ಫಲಿತಾಂಶ



ಬಾನುಪ್ರಿಯ ಜೆ.



ಸೃಷ್ಟಿ ಕೆ.



ಫಿಜಿಯಾ ನಜೀಬಾ



ಮನೋಜ್ .ಜಿ

ಕೊಳ್ಳೇಗಾಲ: ಆರನೇ ಸೆಮಿಸ್ಟರ್ ಪದವಿ ಪರೀಕ್ಷೆಯಲ್ಲಿ ಪಟ್ಟಣದ ನಿಸರ್ಗ ಕಾಲೇಜ್ ಆಫ್ ಮ್ಯಾನೇಜ್‌ಮೆಂಟ್‌ನ ಮೊದಲ ಬ್ಯಾಚ್‌ನ ಬಿಸಿಎ ಹಾಗೂ ಬಿ.ಕಾಂ ವಿದ್ಯಾರ್ಥಿಗಳು ಅತ್ಯುತ್ತಮ ಫಲಿತಾಂಶ ಪಡೆದಿದ್ದಾರೆ.

ಬಿಸಿಎ ಸೆಮಿಸ್ಟರ್ ಪರೀಕ್ಷೆಯಲ್ಲಿ ಶೇ. 97 ರಷ್ಟು ಫಲಿತಾಂಶ ಬಂದಿದ್ದು, 39 ವಿದ್ಯಾರ್ಥಿಗಳಲ್ಲಿ 38 ಮಂದಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಆರ್ಟಿಫಿಶಿಯಲ್ ಇಂಟಲಿಜೆನ್ಸಿ ಮತ್ತು ಅಪ್ಲಿಕೇಶನ್‌ನಲ್ಲಿ 3 ವಿದ್ಯಾರ್ಥಿಗಳು, ಪಿಹೆಚ್‌ಪಿ ಹ್ಯಾಂಡ್ ಮೈಎಸ್‌ಕ್ಯೂಲ್‌ನಲ್ಲಿ 7 ವಿದ್ಯಾರ್ಥಿಗಳು 100ಕ್ಕೆ 100 ಅಂಕ ಗಳಿಸಿದ್ದಾರೆ.

ಬಾನುಪ್ರಿಯ ಜೆ. 700 ಅಂಕಗಳಿಗೆ 683 (98), ಸೃಷ್ಟಿ ಕೆ. 680 (97), ಫಿಜಿಯಾ ನಜೀಬಾ .ಎಫ್ 676 (97) ಅಂಕ ಗಳಿಸಿದ್ದಾರೆ.

ಬಿಕಾಂ ಸೆಮಿಸ್ಟರ್ ಪರೀಕ್ಷೆಯಲ್ಲಿ ಶೇ. 92ರಷ್ಟು ಫಲಿತಾಂಶ ಬಂದಿದ್ದು, 90 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.7 ಮಂದಿ ಪ್ರಥಮ



ತನುಶ್ರೀ ಡಿ.,



ಉಜ್ಮಾಬಾನು

ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಮ್ಯಾನೇಜ್‌ಮೆಂಟ್ ಅಕೌಂಟಿಂಗ್‌ನಲ್ಲಿ 9 ವಿದ್ಯಾರ್ಥಿಗಳು ಇಂಡಿಯನ್ ಅಕೌಂಟಿಂಗ್ ಸ್ಟಾಂಡರ್ಡ್‌ನಲ್ಲಿ 4ವಿದ್ಯಾರ್ಥಿಗಳು ಅಸೆಸೆಂಟ್ ಆಫ್ ಪರ್ಸನ್‌ನಲ್ಲಿ ವಿದ್ಯಾರ್ಥಿ ಅಡ್ವಾನ್ಸಿಯಲ್ ಮ್ಯಾನೇಜ್ಮೆಂಟ್‌ನಲ್ಲಿ ಓರ್ವ ವಿದ್ಯಾರ್ಥಿ ಶೇ. 100 ಮನೋಜ್.ಜಿ 700ಕ್ಕೆ 684 (98) ಅಂಕ ಪಡೆದಿದ್ದಾರೆ. ತನುಶ್ರೀ ಡಿ. 678 (97), ಉಜ್ಮಾಬಾನು675(96) ಅಂಕಗಳಿಸಿದ್ದಾರೆ. ಸಂಸ್ಥೆ ಅಧ್ಯಕ್ಷ ಎಸ್. ನಾಗರಾಜು, ಕಾರ್ಯದರ್ಶಿ ಡಾ.ಎಸ್. ದತ್ತೇಶ್ ಕುಮಾರ್, ವಿಶೇಷಾಧಿಕಾರಿ ಡಾ. ನಾಗಭೂಷಣ್, ಪ್ರಾಂಶುಪಾಲ ಡಾ.ಧನಂಜಯ ಡಿ. ಅಭಿನಂದಿಸಿದ್ದಾರೆ.

ಗೋದಾಮುಗಳ ಬಾಗಿಲು ಮುರಿದು ಪಡಿತರ ಅಕ್ಕಿ ಕಳವು

ಚಾಮರಾಜನಗರ, ಜು.20– ಆಹಾರ ಇಲಾಖೆಗೆ ಸೇರಿರುವ ಎರಡು ಗೋದಾಮುಗಳ ಬಾಗಿಲು ಮುರಿದು ಒಳ ನುಗ್ಗಿರುವ ಖದೀಮರು 100ಕ್ಕೂ ಹೆಚ್ಚು ಚೀಲ ಪಡಿತರ ಅಕ್ಕಿ, 5 ಗೋಧಿ ಚೀಲಗಳನ್ನು ಕದ್ದೊಯ್ದಿರುವ ಘಟನೆ ನಡೆದಿದೆ.

ಸತ್ತಿ ರಸ್ತೆಯಲ್ಲಿನ ಗೋದಾಮು ಹಾಗೂ ಕಾಳನಹುಂಡಿ ಸಮೀಪ ಇರುವ ಗೋದಾಮಿಗೆ ಖದೀಮರು ಕನ್ನ ಹಾಕಿದ್ದು, ಈ ಸಂಬಂಧ ಚಾಮರಾಜನಗರ ಪಟ್ಟಣ ಹಾಗೂ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

70 ಕ್ವಿಂಟಾಲ್ ಅಕ್ಕಿ ಕಳವು: ಕಾಳನಹುಂಡಿಯಲ್ಲಿರುವ ಗೋದಾಮಿನಲ್ಲಿ ಅಂದಾಜು 2.73 ಲಕ್ಷ ಮೌಲ್ಯದ 140 ಚೀಲಗಳಲ್ಲಿದ್ದ ಸುಮಾರು 70 ಕ್ವಿಂಟಾಲ್ ಅಕ್ಕಿ ಕಳವು ಮಾಡಲಾಗಿದೆ. ಈ ಸಂಬಂಧ ಗೋದಾಮಿನ ವ್ಯವಸ್ಥಾಪಕರಾದ ಸೌಜನ್ಯ ಗ್ರಾಮಾಂತರ ಠಾಣೆಯಲ್ಲಿ ದೂರು ನೀಡಿದ್ದಾರೆ.

1750 ಕೆಜಿ ಅಕ್ಕಿ ಕಳವು : ನಗರದ ಸತ್ತಿ ರಸ್ತೆಯಲ್ಲಿರುವ ಕೆಎಫ್‌ಸಿಎಫ್‌ಸಿ ಗೋದಾಮಿನಲ್ಲಿ ತಲಾ 50 ಕೆ.ಜಿ. ತೂಕದ 35 ಅಕ್ಕಿ ಚೀಲಗಳಲ್ಲಿದ್ದ ಒಟ್ಟು 1,750 ಕೆ.ಜಿ. ಅಕ್ಕಿ ಹಾಗೂ ತಲಾ 50 ಕೆ.ಜಿ. ತೂಕದ 5 ಗೋಧಿ ಚೀಲ ಕಳವು ಮಾಡಲಾಗಿದೆ. ಈ ಸಂಬಂಧ ಗೋದಾಮಿನ ವ್ಯವಸ್ಥಾಪಕರಾದ ಡಿ. ಸರವಣ ಪಟ್ಟಣ ಠಾಣೆಯಲ್ಲಿ ದೂರು ನೀಡಿದ್ದಾರೆ.

ಕೆಪೆಮೂ ಮಳಿಗೆಗೆ ಎಂಡಿ ಶಿವಸ್ವಾಮಿ ಭೇಟಿ



ನಂದಿನಿ ಕೆಪೆಮೂ ಮಳಿಗೆಗೆ ಭೇಟಿ ನೀಡಿದ ವ್ಯವಸ್ಥಾಪಕ ನಿರ್ದೇಶಕ ಶಿವಸ್ವಾಮಿಯವರನ್ನು ಚಾಮುಲ್ ನಿರ್ದೇಶಕ ಹೆಚ್.ಎಸ್.ನಂಜುಂಡಪ್ರಸಾದ್ ಗೌರವದಿಂದ ಬರಮಾಡಿಕೊಂಡರು.

ಗುಂಡ್ಲುಪೇಟೆ, ಜು.20(ಸೋಮ್.ಜಿ)– ಪಟ್ಟಣದಲ್ಲಿರುವ ನಂದಿನಿ ಕೆಪೆಮೂ ಮಳಿಗೆಗೆ ಕೆ.ಎಂ.ಎಫ್‌ನ ವ್ಯವಸ್ಥಾಪಕ ನಿರ್ದೇಶಕ ಶಿವಸ್ವಾಮಿ ಭೇಟಿ ನೀಡಿದ್ದರು.

ನಂದಿನಿ ಕೆಪೆಮೂ ಮಳಿಗೆಗೆ ಭೇಟಿ ನೀಡಿದ ಅವರನ್ನು ಜಿಲ್ಲಾ ಸಹಕಾರ ಸಂಘಗಳ ಅಧ್ಯಕ್ಷ ಹಾಗೂ ಚಾಮುಲ್ ನಿರ್ದೇಶಕ ಹೆಚ್.ಎಸ್.ನಂಜುಂಡ ಪ್ರಸಾದ್ ಸನ್ಮಾನಿಸಿ ಗೌರವದಿಂದ ಬರಮಾಡಿಕೊಂಡರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಸ್ವಾಮಿ ಮೈಸೂರು–ನೀಲಗಿರಿ ಮುಖ್ಯ ರಸ್ತೆಯಲ್ಲಿರುವ ಈ ನಂದಿನಿ ಕೆಪೆಮೂ ಪ್ರವಾಸಿಗರಿಗೆ ಉತ್ತಮವಾದ ಗುಣಮಟ್ಟದ ಉತ್ಪನ್ನಗಳನ್ನು ನೀಡುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಈ ವೇಳೆ ಕೆಎಂಎಫ್ ಮತ್ತು ಕೆಪೆಮೂ ಸಿಬ್ಬಂದಿ ಹಾಜರಿದ್ದರು.

ವಿ.ಸೋಮಣ್ಣ ಹುಟ್ಟುಹಬ್ಬ; ಅನ್ನ ಸಂತರ್ಪಣೆ

ಚಾಮರಾಜನಗರ: ಕೇಂದ್ರ ಸಚಿವ ವಿ. ಸೋಮಣ್ಣರ ಹುಟ್ಟುಹಬ್ಬದ ಅಂಗವಾಗಿ ಅವರ ಅಭಿಮಾನಿ ಬಳಗ, ಇಂಚರ ಗ್ರೂಪ್ಸ್ ವತಿಯಿಂದ ನಗರದ ಜಿಲ್ಲಾಸ್ಪತ್ರೆಯ ಒಳ ರೋಗಿಗಳಿಗೆ ಹಣ್ಣು ವಿತರಣೆ ಹಾಗೂ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ನಡೆಸಿತು.

ವಿ.ಸೋಮಣ್ಣ ಅಭಿಮಾನಿ ಬಳಗದ ಸ್ಟೈಲ್ ಮಂಜು ಮಾತನಾಡಿ, ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣರ ಹುಟ್ಟುಹಬ್ಬದ ಅಂಗವಾಗಿ ಜಿಲ್ಲಾಸ್ಪತ್ರೆಯ ಒಳ ರೋಗಿಗಳಿಗೆ ಹಣ್ಣು ವಿತರಣೆ ಹಾಗೂ ಸಾರ್ವಜನಿಕರಿಗೆ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿದೆ.

ನಿವೃತ್ತ ಪೊಲೀಸ್ ಅಧಿಕಾರಿ ರಾಜುನಾಯಕ, ಸೋಮವಾರಪೇಟೆ ವಿಶ್ವ ದೇವರಾಜ್, ಕಾವ್ರದವಾಡಿ ಗುರು, ರಾಧಾಕೃಷ್ಣ, ಸಿ.ಎಂ.ಕೃಷ್ಣಮೂರ್ತಿ, ಮಹದೇವಸ್ವಾಮಿ, ನಾಗರಾಜು, ರವಿ, ವಿಘ್ನೇಶ್, ರಾಜು, ಮಹದೇವಸ್ವಾಮಿ, ಮಹೇಶ್, ಆಟೋ ನಟರಾಜು ಇದ್ದರು.

ಗಾಯಗೊಂಡಿದ್ದ ವ್ಯಕ್ತಿ ಸಾವು

ನಂಜನಗೂಡು, ಜು.20– ಲಾರಿ ಡಿಕ್ಕಿ ಹೊಡೆದ ಪರಿಣಾಮ ತೀವ್ರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ವ್ಯಕ್ತಿ ಯೊಬ್ಬರು ಚಿಕಿತ್ಸೆ ಫಲಕಾರಿಯಾಗದೇ ಶನಿವಾರ ಸಾವನ್ನಪ್ಪಿದ್ದಾರೆ.

ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ಹಲಗೂರು ನಿವಾಸಿ ನಾಗರಾಜು (58) ಸಾವನ್ನಪ್ಪಿದವರು. ಈತ ಜು.13ರಂದು ನಗರದ ಹಲ್ಲಹಳ್ಳಿ ವೃತ್ತದಲ್ಲಿ ರಸ್ತೆ ದಾಟುತ್ತಿದ್ದ ವೇಳೆ ಗುಂಡ್ಲುಪೇಟೆ ಕಡೆಯಿಂದ ವೇಗವಾಗಿ ಬಂದ ಲಾರಿ ಡಿಕ್ಕಿ ಹೊಡೆದಿದೆ. ಪರಿಣಾಮ ಕೈ, ಕಾಲು ಮುರಿದು ತೀವ್ರ ಗಾಯಗೊಂಡಿದ್ದ ನಾಗ ರಾಜು ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ನಗರ ಸಂಚಾರ ವಿಭಾಗದ ಪೊಲೀಸರು ಲಾರಿ ಹಾಗೂ ಚಾಲಕನನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿದ್ದಾರೆ.


ಪ್ರತಿವರ್ಷ ನಿವೃತ್ತ ನೌಕರರನ್ನು ಸನ್ಮಾನಿಸುತ್ತಿರುವ

ವೀರಶೈವ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯ ಶ್ಲಾಘನೀಯ

ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಅಧ್ಯಕ್ಷ ಸಿಂಧುವಳ್ಳಿ ಕೆಂಪಣ್ಣ ಮೆಚ್ಚುಗೆ

ನಂಜನಗೂಡು, ಜು.20– ತಮ್ಮ ಜೀವ ಮಾನದ ಅಮೂಲ್ಯ ಸಮಯವನ್ನು ವೃತ್ತಿಯಲ್ಲಿ ತೊಡಗಿಸಿಕೊಂಡು ಜನಸೇವೆ ಮಾಡಿರುವ ನಿವೃತ್ತ ನೌಕರನ್ನು ಪ್ರತಿ ವರ್ಷ ಗುರುತಿಸಿ ಸನ್ಮಾನಿಸುತ್ತಿರುವ ವೀರಶೈವ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯ ಶ್ಲಾಘನೀಯ ಎಂದು ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಅಧ್ಯಕ್ಷ ಸಿಂಧುವಳ್ಳಿ ಕೆಂಪಣ್ಣ ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದ ಮಲ್ಲನಮೂಲೆ ಮಠದಲ್ಲಿ ಭಾನುವಾರ ವೀರಶೈವ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘ ಹಾಗೂ ಬಸವ ಸೇವಾ ಸಮಿತಿ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತ ನೌಕರರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ನಂಜನಗೂಡಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ನಿವೃತ್ತ ನೌಕರರು, ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

800 ಸದಸ್ಯರನ್ನು ಹೊಂದಿರುವ ಸಂಘ ತಾಲೂಕಿನಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಹಾಗೂ ನಿವೃತ್ತ ನೌಕರರನ್ನು ಗುರುತಿಸಿ ನಗದು ಪುರಸ್ಕಾರ ನೀಡಿ ಗೌರವಿಸುತ್ತಿದೆ. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಗಳಿಸಿದ 130 ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಬೆನ್ನು ತಟ್ಟಿ ಪ್ರೋತ್ಸಾಹಿಸಿದೆ ಎಂದರು.

ನಗರದಲ್ಲಿ 2018ರಲ್ಲಿ ನಿರ್ಮಾಣ ಆರಂಭಿಸಿದ ಬಸವ ಭವನ 7 ವರ್ಷಗಳು ಕಳೆದರೂ ಪೂರ್ಣಗೊಳ್ಳದೆ ನೆನೆಗುದಿಗೆ ಬಿದ್ದಿದೆ. ಸಮಾಜ ಭವನ ನಿರ್ಮಾಣ ಪೂರ್ಣಗೊಳಿಸಲು ಸರ್ಕಾರದ ಅನುದಾನಕ್ಕೆ ಕಾಯದೆ ಸಮಾಜದ ಬಾಂಧವರಿಂದ ದೇಣಿಗೆ ಸಂಗ್ರಹಿಸುವ ಮೂಲಕ ಅಗತ್ಯ ಹಣ ಸಂಗ್ರಹಿಸಿ ಬಸವ ಭವನ ಪೂರ್ಣಗೊಳಿಸೋಣ ಎಂದರು.

ಗುರುಕಂಬಳೀಶ್ವರ ಮಠದ ಅಧ್ಯಕ್ಷ ಚನ್ನಬಸವ ಸ್ವಾಮೀಜಿ ಮಾತನಾಡಿ, ನಿವೃತ್ತ ನೌಕರರು ಸಮಾಜಕ್ಕಾಗಿ ದುಡಿದು ನಿವೃತ್ತಿ ಹೊಂದಿದ ಸಂದರ್ಭ ಅವರ ಸೇವೆ ಪರಿಗಣಿಸಿ, ಅವರ ವಿಶ್ರಾಂತ ಜೀವನಕ್ಕೆ ಶುಭ ಕೋರುವುದು ಸಮಾಜದ ಜವಾಬ್ದಾರಿ. ಆ ಕರ್ತವ್ಯವನ್ನು ಸಂಘ ಪ್ರತಿವರ್ಷ ತಪ್ಪದೆ ನಡೆಸಿದೆ. ವಿದ್ಯಾರ್ಥಿಗಳು ಓದಿನ ಜೊತೆಗೆ ನಮ್ಮ ಧರ್ಮ, ಸಂಸ್ಕೃತಿಗಳನ್ನು ಮೈಗೂಡಿಸಿಕೊಳ್ಳಬೇಕು. ಕೌಶಲ್ಯಗಳನ್ನು ಕಲಿತಾಗ ಹೆಚ್ಚಿನ ಉದ್ಯೋಗ ಅವಕಾಶಗಳು ದೊರೆಯುತ್ತವೆ ಎಂದರು.

ಕಾರ್ಯಕ್ರಮದಲ್ಲಿ ದೇವನೂರು ಮಠದ ಮಹಾಂತ ಸ್ವಾಮೀಜಿ, ಶರಣ ಸಂಗಮ ಮಠದ ನಾಗರಾಜೇಂದ್ರ ಸ್ವಾಮೀಜಿ, ಜಿಪಿ. ಮಹೇಶ್, ಬಸವ ಸೇವಾ ಸಮಿತಿ ಅಧ್ಯಕ್ಷ ಜಿ. ಎಲ್.ಸೋಮಣ್ಣ, ವೀರಶೈವ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಡಿ.ವಿ. ಚಂದ್ರಶೇಖರ್, ಪ್ರಾಧ್ಯಾಪಕ ಎಸ್.ಮಹೇಶ್, ಗುರುಪ್ರಸಾದ್, ಎಂ.ಎಸ್.ನಾಗೇಂದ್ರ ಶಂಕರ್‌ಪ್ರಸಾದ್, ನೀಲಕಂಠೇಶ್ವರ ಪ್ರೌಢಶಾಲೆ ವ್ಯವಸ್ಥಾಪಕ ಕುಮಾರ್ ಉಪಸ್ಥಿತರಿದ್ದರು.

ಮೂಗೂರಲ್ಲಿ ಪೌಷ್ಟಿಕ ಆಹಾರ ಸಮಿತಿ, ಪೋಷಕರ ಸಭೆ



ಗ್ರಾಮ ಆರೋಗ್ಯ ನೈರ್ಮಲ್ಯ, ಪೌಷ್ಟಿಕ ಆಹಾರ ಸಮಿತಿ ಹಾಗೂ ಪೋಷಕರ ಸಭೆ ನಡೆಯಿತು.

ಮೂಗೂರು, ಜು.20– ಇಲ್ಲಿನ ಅಂಬೇಡ್ಕರ್ ಬಡಾವಣೆಯಲ್ಲಿರುವ ಅಂಗನವಾಡಿ ಕೇಂದ್ರದಲ್ಲಿ ಮೂಗೂರು ಸಮುದಾಯ ಆರೋಗ್ಯ ಕೇಂದ್ರದಿಂದ ಗ್ರಾಮ ಆರೋಗ್ಯ ನೈರ್ಮಲ್ಯ, ಪೌಷ್ಟಿಕ ಆಹಾರ ಸಮಿತಿ ಹಾಗೂ ಪೋಷಕರ ಸಭೆ ನಡೆಯಿತು.

ಮೂಗೂರು ಸಮುದಾಯ ಆರೋಗ್ಯ ಕೇಂದ್ರದ ಹಿರಿಯ ಆರೋಗ್ಯ ಸುರಕ್ಷಾಧಿಕಾರಿ ಮೀನಾಕ್ಷಿ ಮಾತನಾಡಿ, ಮಾರಕ ರೋಗಗಳಾದ ಡೆಂಗ್ಯೂ, ಮಲೇರಿಯಾಗಳನ್ನು ನಿಯಂತ್ರಿಸಲು ನಾವು ನಮ್ಮ ಸುತ್ತ ಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಕುಷ್ಠರೋಗ ಹಾಗೂ ಕ್ಷಯ ರೋಗಿಗಳನ್ನು ಪತ್ತೆ ಹಚ್ಚಿ ಚಿಕಿತ್ಸೆ ನೀಡಲು ಆಗಾಗ ರಕ್ತ, ಕಫ ಪರೀಕ್ಷೆ ಮಾಡಿಸಿ ಇಲಾಖೆ ಸಿಬ್ಬಂದಿಗೆ ಜನತೆ ಸಹಕರಿಸಬೇಕು. ಅಂಧತ್ವ ನಿವಾರಣಾ ಕಾರ್ಯಕ್ರಮದಡಿ ಹಿರಿಯ ನಾಗರಿಕರಿಗೆ ಉಚಿತ ಕನ್ನಡಕ ನೀಡಲಾಗುತ್ತಿದೆ ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಇದೇ ವೇಳೆ ಗರ್ಭಿಣಿ ಹಾಗೂ ಬಾಣಂತಿಯರಿಗೆ ಅನಿಮಿಯಾ, ಪೌಷ್ಟಿಕ ಆಹಾರ, ಸೊಪ್ಪು, ತರಕಾರಿ ಬಳಕೆಯ ಬಗ್ಗೆ ಮಾಹಿತಿ ನೀಡಿ ಪ್ರಾತ್ಯಕ್ಷಿಕೆ ನಡೆಸಿಕೊಟ್ಟರು. ಆರೋಗ್ಯ ಸಂರಕ್ಷಣಾಧಿಕಾರಿ ಶಾಂತಮ್ಮ, ಎಂ.ವಸಂತ ಗೀತಾ, ಆಶಾ ಕಾರ್ಯಕರ್ತೆಯರು ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಹುಟ್ಟೂರಿನ ಸೇವೆ ಮಾಡುವುದು ಹೆಮ್ಮೆಯ ಸಂಗತಿ

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಎನ್.ಜವರಯ್ಯ

ತಿ.ನರಸೀಪುರ, ಜು.20– ಹುಟ್ಟೂರಿನಲ್ಲಿ ಜನಸೇವೆ ಮಾಡಲು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲು ಸ್ನೇಹ ಕಲಾ ತಂಡದ ಪದಾಧಿಕಾರಿಗಳು ಕಾರ್ಯಾಧ್ಯಕ್ಷ ಹುದ್ದೆ ನೀಡಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ ಎಂದು ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಎನ್.ಜವರಯ್ಯ ಹೇಳಿದರು.

ತಾಲೂಕಿನ ಸೋಸಲೆ ಗ್ರಾಮದ ಶ್ರೀ ಹೊನ್ನಾದೇವಿ ದೇವಾಲಯದ ಆವರಣದಲ್ಲಿ ನಡೆದ ಸ್ನೇಹ ಕಲಾ ತಂಡದ ಸಭೆಯಲ್ಲಿ ನೂತನ ಕಾರ್ಯಾಧ್ಯಕ್ಷರಾಗಿ ಆಯ್ಕೆಗೊಂಡ ಬಳಿಕ ನೇಮಕಾತಿ ಪತ್ರ ಸ್ವೀಕರಿಸಿ ಮಾತನಾಡಿದ ಅವರು, ಗ್ರಾಮದಲ್ಲಿ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ನಿರಂತರವಾಗಿ ಆಯೋಜಿಸಲು ಶ್ರಮಿಸುತ್ತೇನೆ ಎಂದರು.

ತಾಲೂಕಿನ ಸೋಸಲೆ ಗ್ರಾಮ ಪ್ರಮುಖ ಧಾರ್ಮಿಕ ದೇವಾಲಯಗಳ ನೆಲೆ ಬೀಡಾಗಿದ್ದು, ವ್ಯಾಸರಾಜರ ಮಠ ಹೊಂದಿರುವುದು ಗ್ರಾಮದ ಭವ್ಯ ಪರಂಪರೆಯಾಗಿದೆ. ಗ್ರಾಮದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ಹಲವರು ನಡೆಸಿಕೊಂಡು ಬರುತ್ತಿದ್ದಾರೆ. ಅವರೊಡನೆ ನಾನು ಕೂಡ ಕಾರ್ಯಭಾರಿಯಾಗಿ ಪಾಲ್ಗೊಳ್ಳುತ್ತೇನೆ. ಸ್ನೇಹ ಕಲಾ ತಂಡವನ್ನು ಎಲ್ಲರೊಡನೆ ಉತ್ತಮವಾಗಿ ಕಟ್ಟುತ್ತೇನೆ ಎಂದರು.



ಸ್ನೇಹ ಕಲಾ ತಂಡದ ನೂತನ ಕಾರ್ಯಾಧ್ಯಕ್ಷ ಉಪನ್ಯಾಸಕ ಎನ್.ಜವರಯ್ಯ ಅವರನ್ನು ಸನ್ಮಾನಿಸಲಾಯಿತು.

ಈ ವೇಳೆ ಶ್ರೀಹೊನ್ನಾದೇವಿ ಅಮ್ಮನವರ ಸನ್ನಿಧಿಯಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಕಲಾ ತಂಡದ ಅಧ್ಯಕ್ಷ ಎಂ.ನಾಗರಾಜು, ಗೌರವಾಧ್ಯಕ್ಷ ಬೇಕರಿ ಸೋಮಣ್ಣ, ಪ್ರಧಾನ ಕಾರ್ಯದರ್ಶಿ ಎ.ನಾಗರಾಜು (ಪಾಪು), ಉಪಾಧ್ಯಕ್ಷ ಎಸ್.ಸಿದ್ದರಾಜು, ಸಂಚಾಲಕ ಎನ್.ದಿನೇಶ್ ಹಾಗೂ ಖಜಾಂಚಿ ಎಸ್.ಎಂ. ಚಿನ್ನಸ್ವಾಮಿ ಇದ್ದರು.

ಬಿತ್ತನೆ ಬೀಜ ವಿತರಿಸುವ ಕಾರ್ಯಕ್ಕೆ ಚಾಲನೆ

ಬನ್ನೂರು, ಜು.20– ರಾಜ್ಯಾದ್ಯಂತ ಮುಂಗಾರು ಮಳೆ ಆರಂಭವಾಗಿರುವುದು ರೈತರಿಗೆ ಸಂತಸವನ್ನುಂಟು ಮಾಡಿದ್ದು, ಕೃಷಿ ಕಾರ್ಯಗಳತ್ತ ರೈತರು ತಮ್ಮ ಚಿತ್ತ ಹರಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಅವರಿಗೆ ಸಕಾಲದಲ್ಲಿ ಬಿತ್ತನೆ ಬೀಜ ವಿತರಿಸಿದರೆ ಉತ್ತಮ ಬೆಳೆ ನಿರೀಕ್ಷಿಸಬಹುದು ಎಂದು ಯಾಚೇನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ವೈ.ಎನ್.ಶಂಕರೇಗೌಡ ತಿಳಿಸಿದರು.

ಪಟ್ಟಣದ ಯಾಚೇನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ಕೃಷಿ ಇಲಾಖೆಯಿಂದ ರೈತರಿಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಿಸುವ ಕಾರ್ಯಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ರೈತರಿಗೆ ಸಕಾಲದಲ್ಲಿ ಮಳೆಯಾಗಿ ಬಿತ್ತನೆ ಬೀಜ, ರಸಗೊಬ್ಬರ ದೊರಕಿದರೆ ಅವರು ಯಾರ ಮುಂದೆಯೂ ಕೈ ಚಾಚುವ ಅಗತ್ಯ ಇರುವುದಿಲ್ಲ. ಇವುಗಳನ್ನು ಮನಗಂಡು ಸರ್ಕಾರ ಸಕಾಲದಲ್ಲಿ ರೈತರಿಗೆ ಬೇಕಾದ ಸೌಲಭ್ಯವನ್ನು ಒದಗಿಸಿಕೊಟ್ಟರೆ ಆದಲ್ಲಿ ರಾಜ್ಯದಲ್ಲಿ ಸುಭಿಕ್ಷೆ ಕಾಣಬಹುದು. ತಾಲೂಕಿನಲ್ಲಿ ರೈತರಿಗೆ ಸಕಾಲದಲ್ಲಿ ಬಿತ್ತನೆ ಬೀಜ ವಿತರಿಸುವಲ್ಲಿ ತಮ್ಮ ಸೊಸೈಟಿಯೇ ಮೊದಲನೆಯದು ಎಂದರು.

ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷ ವೈ.ಎಂ.ಚಂದ್ರು, ವೈ.ಕೆ.ಬೋರೇಗೌಡ, ವೈ.ಎಚ್.ಹನುಮಂತೇಗೌಡ, ವೈ.ಜಿ.ಮಹೇಂದ್ರ, ಹೆಚ್.ಪಿ.ಪ್ರತಿಭಾ, ಕೆಂಪಮ್ಮ, ರಾಜು, ದುರ್ಗೇಶ್, ವೈ.ಎಂ.ನಾಗೇಂದ್ರ, ವೈ.ಎಸ್.ಶಿವರಾಮು, ರಾಜಪ್ಪ, ಸಿಇಓ ವೈ.ಕೆ.ಕ್ಯಾತೇಗೌಡ ಇದ್ದರು.



ರೈತರಿಗೆ ಪಿಎಸಿಎಸ್ ಅಧ್ಯಕ್ಷ ವೈ.ಎನ್.ಶಂಕರೇಗೌಡ ಬಿತ್ತನೆ ಬೀಜ ವಿತರಿಸಿದರು.

ಬ್ಯಾಂಕ್ ಆಫ್ ಬರೋಡಗೆ 2.38 ಕೋಟಿ ಲಾಭ

ಶಾಖೆ ಹಿರಿಯ ವ್ಯವಸ್ಥಾಪಕ ಮೋಹನ್ ಕುಮಾರ್

ಹುಣಸೂರು, ಜು.20– ರೈತರು, ವಾಣಿಜ್ಯೋದ್ಯಮಿಗಳು ಹಾಗೂ ಗ್ರಾಹಕರ ಸಹಕಾರದಿಂದ ಪಟ್ಟಣದ ಬ್ಯಾಂಕ್ ಆಫ್ ಬರೋಡ ಶಾಖೆ 2025ರ ಮಾರ್ಚ್ ಅಂತ್ಯಕ್ಕೆ 155 ಕೋಟಿ ವ್ಯವಹಾರ ನಡೆಸಿದ್ದು, 2.38 ಕೋಟಿ ಲಾಭ ಗಳಿಸಿದೆ ಎಂದು ಶಾಖೆ ಹಿರಿಯ ವ್ಯವಸ್ಥಾಪಕ ಮೋಹನ್ ಕುಮಾರ್ ತಿಳಿಸಿದರು.

ಪಟ್ಟಣದ ಬಿ.ಎಂ.ರಸ್ತೆಯಲ್ಲಿರುವ ಬ್ಯಾಂಕ್ ಆಫ್ ಬರೋಡ ಶಾಖೆಯಲ್ಲಿ ನಡೆದ 118ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಹುಣಸೂರಿನಲ್ಲಿ 1973ರಲ್ಲಿ ಕೆಲವೇ ಕೆಲವು ಗ್ರಾಹಕರಿಂದ ಪ್ರಾರಂಭವಾದ ನಮ್ಮ ಶಾಖೆ ಇಂದು 30 ಸಾವಿರಕ್ಕೂ ಹೆಚ್ಚು ಗ್ರಾಹಕರನ್ನು ಹೊಂದಿದ್ದು, ರೈತರು, ವಾಣಿಜ್ಯೋ ದ್ಯಮಿಗಳು ಹಾಗೂ ಗ್ರಾಹಕರ ಸಹಕಾರ ದಿಂದ ಪ್ರಸಕ್ತ ಸಾಲಿನಲ್ಲಿ ನಮ್ಮ ಬ್ಯಾಂಕ್ 2.38 ಕೋಟಿ ರೂ. ಲಾಭ ಗಳಿಸಿದೆ ಎಂದರು.



ಹುಣಸೂರಲ್ಲಿ ಬ್ಯಾಂಕ್ ಆಫ್ ಬರೋಡ ಸಂಸ್ಥಾಪನಾ ದಿನಾಚರಣೆ ನಡೆಯಿತು.

ನಮ್ಮ ಶಾಖೆಯಲ್ಲಿ ಅತೀ ಕಡಿಮೆ ಶೇ.7 .45 ಬಡ್ಡಿ ದರಲ್ಲಿ ಗೃಹ ಸಾಲ ನೀಡಲಾಗುತ್ತಿದೆ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಬಡ್ಡಿ ರಹಿತವಾಗಿ 50 ಲಕ್ಷದವರೆಗೆ ಶಿಕ್ಷಣ ಸಾಲ ನೀಡುತ್ತಿದ್ದೇವೆ. ಅಲ್ಲದೇ ರೈತರಿಗೆ ಕೃಷಿ, ಯಂತ್ರೋಪಕರಣ ಸಾಲ ಒದಗಿಸುತ್ತಿದ್ದೇವೆ. ವಾಣಿಜ್ಯೋದ್ಯಮಿಗಳಿಗೆ ವ್ಯಾಪಾರ ಸಾಲ, ಮಹಿಳೆಯರಿಗೆ ಗುಂಪು ಸಾಲ ಸೇರಿದಂತೆ ವಿವಿಧ ಸಾಲ ವಿತರಿಸಲಾಗುತ್ತಿದೆ. ಅಲ್ಲದೇ ವಾಹನ ಸಾಲವನ್ನು ಕಡಿಮೆ ಬಡ್ಡಿ ದರದಲ್ಲಿ ನೀಡುತ್ತಿದ್ದೇವೆ. ಹೂಡಿಕೆಗಳ ಮೇಲೆ ಆಕರ್ಷಕ ಬಡ್ಡಿ ನೀಡುವ ಮೂಲಕ ನಮ್ಮ ಗ್ರಾಹಕರಿಗೆ ವಿವಿಧ ಸೌಲಭ್ಯಗಳನ್ನು ನೀಡುತ್ತಿದ್ದೇವೆ. ಇವುಗಳನ್ನು ಗ್ರಾಹಕರು ಬಳಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಶಾಖೆ ಕೃಷಿ ಅಧಿಕಾರಿ ರೇವು, ರವಿತೇಜ, ಮೋನಿಕಾ, ಸೂರ್ಯ, ನಾರಾಯಣ್, ಶಿವಕುಮಾರ್, ನಾಗೇಂದ್ರ, ರಕ್ಷಿತಾ, ಸಂಪತ್ ಕುಮಾರ್, ಮಂಜುನಾಥ್, ಭರತ್, ಮಂಜು, ಡಾ.ಚಂದ್ರಶೇಖರ್, ಸಂತೋಷ್, ಸಣ್ಣತಮ್ಮೇಗೌಡ, ಸಣ್ಣ ಸ್ವಾಮಿ, ಮಹಿಳಾ ಸಂಘಗಳ ಪ್ರಿಯಾಂಕ, ಆಶಾ, ಉಷಾ, ಸೂರ್ಯಕುಮಾರ್, ಸತೀಶ್ ಕುಮಾರ್ ಸೇರಿದಂತೆ ಗ್ರಾಹಕರು ಇದ್ದರು.

ಮೀನುಗಾರಿಕೆ ಇಲಾಖೆ ಸವಲತ್ತುಗಳನ್ನು ಸದ್ಬಳಕೆ ಮಾಡಿಕೊಳ್ಳಿ

ಮೀನುಗಾರರ ಘಟಕದ ಅಧ್ಯಕ್ಷ ಕೆ.ಎನ್.ಕುಮಾರ್

ತಿ.ನರಸೀಪುರ, ಜು.20– ಮೀನುಗಾರಿಕೆ ಇಲಾಖೆಯಲ್ಲಿ ಹತ್ತು ಹಲವು ಯೋಜನೆಗಳಿದ್ದು, ಅವುಗಳನ್ನು ಸದ್ಬಳಕೆ ಮಾಡಿಕೊಳ್ಳುವಂತೆ ಮೀನುಗಾರರ ಘಟಕದ ಅಧ್ಯಕ್ಷ ಕೊಳತ್ತೂರು ಕೆ.ಎನ್.ಕುಮಾರ್ ತಿಳಿಸಿದರು.

ಪಟ್ಟಣದ ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕಿ ಶ್ವೇತ ಅವರನ್ನು ಭೇಟಿಯಾಗಿ ತಾಲೂಕಿನ ಮೀನುಗಾರರ ಬಗ್ಗೆ ಮಾಹಿತಿ ಪಡೆದು ನಂತರ ಎಸ್‌ಸಿ, ಎಸ್‌ಟಿ ಮತ್ತು ಹಿಂದುಳಿದ ವರ್ಗಗಳಿಗೆ ಸರ್ಕಾರದಿಂದ ಬರುವ ಸವಲತ್ತುಗಳನ್ನು ನೇರವಾಗಿ ಕಲ್ಪಿಸುವಂತೆ ತಿಳಿಸಿ ಮಾತನಾಡಿದ ಅವರು, ಕ್ಷೇತ್ರದ ಅಭಿವೃದ್ಧಿಗೆ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಹಾಗೂ ಸಂಸದ ಸುನೀಲ್ ಬೋಸ್ ಅವರು ಹೆಚ್ಚಿನ ಅನುದಾನ ನೀಡುತ್ತಿದ್ದು, ಸರ್ಕಾರ ಹಿಂದುಳಿದ ವರ್ಗ, ದೀನ ದಲಿತರು ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಹೆಚ್ಚಿನ ಯೋಜನೆ ರೂಪಿಸಿದೆ ಎಂದರು.



ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕಿ ಶ್ವೇತ ಅವರನ್ನು ಸನ್ಮಾನಿಸಲಾಯಿತು.

ಇದೇ ವೇಳೆ ಮೀನುಗಾರರಿಗೆ ಸಿಗುವ ಸವಲತ್ತುಗಳ ಬಗ್ಗೆ ಮಾಹಿತಿ ಪಡೆದ ಅವರು ಮೀನುಗಾರರಿಗೆ ಅವುಗಳು ನೇರವಾಗಿ ತಲುಪಿ ಸಂಕಷ್ಟದಲ್ಲಿರುವ ಅವರ ಬದುಕಿಗೆ ನೆರವಾಗಬೇಕು ಎಂದರು. ಡಿಸಿಸಿ ಸದಸ್ಯರಾದ ಮೇದಿನಿ ಕುಮಾರ್, ಗದ್ದೆಮೋಳೆ ಸಿದ್ದರಾಜು, ಕೊಳತ್ತೂರು ಗ್ರಾಪಂ ಮಾಜಿ ಅಧ್ಯಕ್ಷ ಆರ್.ಸೋಮಣ್ಣ ಇತರರಿದ್ದರು.

ಬೈಕ್‌ಗೆ ಟ್ರಾಕ್ಟರ್ ಡಿಕ್ಕಿ: ಸವಾರ ಸಾವು



ತಿ.ನರಸೀಪುರ, ಜು.20–ಬೈಕ್‌ಗೆ ಟ್ರಾಕ್ಟರ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಶನಿವಾರ ರಾತ್ರಿ ಪಟ್ಟಣದ ನಂಜನಗೂಡು ರಸ್ತೆಯ ಆರ್‌ಎಂಸಿ ಬಳಿ ನಡೆದಿದೆ.

ತಾಲೂಕಿನ ಹೆಳವರಹುಂಡಿ ಗ್ರಾಮದ ವೀರಭದ್ರಪ್ಪ ಅವರ ಪುತ್ರ ಗ್ಯಾಸ್ ಕುಮಾರ್ ಅಲಿಯಾಸ್ ಬಸವಣ್ಣ ಸಾವನ್ನಪ್ಪಿದವರು. ಈತ ರಾತ್ರಿ 10.20ರಲ್ಲಿ ತಿ.ನರಸೀಪುರದಿಂದ ಸ್ವಗ್ರಾಮ ಹೆಳವರ ಹುಂಡಿ ಗ್ರಾಮಕ್ಕೆ ತನ್ನ ಸ್ಪ್ಲೆಂಡರ್ ಪ್ಲಸ್ (ಕೆಎ.55, ವಿ.3709) ಬೈಕ್‌ನಲ್ಲಿ ನಂಜನಗೂಡು ಏಕಮುಖ ರಸ್ತೆಯಲ್ಲಿ ಎಡ ಭಾಗದಲ್ಲಿ ಹೋಗುತ್ತಿದ್ದ ವೇಳೆ ಹೆಳವರಹುಂಡಿ ಗ್ರಾಮದ ಕಡೆಯಿಂದ ಅತೀ ವೇಗವಾಗಿ ಬಂದ ಟ್ರಾಕ್ಟರ್ (ಕೆಎ. 35, ಟಿಸಿ.3213) ಚಾಲಕ ಏಕಮುಖ ಸಂಚಾರವಿದ್ದರೂ ರಸ್ತೆಯ ಬಲ ಭಾಗದಲ್ಲಿ ವಿರುದ್ಧ ದಿಕ್ಕಿನಲ್ಲಿ ಬಂದ ಪರಿಣಾಮ ಆರ್‌ಎಂಸಿ ಬಳಿ ಬೈಕ್‌ಗೆ ಮುಖಾಮುಖಿ ಡಿಕ್ಕಿ ಹೊಡೆದಿದ್ದಾನೆ. ಪರಿಣಾಮ ತೀವ್ರ ಗಾಯಗೊಂಡ ಕುಮಾರನನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸುವಷ್ಟರಲ್ಲಿ ಆತ ಸಾವನ್ನಪ್ಪಿದ್ದಾರೆ. ಘಟನೆ ಬಳಿಕ ಚಾಲಕ ಸ್ಥಳದಲ್ಲೇ ಟ್ರಾಕ್ಟರ್ ಬಿಟ್ಟು ಪರಾರಿಯಾಗಿದ್ದಾನೆ. ಪ್ರಕರಣ ಸಂಬಂಧ ಮೃತನ ಸಹೋದರ ಸೋಮಶೇಖರ್ ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಅನ್ನ ನೀಡುವ ರೈತ ದೇಶದ ಬೆನ್ನೆಲುಬು

ಮಲ್ಕುಂಡಿ, ಜು.20– ಅನ್ನ ನೀಡುವ ರೈತ ದೇಶದ ಬೆನ್ನೆಲುಬು ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ತಿಳಿಸಿದರು.

ಇಲ್ಲಿಗೆ ಸಮೀಪದ ತರಗನಹಳ್ಳಿಯಲ್ಲಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಗ್ರಾಮ ಘಟಕದ ನಾಮಫಲಕ ಅನಾವರಣಗೊಳಿಸಿ ಮಾತನಾಡಿದ ಅವರು, ರೈತರು ಸೌಲಭ್ಯಗಳನ್ನು ಪಡೆದುಕೊಳ್ಳಲು ಗ್ರಾಮೀಣ ಭಾಗದಲ್ಲಿ ರೈತ ಸಂಘ ಮುಖ್ಯವಾಗಿದೆ. ಸರ್ಕಾರ ರೈತರ ಬೆಳೆಗೆ ಸೂಕ್ತ ಬೆಂಬಲ ಬೆಲೆ ಕಲ್ಪಿಸಬೇಕು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ದಿನಬಳಕೆಯ ಪದಾರ್ಥ ಬೆಲೆ ಏರಿಕೆ ಮಾಡಿ ಜನತೆಯ ಜೀವದ ಜೊತೆ ಚೆಲ್ಲಾಟವಾಡುತ್ತಿವೆ ಎಂದು ಆರೋಪಿಸಿದ ಅವರು, ರೈತರು ತಮ್ಮ ಹಕ್ಕುಗಳಿಗಾಗಿ ಒಗ್ಗಟಿನಿಂದ ಹೋರಾಟ ಮಾಡಬೇಕಾಗಿದೆ ಎಂದರು.



ಕಬ್ಬು ಬೆಳೆಗಾರರ ಸಂಘದ ನಾಮಫಲಕ ಅನಾವರಣಗೊಳಿಸಲಾಯಿತು.

ಈ ವೇಳೆ ಶ್ರೀಕಂಠೆ ಮಹದೇಶ್ವರಬೆಟ್ಟದ ದೇಶಿಕೇಂದ್ರ ಸ್ವಾಮೀಜಿ, ಸಂಘದ ಜಿಲ್ಲಾಧ್ಯಕ್ಷ ಗಣೇಶ್, ಗ್ರಾಪಂ ಸದಸ್ಯ ನಂಜುಂಡಸ್ವಾಮಿ, ಮಲ್ಲೇಶ್, ರಾಜಣ್ಣ, ಪ್ರಭು, ಪುಟ್ಟಸ್ವಾಮಿ, ಕಾಮನಾಯಕ, ಸಿದ್ದಯ್ಯ, ಚನ್ನಪಾಜಿನಾಯಕ, ರಂಗಯ್ಯ, ಶಿವಣ್ಣ, ಜಗದೀಶ್, ಹುಲ್ಲಹಳ್ಳಿ ಬ್ಲಾಕ್ ಎಸ್ಸಿ ಘಟಕದ ಅಧ್ಯಕ್ಷ ಸೋಮೇಶ್, ಮಹೇಶ್, ಗ್ರಾಮ ಘಟಕದ ಅಧ್ಯಕ್ಷ ಪ್ರಸನ್ನ ಆರಾಧ್ಯ, ಉಪಾಧ್ಯಕ್ಷ ಮಹದೇವನಾಯಕ, ಪ್ರಧಾನ ಕಾರ್ಯದರ್ಶಿ ನಾರಾಯಣ್, ರಾಜ್ಯ ಸಂಚಾಲಕ ಹನುಮಯ್ಯ, ಮದನ್ ಕುಮಾರ್, ನವೀನ್ ಇದ್ದರು.

ಜು.24ಕ್ಕೆ, ಭೀಮನ ಅಮಾವಾಸ್ಯೆ ಪ್ರಯುಕ್ತ

ಭೀಮನಕೊಲ್ಲಿ ಶ್ರೀಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ

ಹೆಚ್.ಡಿ.ಕೋಟೆ, ಜು.20– ತಾಲೂಕಿನ ಭೀಮನಕೊಲ್ಲಿ ಶ್ರೀಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ಜು.24ರಂದು ಭೀಮನ ಅಮಾವಾಸ್ಯೆ ಪ್ರಯುಕ್ತ ವಿಶೇಷ ಪೂಜೆಗಳು ನಡೆಯಲಿದ್ದು, ಇದಕ್ಕಾಗಿ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ದೇವಾಲಯದ ಕಮಿಟಿ ಅಧ್ಯಕ್ಷ ಎಂ.ಪಿ.ಎಸ್.ಮೂರ್ತಿ ತಿಳಿಸಿದ್ದಾರೆ.

ಅಂದು ಭೀಮನ ಅಮಾವಾಸ್ಯೆ ಪ್ರಯುಕ್ತ ಮಹದೇಶ್ವರನಿಗೆ ಬೆಳಗ್ಗೆ 7 ಗಂಟೆಗೆ ಮಹಾರುದ್ರಾಭಿಷೇಕ, 9 ಗಂಟೆಗೆ ಮಹಾಮಂಗಳಾರತಿ ನಡೆಯಲಿದ್ದು, ದೇವಾಲಯಕ್ಕೆ ಆಗಮಿಸುವ ಸಾವಿರಾರು ಭಕ್ತರಿಗೆ ದೇವರ ದರ್ಶನಕ್ಕೆ ಯಾವುದೇ ತೊಂದರೆಯಾಗದ ರೀತಿ ಎಲ್ಲಾ ರೀತಿಯ ವ್ಯವಸ್ಥೆ ಮಾಡಲಾಗಿದೆ. ಅಲ್ಲದೇ ಭಕ್ತರಿಗೆ ಹೆಚ್.ಡಿ.ಕೋಟೆ ತಾಲೂಕಿನ ಹೆಬ್ಬಲಗುಪ್ಪೆ ಗ್ರಾಮದ 24 ಮನೆ ತೆಲಗು ಶೆಟ್ಟರು, ನಂಜನಗೂಡು ತಾಲೂಕಿನ ಕಳಲೆ ಗ್ರಾಮದ 24 ಮನೆ ತೆಲಗು ಶೆಟ್ಟರು, ದೇಬೂರು ನಾಗರಾಜು ಹಾಗೂ ಭೀಮನಕೊಲ್ಲಿ ದೇವಸ್ಥಾನ ಸಮಿತಿ ಸದಸ್ಯರು ದಾಸೋಹ ನೆರವೇರಿಸಲಿದ್ದಾರೆ ಎಂದರು.



ಈ ವೇಳೆ ಉಪಾಧ್ಯಕ್ಷ ಎಸ್.ಗುರು ಮಲ್ಲಪ್ಪ, ಕಾರ್ಯದರ್ಶಿ ಎಂ.ಎನ್.ಜಗದೀಶ್ ಇದ್ದರು.

ಜಮೀನು ಮಾರಿ ಶ್ರೀ ದತ್ತಾತ್ರೇಯಸ್ವಾಮಿ ದೇವಸ್ಥಾನ ಜೀರ್ಣೋದ್ಧಾರ

ಯಾವುದೇ ಅವ್ಯವಹಾರ ನಡೆಸಿಲ್ಲ: ದೇವಾಲಯದ ಟ್ರಸ್ಟ್ ಅಧ್ಯಕ್ಷ ರಾಮ್ ಗೋಪಾಲ್

ನಂಜನಗೂಡು, ಜು.20– ಶ್ರೀ ದತ್ತಾತ್ರೇಯಸ್ವಾಮಿ ದೇವಸ್ಥಾನ ಜೀರ್ಣೋದ್ಧಾರ ಮಾಡಲು ದೇವಾಲಯಕ್ಕೆ ಸೇರಿದ ತಾಲೂಕಿನ ಮಹದೇವನಗರದಲ್ಲಿರುವ 6 ಎಕರೆ ಜಮೀನನ್ನು ಮಾರಾಟ ಮಾಡಲು ನಿರ್ಧರಿಸಲಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಬಿಂಬಿಸಿರುವಂತೆ ಯಾವುದೇ ಅವ್ಯವಹಾರ ನಡೆಸಿಲ್ಲ ಎಂದು ಶ್ರೀದತ್ತಾತ್ರೇಯಸ್ವಾಮಿ ದೇವಾಲಯದ ಟ್ರಸ್ಟ್ ಅಧ್ಯಕ್ಷ ರಾಮ್ ಗೋಪಾಲ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇವಾಲಯದ ಪೂಜಾ ಕೈಂಕರ್ಯ ನಡೆಸಲು ಹಾಗೂ ದೇವಸ್ಥಾನದ ಅಭಿವೃದ್ಧಿಗೊಳಿಸುವ ಮೂಲ ಗುರಿ ಇಟ್ಟುಕೊಂಡು ದೇವಾಲಯದ ಟ್ರಸ್ಟ್ ರಚಿಸಿ ಸಬ್ ರಿಜಿಸ್ಟರ್ ಕಚೇರಿಯಲ್ಲಿ ನೋಂದಣಿ ಮಾಡಲಾಗಿದೆ. ಈ ಟ್ರಸ್ಟ್‌ಗೆ ನಗರದ ಗೌರವಾನ್ವಿತ ವ್ಯಕ್ತಿಗಳು ಸದಸ್ಯರಾಗಿ ದೇವಾಲಯದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ ಎಂದರು.

ನಗರದ ಬೈಪಾಸ್ ರಸ್ತೆಯಲ್ಲಿ ದತ್ತಾತ್ರೇಯಸ್ವಾಮಿ ದೇವಾಲಯದ ಎದುರು ಒಂದು ಎಕರೆ ನಿವೇಶನವಿದೆ. ಅಲ್ಲದೇ ತಾಲೂಕಿನ ಮಹದೇವ ನಗರದಲ್ಲಿ 6 ಎಕರೆ 13 ಕುಂಟೆ ಜಮೀನು ಇದೆ. ಈ ಜಮೀನು ಅನುಪಯುಕ್ತವಾಗಿರುವ ಕಾರಣ ಜೊತೆಗೆ ಖಾಸಗಿ ವ್ಯಕ್ತಿಗಳು ಅತಿಕ್ರಮಣ ಮಾಡುವುದನ್ನು ತಪ್ಪಿಸುವ ಸಲುವಾಗಿ ಜಮೀನನ್ನು ಮಾರಾಟ ಮಾಡಿ ದೇವಾಲಯದ ಎದುರು ಇರುವ ನಿವೇಶನದಲ್ಲಿ ವಾಣಿಜ್ಯ ಕಟ್ಟಡ ನಿರ್ಮಿಸಿ ದೇವಾಲಯದ ಆಸ್ತಿಯನ್ನಾಗಿಸುವುದು ಮತ್ತು ದೇವಾಲಯದ ಜೀರ್ಣೋದ್ಧಾರ ಕಾರ್ಯ ಕೈಗೊಳ್ಳುವ ಸಲುವಾಗಿ ಸಮಿತಿ ಜಮೀನನ್ನು ಮಾರಾಟ ಮಾಡುವ ನಿರ್ಣಯ ಕೈಗೊಂಡಿದೆ ಎಂದರು.



ಸುದ್ದಿಗೋಷ್ಠಿಯಲ್ಲಿ ರಾಮ್‌ಗೋಪಾಲ್ ಮಾತನಾಡಿದರು.

ಜಮೀನು ಮಾರಾಟದ ಬಗ್ಗೆ ಇನ್ನೂ ಯಾರೊಂದಿಗೂ ಅಂತಿಮ ಹಂತದ ಮಾತುಕತೆ ನಡೆದಿಲ್ಲ. ಜೊತೆಗೆ ಯಾವ ವ್ಯಕ್ತಿ ಜೊತೆಗೂ ಒಪ್ಪಂದ ಮಾಡಿಕೊಂಡಿಲ್ಲ. ಯಾರು ಅತಿ ಹೆಚ್ಚು ಬೆಲೆ ನೀಡುತ್ತಾರೋ ಅವರಿಗೆ ಸದರಿ ಜಮೀನನ್ನು ಮಾರಾಟ ಮಾಡಲು ಟ್ರಸ್ಟ್ ನಿರ್ಧರಿಸಿದೆ.

ಆದರೆ ಕೆಲವರು ಸಾಮಾಜಿಕ ಜಾಲತಾಣದಲ್ಲಿ ದೇವಸ್ಥಾನದ ಟ್ರಸ್ಟಿಗಳ ಬಗ್ಗೆ ವಿನಾ ಕಾರಣ ಕೀಳು ಮಟ್ಟದ ಪದ ಪ್ರಯೋಗ ಮಾಡಿ ದೋಷಾರೋಪಣೆ ಮತ್ತು ನಿಂದನೆಗಳನ್ನು ಮಾಡಿದ್ದಾರೆ. ಸತ್ಯಾಸತ್ಯತೆ ಅರಿಯದೆ ಟ್ರಸ್ಟಿಗಳ ಬಗ್ಗೆ ಚಾರಿತ್ರಿಕ ನಿಂದನೆಗಳನ್ನು ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾದುದು. ಇದರಿಂದ ಟ್ರಸ್ಟಿಗಳ ಮನಸ್ಸಿಗೆ ಬೇಸರ ವಾಗಿದ್ದು ಯಾವುದೇ ಸ್ವಾರ್ಥವಿಲ್ಲದೇ ದತ್ತಾತ್ರೇಯ ಸ್ವಾಮಿ ದೇವಸ್ಥಾನದ ಅಭಿವೃದ್ಧಿಗೆ ಕೈಜೋಡಿಸಿರುವ ಟ್ರಸ್ಟಿಗಳ ಮೇಲಿನ ನಿಂದನೆಗಳನ್ನು ನಾವು ಖಂಡಿಸುತ್ತೇವೆ ಎಂದರು.

ಗೋಷ್ಠಿಯಲ್ಲಿ ಟ್ರಸ್ಟ್ ಗೌರವಾಧ್ಯಕ್ಷ ಯು.ಎನ್.ಪದ್ಮನಾಭ ರಾವ್, ಉಪಾಧ್ಯಕ್ಷ ಆರ್.ವಿ.ಮಹದೇವಸ್ವಾಮಿ, ಕಾರ್ಯದರ್ಶಿ ಶಿವನಂಜೇಗೌಡ, ಸದಸ್ಯರಾದ ಹಾಗೂ ಜೆಡಿಎಸ್ ಜಿಲ್ಲಾಧ್ಯಕ್ಷ ಎನ್.ನರಸಿಂಹಸ್ವಾಮಿ, ಎನ್.ಆರ್.ಕೃಷ್ಣಪ್ಪಗೌಡ, ವಕೀಲರಾದ ಯೋಗೀಶ್, ಒಳಗುಡಿ ಶಿವಣ್ಣ, ಶಂಕರ ದೀಕ್ಷಿತ್, ಎನ್.ಸಿ.ಬಸವಣ್ಣ, ಜಗದೀಶ್, ಸುರೇಶ್, ಪಿ.ನರಸಿಂಹಸ್ವಾಮಿ ಸೇರಿದಂತೆ ಹಲವರಿದ್ದರು.

ಅಗಲಿದ ಗಣ್ಯರಿಗೆ ಶ್ರದ್ಧಾಂಜಲಿ



ತಿ.ನರಸೀಪುರ ತಾಲೂಕು ಪ್ರಗತಿಪರ ಚಿಂತಕರ ವೇದಿಕೆಯಿಂದ ಪತ್ರಿಕೋದ್ಯಮದ ಭೀಷ್ಮ, 'ಮೈಸೂರು ಮಿತ್ರ ಹಾಗೂ ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ(ಕೆಬಿಜಿ), ಹಿರಿಯ ಚಿತ್ರನಟಿ ಬಿ.ಸರೋಜಾದೇವಿ ಹಾಗೂ ಮಾಜಿ ಉಪಸಭಾಪತಿ ತಿಪ್ಪಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ಮುಖಂಡರಾದ ಚೌಹಳ್ಳಿ ಲಿಂಗರಾಜಪ್ಪ, ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ, ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಿರಗಸೂರು ಶಂಕರ್, ಲೋಕೇಶ್, ಕೃಷ್ಣಪ್ಪ, ನಿವೃತ್ತ ಪ್ರಾಚಾರ್ಯ ಸೋಮಣ್ಣ, ಕಾರ್ಮಿಕರ ಸಂಘದ ಅಧ್ಯಕ್ಷ ಪುಟ್ಟಮಲ್ಲಯ್ಯ, ಸೋಸಲೆ ರಾಜಶೇಖರ್, ಬಾಬು ಜಗಜೀವನರಾಂ ಸಂಘದ ಅಧ್ಯಕ್ಷ ಪುಟ್ಟಯ್ಯ, ಕುರುಬೂರು ನಾಗರಾಜು, ನಿಂಗರಾಜು, ಇಂಜಿನಿಯರ್ ಮಂಜುನಾಥ್, ಬೃಂದಾ ಆಸ್ಪತ್ರೆ ಗುರು, ನಾಗೇಶ, ಹೊಸೂರುಹುಂಡಿ ತೋಂಟೇಶ್, ವಕೀಲ ಜ್ಞಾನೇಂದ್ರ ಮೂರ್ತಿ, ಉಪನ್ಯಾಸಕ ಕುಮಾರಸ್ವಾಮಿ, ಸಿದ್ದಪ್ಪ, ದುಂಡುಮಾದಯ್ಯ ಇತರರಿದ್ದರು.

ಮೈಸೂರು ಸುತ್ತೂರು ಮಠಕ್ಕೆ ಸದ್ಗುರು ಜಗ್ಗಿ ವಾಸುದೇವ್ ಭೇಟಿ

ಶ್ರೀಗಳು-ಸದ್ಗುರು ಅವರಿಂದ ಪರಸ್ಪರ ಕುಶಲೋಪರಿ



ಮೈಸೂರಿನ ಸುತ್ತೂರು ಮಠಕ್ಕೆ ಭಾನುವಾರ ಸಂಜೆ ಭೇಟಿ ನೀಡಿದ್ದ ಇಶಾ ಫೌಂಡೇಶನ್ ಸಂಸ್ಥಾಪಕ ಸದ್ಗುರು ಜಗ್ಗಿ ವಾಸುದೇವ್ ಅವರನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಗೌರವಿಸಿದರು. ಚಿತ್ರದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಇತರರನ್ನು ಕಾಣಬಹುದು.

ಮೈಸೂರು,ಜು.20(ಪಿಎಂ)– ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಮಠಕ್ಕೆ ಶುಕ್ರವಾರ ಇಶಾ ಫೌಂಡೇಶನ್ ಸಂಸ್ಥಾಪಕರೂ ಆದ ಆಧ್ಯಾತ್ಮಿಕ ನಾಯಕ ಸದ್ಗುರು ಜಗ್ಗಿ ವಾಸುದೇವ್ ಭೇಟಿ ನೀಡಿದ್ದರು.

ಈ ವೇಳೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹಾಗೂ ಸದ್ಗುರು ಜಗ್ಗಿ ವಾಸುದೇವ್ ಪರಸ್ಪರ ಕುಶಲೋಪರಿ ನಡೆಸಿದರು. ಜಗ್ಗಿ ವಾಸುದೇವ್ ಅವರು ಮಠದ ಆವರಣಕ್ಕೆ ಆಗಮಿಸುತ್ತಿದ್ದಂತೆ ಮಂಗಳವಾದ್ಯದ ಸಂಗೀತ ಮೊಳಗಲಾರಂಭಿಸಿತು. ಜೊತೆಗೆ ಶಾಲಾ ಮಕ್ಕಳ ಬ್ಯಾಂಡ್ ಸಂಗೀತವೂ ಸಮ್ಮಿಲನಗೊಂಡು ಅವರಿಗೆ ಸಂಭ್ರಮದ ಸ್ವಾಗತ ಕೋರಲಾಯಿತು.

ಅಲ್ಲದೆ, ಛತ್ರಿ–ಚಾಮರ ಹಿಡಿದು ಅತ್ಯಂತ ಗೌರವಪೂರ್ವಕವಾಗಿ ಅವರನ್ನು ಮಠಕ್ಕೆ ಬರಮಾಡಿಕೊಳ್ಳಲಾಯಿತು. ಬಳಿಕ ಜಗ್ಗಿ ವಾಸುದೇವ್ ಅವರಿಗೆ ಸುತ್ತೂರು ಶ್ರೀಗಳು ಹೂಮಾಲೆ ನೀಡಿ ಆತ್ಮೀಯ ಸ್ವಾಗತ ಕೋರಿದರು. ನಂತರ ಸುತ್ತೂರು ಶ್ರೀಗಳೊಂದಿಗೆ ಸದ್ಗುರುಗಳು ಅರ್ಧ ತಾಸಿಗೂ ಹೆಚ್ಚು ಕಾಲ ಮಾತುಕತೆ ನಡೆಸಿದರು. ನಂತರ ಸುತ್ತೂರು ಶ್ರೀಗಳು ಹಾಗೂ ಸದ್ಗುರು ಅವರು ಹಲವು ಭಕ್ತರಿಗೆ ದರ್ಶನಾಶೀರ್ವಾದ ನೀಡಿದರು.

ತದನಂತರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಸದ್ಗುರು, ಮಠಕ್ಕೆ ಭೇಟಿ ನೀಡಿದ್ದರಲ್ಲಿ ಅಂತಹ ವಿಶೇಷ ಏನಿಲ್ಲ. ಸುತ್ತೂರು ಶ್ರೀಗಳನ್ನು ನೋಡಿ ಎರಡು ವರ್ಷಗಳೇ ಆಯಿತು. ನನಗೆ ಶಸ್ತ್ರಚಿಕಿತ್ಸೆ ಆಗಿದ್ದ ಸಂದರ್ಭದಲ್ಲಿ ಶ್ರೀಗಳು ದೆಹಲಿಗೆ ಬಂದು ಆರೋಗ್ಯ ವಿಚಾರಿಸಿ, ಶೀಘ್ರ ಗುಣಮುಖರಾಗುವಂತೆ ಹಾರೈಸಿದ್ದರು ಎಂದರು.

ಗುಣಮುಖನಾದ ನಂತರ ಮಠಕ್ಕೆ ಭೇಟಿ ನೀಡಿ ಶ್ರೀಗಳನ್ನು ನೋಡಬೇಕೆಂದು ಬಹಳ ಪ್ರಯತ್ನ ಮಾಡಿದ್ದೆ. ಆದರೆ ಅನೇಕ ಕೆಲಸ ಕಾರ್ಯಗಳ ಒತ್ತಡದಿಂದ ಸಾಧ್ಯವಾಗಿರಲಿಲ್ಲ. ಆದ್ದರಿಂದ ಇಂದು ಮಠಕ್ಕೆ ಭೇಟಿ ನೀಡಿದ್ದೇನೆ ಎಂದು ತಿಳಿಸಿದರು.

ಇದಾದ ಬಳಿಕ ಸುತ್ತೂರು ಮಠದಿಂದ ಹೊರಟ ಜಗ್ಗಿ ವಾಸುದೇವ್ ಅವರನ್ನು ಮತ್ತೆ ಮಂಗಳವಾದ್ಯ ಹಾಗೂ ಶಾಲಾ ಮಕ್ಕಳ ಬ್ಯಾಂಡ್ ಸಂಗೀತದೊಂದಿಗೆ ಬೀಳ್ಕೊಡಲಾಯಿತು. ಸುತ್ತೂರು ಶ್ರೀಗಳು ಅವರ ಜೊತೆಯಲ್ಲಿ ಬಂದು ಬೀಳ್ಕೊಟ್ಟರು.

ಇದಕ್ಕೂ ಮುನ್ನ ಮಾಜಿ ಸಚಿವ ಗೀತಾ ಮಹದೇವ ಪ್ರಸಾದ್, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಕರ್ನಾಟಕ ಪೊಲೀಸ್ ಅಕಾಡೆಮಿ ಪ್ರಭಾರ ನಿರ್ದೇಶಕ ಎಸ್.ಎಲ್.ಚನ್ನಬಸವಣ್ಣ, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್, ಕನ್ನಡ ಪರ ಹೋರಾಟಗಾರ ಮೂಗೂರು ನಂಜುಂಡ ಸ್ವಾಮಿ ಮತ್ತಿತರರು ಹಾಜರಿದ್ದು ಸುತ್ತೂರು ಶ್ರೀಗಳು ಹಾಗೂ ಸದ್ಗುರುಗಳ ಆಶೀರ್ವಾದ ಪಡೆದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾರ್ಗನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಜೂನಿಯರ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಮಾಲಿಕ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಜೂನಿಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಕ (ಕ)	4 ಪ್ರದರ್ಶನಗಳು
ರಾಜಕಮಲ್	
3 ಬಿಹೆಚ್‌ಕೆ (ತ)	4 ಪ್ರದರ್ಶನಗಳು
ಸಂಗಂ	
ಎಕ್ಕ (ಕ)	4 ಪ್ರದರ್ಶನಗಳು
ಲಿಡೋ	
ತಮ್ಮುಡು (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಾದೇವ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆ ಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಉಡುಪಿ ಗುರುಗಣೇಶ್ ತಂಡಕ್ಕೆ ವಿಶ್ವಬ್ರಹ್ಮ ಕ್ರಿಕೆಟ್ ಟ್ರೋಫಿ



ರಾಜ್ಯಮಟ್ಟದ ವಿಶ್ವಬ್ರಹ್ಮ ಕ್ರಿಕೆಟ್ ಟೂರ್ನ್‌ಮೆಂಟ್‌ನಲ್ಲಿ ಎಂಆರ್‌ಸಿ ತಂಡದ ವಿರುದ್ಧ ಜಯಗಳಿಸಿದ ಉಡುಪಿಯ ಗುರುಗಣೇಶ್ ತಂಡ

ಮೈಸೂರು, ಜು.20(ಎಸ್‌ಪಿಎನ್)– ಮೈಸೂರು ಜಿಲ್ಲಾ ಚಿನ್ನ–ಬೆಳ್ಳಿ ಕೆಲಸಗಾರರ ಅಭಿವೃದ್ಧಿ ಸಂಘದ ವತಿಯಿಂದ ಏರ್ಪಡಿಸಿದ್ದ ರಾಜ್ಯಮಟ್ಟದ ವಿಶ್ವಬ್ರಹ್ಮ ಕ್ರಿಕೆಟ್ ಟೂರ್ನಿಮೆಂಟ್ 2025ರ ವಿಜೇತ ತಂಡವಾಗಿ ಉಡುಪಿಯ ಗುರುಗಣೇಶ್ ತಂಡ ಹೊರಹೊಮ್ಮಿದ್ದು, 72 ರನ್‌ಗಳ ಅಂತರದಲ್ಲಿ ಎಂಆರ್‌ಸಿ ತಂಡದ ವಿರುದ್ಧ ಜಯಗಳಿಸಿದೆ.

ಮೈಸೂರು ವಿವಿಯ ಕ್ರೀಡಾಂಗಣದಲ್ಲಿ ರಾಜ್ಯ ಮಟ್ಟದ ಕ್ರಿಕೆಟ್ ಟೂರ್ನ್‌ಮೆಂಟ್ ಆಯೋಜಿಸಲಾಗಿದ್ದು, ಎರಡು ದಿನಗಳು ನಡೆದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಅಂತಿಮ ಹಂತದಲ್ಲಿ ಉಡುಪಿಯ ಗುರುಗಣೇಶ್ ತಂಡವು ಮೊದಲಿಗೆ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡು 6 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 90ರನ್ ಕಲೆಹಾಕಿತ್ತು. ಬಳಿಕ ಚೇಸಿಂಗ್ ಮಾಡಿದ ಮೈಸೂರು ರಾಯಲ್ ಚಾಲೆಂಜರ್ಸ್(ಎಂಆರ್‌ಸಿ) ತಂಡವು 6 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ ಕೇವಲ 18 ರನ್‌ಗಳಿಸಿ ಎರಡನೇ ಸ್ಥಾನಕ್ಕೆ ರನ್ನರ್ ಅಪ್‌ಆಗಿ ಹೊರಹೊಮ್ಮಿತು.

ಗುರುಗಣೇಶ್ ತಂಡ ಪ್ರಥಮ ಸ್ಥಾನಗಳಿಸಿ ಟ್ರೋಫಿ ಹಾಗೂ 30 ಸಾವಿರ ರೂ. ನಗದು ಬಹುಮಾನ ತನ್ನಾಗಿಸಿಕೊಂಡಿತು. ಈ ವೇಳೆ ಸಾಗರ್ ಬೆಸ್ಟ್ ಬೌಲರ್ ಎಂದ ಹೆಗ್ಗಳಿಕೆಗೆ ಪಾತ್ರರಾದರು. ಎರಡನೇ ಸ್ಥಾನ ಪಡೆದ ಎಂಆರ್‌ಸಿ ತಂಡವು ಟ್ರೋಫಿ ಹಾಗೂ 20 ಸಾವಿರ ರೂ. ನಗದು ತನ್ನದಾಗಿಸಿಕೊಂಡರೆ, ತಂಡ ಆಟಗಾರ ಅಕ್ಷಯ್‌ಕುಮಾರ್ ಬೆಸ್ಟ್ ಬ್ಯಾಟ್ಸ್‌ಮನ್ ಆಗಿ ಹೊರಹೊಮ್ಮಿದರು. ಮೂರನೇ ಸ್ಥಾನವನ್ನು ಮೈಸೂರು ಸೂಪರ್ ಕಿಂಗ್ ಪಡೆದುಕೊಂಡು ಸಮಧಾನಕರ ಟ್ರೋಫಿ ತಮ್ಮದಾಗಿಸಿಕೊಂಡರು.

ಬಿಜೆಪಿ ಮುಖಂಡ ಗೆಜ್ಜಗಳ್ಳಿ ಮಹೇಶ್ ಮಾತನಾಡಿ, ಚಿನ್ನ ಮತ್ತು ಬೆಳ್ಳಿ ಆಭರಣಗಳ ತಯಾರಿಕರ ಸಂಘ ಏರ್ಪಡಿಸಿದ್ದ 2 ದಿನಗಳ ಕ್ರಿಕೆಟ್ ಟೂರ್ನಮೆಂಟ್‌ನಲ್ಲಿ ರಾಜ್ಯದ ಸುಮಾರು 20 ತಂಡ ಭಾಗಿಯಾಗಿ, ತಮ್ಮ ಕ್ರೀಡಾಭಿಮಾನ ಮೆರೆದಿವೆ. ಕ್ರೀಡೆಯಲ್ಲಿ ಗೆಲುವು–ಸೋಲು ಮುಖ್ಯವಲ್ಲ. ಬದಲಾಗಿ, ಸಮುದಾಯ ಎಲ್ಲಾ ಯುವಕರು ಒಟ್ಟಿಗೆ ಸೇರಿ ಕ್ರೀಡೆಯಲ್ಲಿ ಭಾಗವಹಿಸುವುದು ಮುಖ್ಯ. ಇದಕ್ಕೆ ಕ್ರಿಕೆಟ್ ಆಟ ಸಹಕಾರಿಯಾಗಿದೆ ಎಂದರು.

ಮೈಸೂರು ಜಿಲ್ಲಾ ಚಿನ್ನ–ಬೆಳ್ಳಿ ಕೆಲಸಗಾರರ ಅಭಿವೃದ್ಧಿ ಸಂಘದ ಅಧ್ಯಕ್ಷ ಗೋಲ್ಡನ್ ಟಿ.ಸುರೇಶ್, ಸಮುದಾಯದ ಯುವಕರು ದಿನದ 24 ಗಂಟೆ ಕೆಲಸದಲ್ಲಿ ತೊಡಗಿರುತ್ತಾರೆ. ಅವರಿಗೆ ಸ್ವಲ್ಪ ಕೆಲಸದ ಹೊರತಾಗಿಯೂ ಕ್ರೀಡೆಯಲ್ಲಿ ತೊಡಗಿಸಿಕೊಂಡು ಪ್ರಪಂಚದಲ್ಲಾಗುತ್ತಿರುವ ಬದಲಾವಣೆ ಬಗ್ಗೆ ಅರಿವು ಮೂಡಿಸುವುದು ಈ ಕ್ರೀಡೆಯ ಉದ್ದೇಶವಾಗಿದೆ. ಎಲ್ಲರೂ ಸೇರಿ ಒಂದು ಕ್ರೀಡೆಯನ್ನು ಯಶಸ್ವಿಗೊಳಿಸಿದಂತೆ ಯುವಕರಲ್ಲಿ ಉತ್ತಮ ಬಾಂಧವ್ಯವನ್ನು ಬೆಳೆಸುವುದು ಕ್ರೀಡೆಯ ಉದ್ದೇಶವಾಗಿದೆ ಎಂದರು.

ಈ ವೇಳೆ ಸಹಾಯಕ ಆರಕ್ಷಕ ಉಪನಿರೀಕ್ಷಕ ಎಂ.ಎಸ್ ಉಮಾಪತಿ, ಬೆಂಗಳೂರು ಚಿನ್ನ ಮತ್ತು ಬೆಳ್ಳಿ ಆಭರಣಗಳ ತಯಾರಕರ ನಿಗಮ ಅಧ್ಯಕ್ಷ ವಿಶ್ವನಾಥ್ ಆಚಾರ್ಯ, ಡಾ.ಬಿ.ಎಂ ಉಮೇಶ್ ಕುಮಾರ್, ಗೌರವಾಧ್ಯಕ್ಷ ರವಿಪ್ರಕಾಶ್, ಕಾರ್ಯಾಧ್ಯಕ್ಷ ರಾಘವೇಂದ್ರ ಶೇಠ್, ಕಾರ್ಯದರ್ಶಿ ಶಶಿಧರಾಚಾರ್ಯ, ಕ್ರೀಡಾ ಕಾರ್ಯದರ್ಶಿ ನಾಗರಾಜ ಆಚಾರ್ಯ ಉಪಸ್ಥಿತರಿದ್ದರು.

ದಲೈಲಾಮಾ 90ನೇ ಜನ್ಮದಿನ; ಟಿಬೆಟ್ ಉತ್ಸವ



ಕೇಕ್ ಕಟ್ ಮಾಡುವ ಮೂಲಕ 'ಟಿಬೆಟ್ ಉತ್ಸವ'ಕ್ಕೆ ಮೈಸೂರಿನ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಶನಿವಾರ ಚಾಲನೆ ನೀಡಿದರು. ಈ ವೇಳೆ ಬೌದ್ಧ ಧರ್ಮಗುರು ಉಪಸ್ಥಿತರಿದ್ದರು.

ಮೈಸೂರು, ಜು.20(ಎಂಕೆ)– ಮೈಸೂರಿನ ಕಲಾಮಂದಿರದಲ್ಲಿ 14ನೇ ದಲೈಲಾಮಾ ಅವರ 90ನೇ ಜನ್ಮದಿನದ ವಾರ್ಷಿಕೋತ್ಸವದ ಅಂಗವಾಗಿ ಏರ್ಪಡಿಸಿರುವ 'ಟಿಬೆಟ್ ಉತ್ಸವ'ಕ್ಕೆ ಚಾಲನೆ ನೀಡಲಾಯಿತು.

ದೀಪ ಬೆಳಗಿಸಿ, ಕೇಕ್ ಕಟ್ ಮಾಡುವ ಮೂಲಕ ಮೈಸೂರಿನ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಟಿಬೆಟ್ ಉತ್ಸವಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ದಲೈಲಾಮಾ ಅವರು ಜನಿಸಿ 90 ವರ್ಷಗಳಾಗಿದೆ. ಅವರ ಹುಟ್ಟುಹಬ್ಬವನ್ನು ದೇಶದ ಮೂಲೆ ಮೂಲೆಯಲ್ಲಿ ಆಚರಿಸಲಾಗುತ್ತಿದೆ. ಯುಗ ಯುಗಗಳಲ್ಲಿ ಒಬ್ಬೊಬ್ಬರು ಪವಿತ್ರಾತ್ಮಗಳು ಹುಟ್ಟಿ ಬರುತ್ತಾರೆ. ಅವರು ಬಂದು ಎಲ್ಲಿ ಅಧರ್ಮ ಇರುತ್ತೋ ಅಲ್ಲಿ ಸಧರ್ಮವನ್ನು ಸ್ಥಾಪನೆ ಮಾಡುವ ಪವಿತ್ರಾತ್ಮಗಳು ಪ್ರತೀ ಯುಗದಲ್ಲಿ ಹುಟ್ಟಿ ಬರುತ್ತಾರೆ ಎಂದರು.

ಭಗವಾನ್ ಬುದ್ಧರು, ಈ ಜಗತ್ತಿಗೆ ಬಂದು ನಮಗೆ ಶಾಂತಿಯನ್ನು, ಮಾನವೀಯ ಮೌಲ್ಯಗಳನ್ನು, ಸಹಬಾಳ್ವೆಯನ್ನು, ಪ್ರೀತಿಯನ್ನು ಈ ನಾಡಿಗೆ, ಜಗತ್ತಿಗೆ ಕೊಟ್ಟು ಹೋದಂತಹ ಪವಿತ್ರಾತ್ಮವಾಗಿದ್ದಾರೆ. ಅದಕ್ಕಾಗಿಯೇ ಶ್ರೀ ಕೃಷ್ಣ ಪರಮಾತ್ಮ 'ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ... ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ'... ಯಾವಾಗ ಯಾವಾಗ ಧರ್ಮಕ್ಕೆ ಚ್ಯುತಿ ಬರುತ್ತದೋ ಆಗ ನಾನು ಹುಟ್ಟಿ ಬರ್ತನೆ ಅಂತ ಭಗವಂತ ಹೇಳಿದ್ದಾರೆ. ಹಾಗೆಯೇ ದಶಾವತಾರಗಳಲ್ಲಿ ಭಗವಂತ ಒಂದೊಂದು ಅವತಾರದಲ್ಲಿ ಬಂದು ಶಾಂತಿ, ನೆಮ್ಮದಿ ಕೊಟ್ಟಿದ್ದಾರೆ. ಹಾಗೆಯೇ ಬುದ್ಧ ದೇವರು ಭಗವಂತ 10ನೇ ಅವತಾರ ಎಂದು ತಿಳಿಸಿದರು.

ಭಗವಾನ್ ಬುದ್ಧರ ಅಂಶವನ್ನು ಹೊತ್ತಿ ಬಂದಿರುವ 14ನೇ ದಲೈಲಾಮಾ ಅವರು ಇಷ್ಟೊಂದು ಭಕ್ತ ಹೃದಯವನ್ನು ಮುಟ್ಟಿದ್ದಾರೆ. ಅವರ ಮೇಲೆ ನೀವು ಇಟ್ಟಿರುವ ಪ್ರೀತಿ, ತಾಯ್ನಾಡಿನ ಮೇಲಿರುವ ಹಪಾಹಪಿಸುವ ಶ್ರದ್ಧೆ ಅಪಾರವಾದುದು. ಹಾಗಾಗಿ ನಿಮ್ಮೆಲ್ಲರ ಬಯಕೆಯನ್ನು ಪರಮಾತ್ಮ ಆದಷ್ಟು ಬೇಗ ಈಡೇರಿಸಲಿ. ಹಾಗೆಯೇ 14ನೇ ದಲೈ ಲಾಮಾ ಅವರು, ತಮ್ಮ ಭಕ್ತ ವೃಂದಕ್ಕೆ ಶಾಂತಿ, ನೆಮ್ಮದಿ ನೀಡಲಿ ಎಂದು ಹಾರೈಸಿದರು.

ಟಿಬೆಟಿಯನ್ ಧರ್ಮಗುರು ಗೆಶೆ ಲಕ್ಡೋರ್ ಲಾ ಮಾತನಾಡಿ, ಶಾಂತಿ ಮತ್ತು ಸೌಹಾರ್ದತೆಯನ್ನು ಯಾವಾಗಲೂ ಉತ್ತೇಜಿಸುವ ಟಿಬೆಟಿಯನ್ ಸಮುದಾಯವು, ಮಾನವೀಯ ಮೌಲ್ಯಗಳನ್ನು ಉತ್ತೇಜಿಸುವುದು, ಅಂತರ–ಧಾರ್ಮಿಕ ಸಾಮರಸ್ಯವನ್ನು ಬೆಳೆಸುವುದು ಮತ್ತು ಟಿಬೆಟಿಯನ್ ಸಂಸ್ಕೃತಿಯ ಸಂರಕ್ಷಣೆ ಮತ್ತು ಪ್ರಾಚೀನ ಭಾರತೀಯ ಜ್ಞಾನದ ಪುನರುಜ್ಜೀವನವನ್ನು ಒಳಗೊಂಡ ಲಾಮಾ ಯೂನಿವರ್ಸಲ್ ಮೌಲ್ಯಗಳು ಎಲ್ಲೆಡೆ ಪಸರಿಸುವ ಕೆಲಸ ಮಾಡಲಿದೆ ಎಂದರು. ಬೌದ್ಧ ಭಿಕ್ಕುಗಳಾದ ಝೋಂಗ್ಚೆನ್ ಅಬಾಟ್, ಗ್ಯುಮೆ ಲಾಮಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕೆಪಿಎ–ಪೋಸ್ಟಲ್ ತರಬೇತಿ ಸಂಸ್ಥೆ ನಡುವೆ ತರಬೇತಿ, ಸಂಪನ್ಮೂಲ ವ್ಯಕ್ತಿಗಳ ವಿನಿಮಯ, ನವೀನ ಮಾದರಿಯ ಕೋರ್ಸ್ ಅಭಿವೃದ್ಧಿಗೆ ಒಡಂಬಡಿಕೆ



ಕರ್ನಾಟಕ ಪೊಲೀಸ್ ಅಕಾಡೆಮಿ(ಕೆಪಿಎ) ನಿರ್ದೇಶಕ ಎಸ್.ಎಲ್.ಚನ್ನಬಸವಣ್ಣ ಮತ್ತು ಪೋಸ್ಟಲ್ ತರಬೇತಿ ಸಂಸ್ಥೆ ನಿರ್ದೇಶಕ ಡಾ.ಆಶಿಶ್ ಸಿಂಗ್ ಠಾಕೂರ್ ವಿವಿಧ ವಿಷಯಗಳ ವಿನಿಮಯ ಒಡಂಬಡಿಕೆಗೆ ಸಹಿ ಹಾಕಿದರು.

ಮೈಸೂರು, ಜು.20(ಎಂಕೆ)– ಕರ್ನಾಟಕ ಪೊಲೀಸ್ ಅಕಾಡೆಮಿ(ಕೆಪಿಎ) ಮತ್ತು ಪೋಸ್ಟಲ್ ತರಬೇತಿ ಸಂಸ್ಥೆ ನಡುವೆ ತರಬೇತಿ, ಸಂಪನ್ಮೂಲ ವ್ಯಕ್ತಿಗಳ ವಿನಿಮಯ ಹಾಗೂ ನವೀನ ಮಾದರಿಯ ಕೋರ್ಸ್ ಅಭಿವೃದ್ಧಿಪಡಿಸುವ ವಿಷಯಗಳಿಗೆ ಸಂಬಂಧಿಸಿದಂತೆ ಒಪ್ಪಂದದ ಜ್ಞಾಪಕ ಪತ್ರ ಮತ್ತು ಒಡಂಬಡಿಕೆಗೆ ಎರಡೂ ಸಂಸ್ಥೆಯ ನಿರ್ದೇಶಕರು ಸಹಿ ಹಾಕಿದರು.

ಮಾಡಿದ ಬಳಿಕ ಮಾತನಾಡಿದ ಮೈಸೂರಿನ ಅಂಚೆ ತರಬೇತಿ ಸಂಸ್ಥೆ ನಿರ್ದೇಶಕ ಡಾ.ಆಶಿಶ್ ಸಿಂಗ್ ಠಾಕೂರ್, ಮೈಸೂರಿನ ಅಂಚೆ ತರಬೇತಿ ಸಂಸ್ಥೆಗೆ ಇದೊಂದು ಹೆಮ್ಮೆಯ ಕ್ಷಣವಾಗಿದ್ದು, ಎರಡೂ ಸಂಸ್ಥೆಗಳ ಅಧಿಕಾರಿಗಳಿಗೆ ಜ್ಞಾನ ಮತ್ತು ಅನುಭವದ ವಿನಿಮಯವಾಗಿ ಅವರ ಕಾರ್ಯಕ್ಷೇತ್ರದಲ್ಲಿ ಮೌಲ್ಯವರ್ಧನೆಯಾಗಲಿದೆ ಎಂದರು.

ಪೊಲೀಸ್ ಅಕಾಡೆಮಿ ನಿರ್ದೇಶಕ ಎಸ್.ಎಲ್.ಚನ್ನಬಸವಣ್ಣ ಮಾತನಾಡಿ, ಎರಡು ಸಂಸ್ಥೆಗಳಲ್ಲಿ ತರಬೇತಿ ಪಡೆಯುವ ಮುಂದಿನ ಪೀಳಿಗೆಯ ಅಧಿಕಾರಿಗಳಿಗೆ ಹಾಗೂ ಅವರ ಮೂಲಕ ಸಮಾಜಕ್ಕೆ ಉತ್ತಮ ಸೇವೆ ಕೊಡುವುದಕ್ಕೆ ಈ ಒಡಂಬಡಿಕೆ ನಾಂದಿಯಾಗಲಿದೆ. ಎರಡೂ ಸಂಸ್ಥೆಗಳು ತಮ್ಮಲ್ಲಿರುವ ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳುವುದರ ಮೂಲಕ ಪರಸ್ಪರ ಅಭಿವೃದ್ಧಿಗೆ ಶ್ರಮಿಸಲಿವೆ ಎಂದರು.

ಅಕಾಡೆಮಿಯ ಸಹಾಯಕ ನಿರ್ದೇಶಕರಾದ ಹೆಚ್.ಎಸ್.ರೇಣುಕಾರಾಧ್ಯ, ಎನ್.ಸುದರ್ಶನ, ಎಸ್.ವೆಂಕಟೇಶ್, ಎಂ.ಕ್ರಾಂತಿರಾಜ್ ಒಡೆಯರ್, ಅಂಚೆ ತರಬೇತಿ ಸಂಸ್ಥೆ ಸಹಾಯಕ ನಿರ್ದೇಶಕರಾದ ಬಾಲರಾಜ್, ಶ್ರೀಧರ್, ಶ್ರದ್ಧಾ ಗೋಕರ್ಣ ಮತ್ತಿತರರಿದ್ದರು.


ಎರಡು ಸಂಸ್ಥೆಗಳ ಕಾರ್ಯವ್ಯಾಪ್ತಿ ಹೆಚ್ಚಳಕ್ಕೆ ಒಡಂಬಡಿಕೆ ಸಹಕಾರಿ...

ಎರಡೂ ಸಂಸ್ಥೆಗಳಲ್ಲಿ ತರಬೇತಿ ಪಡೆಯುವ ಅಧಿಕಾರಿಗಳು, ಎರಡೂ ಇಲಾಖೆಗಳಿಗೆ ಸಂಬಂಧಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಜ್ಞಾನ ಪಡೆಯುವುದಷ್ಟೇ ಅಲ್ಲದೇ, ಸದರಿ ವಿಷಯಗಳಲ್ಲಾಗುವ ಸಂಶೋಧನೆ ಮತ್ತು ಅಭಿವೃದ್ಧಿ ಕುರಿತಂತೆ ಹೆಚ್ಚಿನ ಮಾಹಿತಿ ಹಾಗೂ ಜ್ಞಾನ ಪಡೆದು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಅಳವಡಿಸಿಕೊಳ್ಳಬಹುದಾಗಿದೆ. ಹಾಗೆಯೇ ಅಂಚೆ ಇಲಾಖೆಯ ಅಧಿಕಾರಿಗಳು, ಪೊಲೀಸ್ ಇಲಾಖೆಗೆ ಸಂಬಂಧಿಸಿದ ಸೈಬರ್ ಭದ್ರತೆ, ಬೆರಳಚ್ಚು ಹಾಗೂ ಮಾದಕ ವಸ್ತುಗಳ ಸಾಗಾಣಿಕೆ ವಿಷಯಗಳ ಬಗ್ಗೆ ತಿಳಿದುಕೊಂಡರೆ, ಪೊಲೀಸ್ ಇಲಾಖೆಯ ಅಧಿಕಾರಿಗಳು, ಅಂಚೆ ಇಲಾಖೆಗೆ ಸಂಬಂಧಿಸಿದ ಸಣ್ಣ ಹೂಡಿಕೆ ಅವಕಾಶಗಳು, ಹಣಕಾಸು ನಿರ್ವಹಣೆ ಹಾಗೂ ಮಾಹಿತಿ ಮತ್ತು ತಂತ್ರಜ್ಞಾನ ವಿಷಯಗಳ ಮೇಲೆ ಪರಿಣತಿ ಹೊಂದಲು ಈ ಒಡಂಬಡಿಕೆ ಸಹಕಾರಿಯಾಗಿದೆ.

ಷೇರು ವ್ಯವಹಾರ ಹೆಸರಲ್ಲಿ ಗೃಹಿಣಿಗೆ 28.15 ಲಕ್ಷ ವಂಚನೆ

ಮೈಸೂರು, ಜು.20– ಗೃಹಿಣಿಯೊಬ್ಬರು ನಕಲಿ ಕಂಪನಿಯ ಷೇರು ಖರೀದಿಸಿ 28.15 ಲಕ್ಷ ರೂ. ಕಳೆದುಕೊಂಡಿರುವ ಬಗ್ಗೆ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಿಜಯನಗರದ ನಿವಾಸಿ 60 ವರ್ಷದ ಗೃಹಿಣಿ, ವಾಟ್ಸಾಪ್‌ನಲ್ಲಿ ಬಂದ ಲಿಂಕ್ ಮೂಲಕ 806 ಎನ್‌ಜೆ ಇನ್ವೆಸ್ಟ್‌ಮೆಂಟ್ ವಾಟ್ಸಾಪ್ ಗ್ರೂಪ್‌ನಲ್ಲಿ ಸೇರಿಕೊಂಡಿದ್ದಾರೆ. ಅದರಲ್ಲಿ ಹೂಡಿಕೆ ಹಾಗೂ ಷೇರು ಮಾರುಕಟ್ಟೆ ಬಗ್ಗೆ ಹಂಚಿಕೆಯಾಗುತ್ತಿದ್ದ ಸಂದೇಶಗಳಿಂದ ಪ್ರಭಾವಿತರಾಗಿ ನಕಲಿ ಕಂಪನಿಗೆ 28.15 ಲಕ್ಷ ರೂ. ಹೂಡಿಕೆ ಮಾಡಿ, ಷೇರು ಖರೀದಿಸಿದ್ದಾರೆ. ನಂತರದಲ್ಲಿ ಮೋಸ ಹೋಗಿರುವುದು ತಿಳಿದು, ಪೊಲೀಸರಿಗೆ ದೂರು ನೀಡಿದ್ದಾರೆ.

ಹುಟ್ಟುಹಬ್ಬದ ಹಾರೈಕೆ



ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಪುತ್ರ ಭರತ್ ಮಂಜೇಗೌಡರ ಹುಟ್ಟುಹಬ್ಬದ ಅಂಗವಾಗಿ ಅವರನ್ನು ಜೆಡಿಎಸ್ ಯುವ ಮುಖಂಡ ಪೈಲ್ವಾನ್ ದಿನೇಶ್ ಗೌಡ, ಸುರೇಶ್ ಧರ್ಮ, ಅಪೇಕ್ಸ್ ಶ್ರೀನಿವಾಸ್, ಜೇಸುದಾಸ್, ಪ್ರಕಾಶ್, ಹರೀಶ್, ಶಿವಣ್ಣ, ರಾಮಚಂದ್ರ, ಶಿವಶಂಕರ್, ಆನಂದ, ಬಸವರಾಜು, ಮಹೇಶ್, ಜಗದೀಶ್, ಪಾರ್ಥಸಾರಥಿ, ರಾಜು, ತರಕಾರಿ ಶಿವಣ್ಣ ಮುಂತಾದವರು ಅಭಿನಂದಿಸಿದರು.

ದೇಶ - ವಿದೇಶ

ಆಪರೇಷನ್ ಸಿಂಧೂರ ವೇಳೆ ಯೋಧರಿಗೆ ಆಹಾರ ನೀಡಿದ್ದ ಬಾಲಕನ ಶಿಕ್ಷಣದ ಹೊಣೆ ಹೊತ್ತ ಸೇನೆ

ಚಂಡೀಗಢ: ಭಾರತ ಕೈಗೊಂಡ ಆಪರೇಷನ್ ಸಿಂಧೂರ ಕಾರ್ಯಾಚರಣೆ ವೇಳೆ ಯೋಧರಿಗೆ ಆಹಾರ ಪೂರೈಸಿದ 10 ವರ್ಷದ ಬಾಲಕನ ವಿದ್ಯಾಭ್ಯಾಸದ ವೆಚ್ಚವನ್ನು ಭರಿಸುವುದಾಗಿ ಭಾರತೀಯ ಸೇನೆ ಭಾನುವಾರ ಹೇಳಿದೆ.

ಶವನ್ ಸಿಂಗ್ ಎನ್ನುವ ಬಾಲಕ ಪಂಜಾಬ್‌ನ ಫೆರೋಜ್‌ಪುರ್ ಜಿಲ್ಲೆಯ ತಾರಾವಾಲಿ ಗ್ರಾಮದಲ್ಲಿ ನಿಯೋಜನೆಗೊಂಡ ಸೈನಿಕರು ಪಾಕಿಸ್ತಾನದ ಸೇನೆ ಜತೆಗೆ ಗುಂಡಿನ ಚಕಮಕಿ ನಡೆಸುತ್ತಿದ್ದ ವೇಳೆ ನೀರು, ಚಹಾ, ಹಾಲು, ಲಸ್ಸಿ ಸೇರಿ ವಿವಿಧ ರೀತಿಯ ಆಹಾರವನ್ನು ಪೂರೈಸಿದ್ದ. ಬಾಲಕನ ಧೈರ್ಯ ಮತ್ತು ಉತ್ಸಾಹ ಕಂಡು ಭಾರತೀಯ ಸೇನೆಯ ಗೋಲ್ಡನ್ ಆ್ಯರೋ ವಿಭಾಗವು ವಿದ್ಯಾಭ್ಯಾಸದ ವೆಚ್ಚವನ್ನು ಭರಿಸುವುದಾಗಿ ಹೇಳಿದೆ.

ಶವನ್ ಮಾಡಿದ ಕೆಲಸ ತೆರೆಮರೆಯಲ್ಲಿರುವ ಹೀರೋಗಳನ್ನು ನೆನಪಿಸುತ್ತದೆ. ಬಾಲಕ ಕೂಡ ದೊಡ್ಡವನಾದ ಮೇಲೆ ಸೇನೆ ಸೇರುವ ಅಭಿಲಾಷೆ ಹೊಂದಿದ್ದಾನೆ ಎಂದು ಸೇನೆ ಹೇಳಿದೆ. ತಾರಾವಾಲಿ ಗ್ರಾಮ ಅಂತರರಾಷ್ಟ್ರೀಯ ಗಡಿಯಿಂದ 2 ಕಿ.ಮೀ. ದೂರದಲ್ಲಿದೆ.

ಬಾಹ್ಯಾಕಾಶದಲ್ಲಿ ತೇಲಾಡಿದ ವಿಡಿಯೊ ಹಂಚಿಕೊಂಡ ಶುಭಾಂಶು ಶುಕ್ಲಾ



ನವದೆಹಲಿ: ಇತ್ತೀಚೆಗಷ್ಟೇ ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರಕ್ಕೆ ತೆರಳಿ 20 ದಿನಗಳ ಕಾಲವಿದ್ದು ಬಾಹ್ಯಾಕಾಶ ಪ್ರಯಾಣ ಮುಗಿಸಿ ಬಂದಿರುವ ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ, ಗುರುತ್ವಾಕರ್ಷಣೆ ಬಲ ಇಲ್ಲದ ಅಂತರಿಕ್ಷದಲ್ಲಿ ತೇಲುತ್ತಿರುವ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ನಾವು ಐಎಸ್‌ಎಸ್‌ಗೆ ತೆರಳಿದ್ದಾಗ ಅಲ್ಲಿ ಸಮಯ ತಿಳಿಯುವ, ನಮ್ಮ ಗುರಿಗಳನ್ನು ತಲುಪುವ ಮತ್ತು ಸಂಶೋಧನೆಗಳನ್ನು ಮಾಡುವುದರಲ್ಲಿ ಸಂಪೂರ್ಣವಾಗಿ ತೊಡಗಿಗೊಂಡಿದ್ದೆವು. ಆರಂಭದಲ್ಲಿ ಗುರುತ್ವಾಕರ್ಷಣೆ ಇಲ್ಲದೆ ಚಲಿಸುವುದು ಮತ್ತು ಕೇಂದ್ರದ ಬಗ್ಗೆ ತಿಳಿದುಕೊಳ್ಳುವುದು ಸವಾಲಿನ ಕೆಲಸವಾಗಿತ್ತು. ನನ್ನ ಚಲನವಲನಗಳ ಬಗ್ಗೆ ನಿಯಂತ್ರಣ ಪಡೆದುಕೊಂಡ ಬಳಿಕದ ವಿಡಿಯೊ ಇದಾಗಿದೆ ಎಂದು ಬರೆದುಕೊಂಡಿದ್ದಾರೆ.

ಬಾಹ್ಯಾಕಾಶದಲ್ಲಿ ಯಾವುದೇ ಸಣ್ಣ ಅಡಚಣೆಯೂ ನಿಮ್ಮ ದೇಹವನ್ನು ಚಲಿಸುವಂತೆ ಮಾಡಬಹುದು. ಹೀಗಾಗಿ ಸಂಪೂರ್ಣವಾಗಿ ನಿಶ್ಚಲವಾಗಿರಲು ಕೌಶಲ್ಯ ಬೇಕಾಗುತ್ತದೆಎಂದು ಬರೆದುಕೊಂಡಿದ್ದಾರೆ.

ಗಾಜಾದಲ್ಲಿ ಮಾನವೀಯ ನೆರವಿಗಾಗಿ ಕಾಯುತ್ತಿದ್ದ 73 ಪ್ಯಾಲೆಸ್ತೀನಿಯರ ಹತ್ಯೆ



ಡೀರ್ ಅಲ್–ಬಾಲಾಹ್: ಗಾಜಾದಾದ್ಯಂತ ಮಾನವೀಯ ನೆರವಿಗಾಗಿ ಕಾಯುತ್ತಿದ್ದ 73 ಜನರನ್ನು ಹತ್ಯೆ ಮಾಡಲಾಗಿದೆ ಎಂದು ಪ್ಯಾಲೆಸ್ತೀನ್ ಆರೋಗ್ಯ ಸಚಿವಾಲಯ ಭಾನುವಾರ ಹೇಳಿದೆ.

ಉತ್ತರ ಗಾಜಾದಲ್ಲಿ ಅತಿ ಹೆಚ್ಚು 67 ಪ್ಯಾಲೆಸ್ತೀನಿಯರ ಹತ್ಯೆಯಾಗಿದೆ. ಜಿಕಿಮ್ ಗಡಿ ಮೂಲಕ ಉತ್ತರ ಗಾಜಾಕ್ಕೆ ಟ್ರಕ್‌ಗಳಲ್ಲಿ ಬರುತ್ತಿದ್ದ ಆಹಾರ ಪದಾರ್ಥ ಪಡೆಯಲು ಕಾಯುತ್ತಿದ್ದ ಜನರನ್ನು ಹತ್ಯೆ ಮಾಡಲಾಗಿದೆ ಎಂದು ಆರೋಗ್ಯ ಸಚಿವಾಲಯ ಮತ್ತು ಸ್ಥಳೀಯ ಆಸ್ಪತ್ರೆಗಳು ಮಾಹಿತಿ ನೀಡಿವೆ.

ಇಸ್ರೇಲ್ ಸೇನೆಯಿಂದ ದಾಳಿಯಿಂದ ಪ್ಯಾಲೆಸ್ತೀನಿಯರ ಹತ್ಯೆಯಾಗಿದೆಯೇ ಅಥವಾ ಶಸ್ತ್ರ ಸಜ್ಜಿತ ಗ್ಯಾಂಗ್ ಈ ಹತ್ಯೆ ಮಾಡಿರುವುದೇ ಎಂಬುದು ಸದ್ಯಕ್ಕೆ ತಿಳಿದುಬಂದಿಲ್ಲ.

ಘಟನೆಯಲ್ಲಿ 150ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಅವರಲ್ಲಿ ಕೆಲವರ ಪರಿಸ್ಥಿತಿ ಚಿಂತಾಜನಕವಾಗಿದೆ ಎಂದು ಆಸ್ಪತ್ರೆಗಳು ಹೇಳಿವೆ. ಆದರೆ, ಕೆಲವು ಪ್ರತ್ಯಕ್ಷದರ್ಶಿಗಳು, ಇಸ್ರೇಲ್ ಮಿಲಿಟರಿ ದಾಳಿ ನಡೆಸಿರುವುದಾಗಿ ಹೇಳಿದ್ದಾರೆ. ಈ ಸಂಬಂಧ ಇಸ್ರೇಲ್ ಸೇನೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

280 ಜನರಿದ್ದ ಬೋಟ್‌ನಲ್ಲಿ ಭೀಕರ ಅಗ್ನಿ ಅವಘಡ

ಕೌಲಾಲಂಪುರ: ಇಂಡೋನೇಷ್ಯಾದ ಭೀಕರ ಹಡಗು ದುರಂತ ಸಂಭವಿಸಿದ್ದು, 280 ಮಂದಿ ಪ್ರಯಾಣಿಸುತ್ತಿದ್ದ ಹಡಗಿನಲ್ಲಿ ಅಗ್ನಿ ಅವಘಡ ಸಂಭವಿಸಿ ಕನಿಷ್ಠ 3 ಮಂದಿ ಸಾವನ್ನಪ್ಪಿದ್ದಾರೆ. ಇಂಡೋನೇಷ್ಯಾದ ಪ್ರಯಾಣಿಕರ ದೋಣಿ KM ಬಾರ್ಸಿಲೋನಾ VA ಹಡಗಿನಲ್ಲಿ ಭಾನುವಾರ ಅಗ್ನಿ ದುರಂತ ಸಂಭವಿಸಿದೆ. ಇಂದು ಮಧ್ಯಾಹ್ನ ಉತ್ತರ ಸುಲವೇಸಿ ಪ್ರಾಂತ್ಯದ ತಾಲಿಸ್ ದ್ವೀಪದ ಬಳಿ ಸಂಭವಿಸಿದ ಭಾರಿ ಬೆಂಕಿ ಅವಘಡದಲ್ಲಿ ಕನಿಷ್ಠ ಮೂವರು ಸಾವನ್ನಪ್ಪಿದ್ದಾರೆ.

ಬೆಂಕಿಯ ಕೆನ್ನಾಲಗಿ ವ್ಯಾಪಕವಾಗುತ್ತಿದ್ದಂತೆಯೇ ಆತಂಕಗೊಂಡ ಪ್ರಯಾಣಿಕರು ಹಡಗಿನಿಂದ ನೀರಿಗೆ ಹಾರುತ್ತಿರುವ ವಿಡಿಯೋ ವ್ಯಾಪಕ ವೈರಲ್ ಆಗುತ್ತಿದೆ. ಪ್ರಯಾಣಿಕರು ಆತಂಕಗೊಂಡು ಲೈಫ್ ಜಾಕೆಟ್‌ಗಳನ್ನು ಧರಿಸಿ, ಸಹಾಯಕ್ಕಾಗಿ ಕೂಗುತ್ತಾ, ದಟ್ಟವಾದ ಕಪ್ಪು ಹೊಗೆ ಮತ್ತು ಜ್ವಾಲೆಗಳ ನಡುವೆಯೇ ನೀರಿಗೆ ಹಾರುತ್ತಿರುವುದು ವಿಡಿಯೋದಲ್ಲಿ ದಾಖಲಾಗಿದೆ.

ಮೂಲಗಳ ಪ್ರಕಾರ ಈ ಹಡಗಿನಲ್ಲಿ ಸುಮಾರು 280 ರಿಂದ 300 ಮಂದಿ ಪ್ರಯಾಣಿಕರು ಪ್ರಯಾಣಿಸುತ್ತಿದ್ದರು. ಬೆಂಕಿ ಕಾಣಿಸಿಕೊಂಡಾಗ ಹಡಗು ತಲೌಡ್ ದ್ವೀಪದಿಂದ ಮನಾಡೊ ನಗರಕ್ಕೆ ಪ್ರಯಾಣಿಸುತ್ತಿದ್ದರು ಎಂದು ತಿಳಿದುಬಂದಿದೆ.

ಪ್ರವಾಸಿ ದೋಣಿ ಮಗುಚಿ ಬಿದ್ದು 34 ಮಂದಿ ಸಾವು

ವಿಯೆಟ್ನಾಂ: ಭಾರತೀಯ ಕಾಲಮಾನ ಪ್ರಕಾರ ಶನಿವಾರ ಮಧ್ಯಾಹ್ನ ಉತ್ತರ ವಿಯೆಟ್ನಾಂನಲ್ಲಿ ಹಠಾತ್ ಗುಡುಗು ಸಹಿತ ಮಳೆಯಿಂದಾಗಿ ಪ್ರವಾಸಿ ದೋಣಿಯೊಂದು ಮಗುಚಿ ಎಂಟು ಮಕ್ಕಳು ಸೇರಿದಂತೆ ಕನಿಷ್ಠ 34 ಜನರು ಮೃತಪಟ್ಟಿದ್ದಾರೆ. 8 ಮಂದಿ ನಾಪತ್ತೆಯಾಗಿದ್ದಾರೆ ಎಂದು ವಿಯೆಟ್ನಾಂ ನ್ಯೂಸ್ ಏಜೆನ್ಸಿ ವರದಿ ಮಾಡಿದೆ.

ವಂಡರ್ ಸೀ ದೋಣಿಯು 53 ಪ್ರಯಾಣಿಕರು ಮತ್ತು ಐದು ಸಿಬ್ಬಂದಿಯನ್ನು ಯುನೆಸ್ಕೋ ವಿಶ್ವ ಪರಂಪರೆಯ ತಾಣ ಮತ್ತು ವಿಯೆಟ್ನಾಂನ ಅತ್ಯಂತ ಜನಪ್ರಿಯ ಪ್ರವಾಸಿ ತಾಣಗಳಲ್ಲಿ ಒಂದಾದ ಹಾ ಲಾಂಗ್ ಕೊಲ್ಲಿಯ ದೃಶ್ಯವೀಕ್ಷಣೆಯ ಪ್ರವಾಸಕ್ಕೆ ಕರೆದೊಯ್ಯುತ್ತಿತ್ತು. ಈ ವೇಳೆ ಹಠಾತ್ ಗುಡುಗು ಸಹಿತ ಭಾರೀ ಗಾಳಿ ಮಳೆಯಿಂದ ದೋಣಿ ಮಗುಚಿ ಬಿತ್ತು. ರಕ್ಷಣಾ ತಂಡಗಳು 11 ಜನರನ್ನು ರಕ್ಷಿಸುವಲ್ಲಿ ಯಶಸ್ವಿಯಾಗಿದ್ದು, ಘಟನೆ ನಡೆದ ಸ್ಥಳದ ಬಳಿ 27 ಶವಗಳನ್ನು ಹೊರತೆಗೆದಿವೆ. ಉಳಿದ 23 ಪ್ರಯಾಣಿಕರು ಇನ್ನೂ ಪತ್ತೆಯಾಗಿಲ್ಲ.

ವಿಯೆಟ್ನಾಂ ಸ್ಥಳೀಯ ಸಮಯ ಮಧ್ಯಾಹ್ನ 2 ಗಂಟೆ ಸುಮಾರಿಗೆ ದೋಣಿ ಪಲ್ಟಿ ಹೊಡೆದಿದ್ದು, ಬಲವಾದ ಗಾಳಿ ಮತ್ತು ಬಿರುಗಾಳಿಯಿಂದ ಈ ದುರ್ಘಟನೆ ಸಂಭವಿಸಿದೆ. ಬದುಕುಳಿದವರಲ್ಲಿ 14 ವರ್ಷದ ಬಾಲಕನೂ ಸೇರಿದ್ದಾನೆ,

ವಿವಿಧ ಸೇವಾ ಕಾರ್ಯಗಳೊಂದಿಗೆ ಎಂಎಲ್‌ಸಿ ಕೆ.ವಿವೇಕಾನಂದ ಹುಟ್ಟುಹಬ್ಬ ಆಚರಣೆ

ಮೈಸೂರು, ಜು.20– ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದರ ಹುಟ್ಟುಹಬ್ಬದ ಪ್ರಯುಕ್ತ ಅವರ ಸ್ವಂತ ಊರಾದ ಮದ್ದೂರು ತಾಲೂಕಿನ ಕೊಪ್ಪ ಹೋಬಳಿಯ ಅವರೇಹಳ್ಳಿ ಗ್ರಾಮಕ್ಕೆ ತೆರಳಿ ಪೂಜಾ ಕೈಂಕರ್ಯ ಕೈಗೊಂಡು ಅವರ ಮಾತೃಶ್ರೀ ಚಿಕ್ಕತಾಯಮ್ಮನವರ ಆಶೀರ್ವಾದ ಪಡೆದುಕೊಂಡರು.

ನಂತರ ಮೈಸೂರಿಗೆ ಆಗಮಿಸಿದ ಅವರು ಮೈಸೂರಿಗೆ ಸ್ವಚ್ಛ ನಗರಿಯ ಪಟ್ಟವನ್ನು ತಂದುಕೊಟ್ಟ ಪೌರಕಾರ್ಮಿಕರಿಗೆ ಫುಡ್‌ಕಿಟ್ ಹಾಗೂ ಬಟ್ಟೆ ವಿತರಿಸಿದರು. ಉಚಿತ ಕಣ್ಣಿನ ತಪಾಸಣೆ, ಉಚಿತ ರಕ್ತದಾನ ಶಿಬಿರ ಹೀಗೆ ಹಲವಾರು ಸಾಮಾಜಿಕ ಚಟುವಟಿಕೆ ಕಾರ್ಯವನ್ನು ಕೈಗೊಳ್ಳಲಾಯಿತು. ಈ ಸಂದರ್ಭದಲ್ಲಿ ಶಾಸಕರ ಹಿತೈಷಿಗಳು, ಜನಪ್ರತಿನಿಧಿಗಳು, ಶಿಕ್ಷಕ ಸಂಘಟನೆಯ ಪದಾಧಿಕಾರಿಗಳು, ಯುವ ಸಂಘಟನೆಯ ಪದಾಧಿಕಾರಿಗಳು, ಮಹಿಳಾ ಸಂಘದ ಪದಾಧಿಕಾರಿಗಳು ವಿವೇಕಾನಂದ ಅವರಿಗೆ ಪುಷ್ಪ ಗುಚ್ಛ ನೀಡಿ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಶಾಸಕರು ಮಾತನಾಡಿ, ನಾಡದೇವತೆ ಚಾಮುಂಡೇಶ್ವರಿಯ, ನನ್ನ ಪೋಷಕರ, ಸಮಸ್ತ ಶಿಕ್ಷಕ ಬಂಧುಗಳ, ರಾಜಕೀಯ ನಾಯಕರುಗಳ ಶುಭ ಹಾರೈಕೆಯ ಆಶೀರ್ವಾದದೊಂದಿಗೆ ನಾನು ಈ ಮಟ್ಟಕ್ಕೆ ಬಂದು ನಿಂತಿದ್ದೇನೆ. ಈ ಶಾಸಕ ಸ್ಥಾನವನ್ನು ಕಲ್ಪಿಸಿಕೊಟ್ಟ ಎಲ್ಲರನ್ನು ಒಂದಲ್ಲ ಒಂದು ರೀತಿ ನೆನೆಪಿಸಿಕೊಳ್ಳಬೇಕು. ಅದರಲ್ಲೂ ನನ್ನ ಮತದಾರರಾದ ಸಮಸ್ತ ಶಿಕ್ಷಕ ಬಂಧುಗಳ ಸಮಸ್ಯೆಗಳನ್ನು ನಿರಂತರವಾಗಿ ಬಗೆಹರಿಸಿಕೊಂಡು ಬರುತ್ತಿದ್ದು, ಇನ್ನೂ ಹೆಚ್ಚಿನ ಶಕ್ತಿಯನ್ನು ಆ ದೇವರು ಮತ್ತು ನನ್ನ ಆತ್ಮೀಯ ಬಂಧುಗಳು ನೀಡಲೆಂದು ಈ ಸಂದರ್ಭದಲ್ಲಿ ಕೋರುತ್ತೇನೆ ಎಂದರು.

ಈ ಸಂದರ್ಭದಲ್ಲಿ ಚಾಮರಾಜ ಕ್ಷೇತ್ರದ ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಮೇಯರ್ ಶಿವಕುಮಾರ್, ನಗರಪಾಲಿಕೆ ಮಾಜಿ ಸದಸ್ಯರಾದ ಪ್ರೇಮಾ ಶಂಕರೇಗೌಡ, ಸುಬ್ಬಯ್ಯ, ಶಿವಣ್ಣ, ನಗರ ಬಿಜೆಪಿ ನಗರ ಉಪಾಧ್ಯಕ್ಷೆ ಹೇಮಾ ನಂದೀಶ್, ಸರ್ಕಾರಿ ನೌಕರರ ಸಂಘದ ಮೈಸೂರು ಜಿಲ್ಲೆಯ ಮಾಜಿ ಅಧ್ಯಕ್ಷ ಗೋವಿಂದರಾಜು, ಶಿಕ್ಷಕರ ಸಂಘಟನೆ ಪದಾಧಿಕಾರಿಗಳಾದ ದೀಪು, ಸತೀಶ್, ಹನುಮಂತುರಾಜು ಇನ್ನಿತರರಿದ್ದರು.




ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅವರಿಗೆ ಮಾಜಿ ಕಾರ್ಪೊರೇಟರ್‌ಗಳು, ಹಾಗೂ ಇತರ ಗಣ್ಯರು ಹುಟ್ಟುಹಬ್ಬದ ಶುಭಾಶಯ ಕೋರಿದರು.





ಕಣ್ಣಿನ ಉಚಿತ ತಪಾಸಣೆ, ರಕ್ತದಾನ ಶಿಬಿರ ಹಾಗೂ ಪೌರಕಾರ್ಮಿಕರಿಗೆ ಫುಡ್‌ಕಿಟ್, ಬಟ್ಟೆ ವಿತರಿಸುವ ಮೂಲಕ ವಿವೇಕಾನಂದರ ಹುಟ್ಟುಹಬ್ಬ ಆಚರಿಸಲಾಯಿತು.

108ನೇ ಆಚಾರ್ಯ ಶ್ರೀ ಪುಣ್ಯಸಾಗರ ಮುನಿ ಮಹಾರಾಜರ ಚಾತುರ್ಮಾಸ ಮಂಗಳ ಕಳಶ ಸ್ಥಾಪನೆ



ಮೈಸೂರಿನ ವರ್ಧಮಾನಯ್ಯ ಸಭಾ ಭವನದಲ್ಲಿ 108ನೇ ಆಚಾರ್ಯ ಶ್ರೀ ಪುಣ್ಯಸಾಗರ ಮುನಿಮಹಾರಾಜರ ಚಾತುರ್ಮಾಸ ಮಂಗಳ ಕಳಶ ಸ್ಥಾಪನಾ ಸಮಾರಂಭ ನೆರವೇರಿತು.

ಮೈಸೂರು, ಜು.20(ಎಂಕೆ)– ಮೈಸೂರಿನ ವರ್ಧಮಾನಯ್ಯ ಸಭಾ ಭವನದಲ್ಲಿ 108ನೇ ಆಚಾರ್ಯ ಶ್ರೀ ಪುಣ್ಯಸಾಗರ ಮುನಿಮಹಾರಾಜರ ಚಾತುರ್ಮಾಸ ಮಂಗಳ ಕಳಶ ಸ್ಥಾಪನಾ ಸಮಾರಂಭ ಭಾನುವಾರ ಅಪಾರ ಭಕ್ತ ಸಮೂಹದ ನಡುವೆ ನೆರವೇರಿತು.

ಬಳಿಕ ಭಕ್ತರನ್ನುದ್ದೇಶಿಸಿ ಮಾತನಾಡಿದ ಶ್ರೀ ಪುಣ್ಯಸಾಗರ ಮುನಿಮಹಾರಾಜರು, ದೇಶದ ಪ್ರತಿಯೊಬ್ಬರು ಧಾರ್ಮಿಕವಾಗಿ ಒಗ್ಗೂಡಬೇಕು. ಶಾಂತಿ, ಸಹಬಾಳ್ವೆ ಮೈಗೂಡಿಸಿಕೊಂಡು ಸಮಾಜಕ್ಕೆ ತಮ್ಮದೆ ಕೊಡುಗೆ ನೀಡುವ ಮೂಲಕ ಇತರರಿಗೆ ಮಾದರಿಯಾಗುವಂತೆ ತಿಳಿಸಿದರು.

ಇದಕ್ಕೂ ಮುನ್ನ ಆರತಿಪುರ ಜೈನ ಮಠದ ಶ್ರೀ ಸಿದ್ಧಾಂತ ಕೀರ್ತಿ ಭಟ್ಟಾರಕ ಸ್ವಾಮೀಜಿ, ಶ್ರೀ ಕ್ಷೇತ್ರ ಸೋಂದ ಜೈನ ಮಠದ ಭಟ್ಟಾಕಲಂಕ ಭಟ್ಟಾರಕ ಸ್ವಾಮೀಜಿ, ಕಂಬದಹಳ್ಳಿ ಜೈನಮಠದ ಶ್ರೀ ಭಾನು ಕೀರ್ತಿ ಭಟ್ಟಾರಕ ಸ್ವಾಮೀಜಿ, ಶ್ರೀಕ್ಷೇತ್ರ ಕನಕಗಿರಿ ಜೈನಮಠದ ಶ್ರೀ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ ನೆರೆದಿದ್ದ ಭಕ್ತರಿಗೆ ಆಶೀರ್ವಚನ ನೀಡಿದರು. ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಕೋಟೆ ಶಾಂತನಾಥ ಬಸದಿಯಿಂದ ಕೆಆರ್ ವೃತ್ತ ಮಾರ್ಗವಾಗಿ ಎಂಎಲ್ ಜೈನ್ ಬೋರ್ಡಿಂಗ್ ಹೋಂ ಭವನದವರೆಗೆ ಭವ್ಯ ಮೆರವಣಿಗೆ ನಡೆಯಿತು. ದಿಗಂಬರ ಜೈನ ಸಮಾಜ ಮೈಸೂರು ಅಧ್ಯಕ್ಷ ಸುನೀಲ್ ಕುಮಾರ್ ಜೈನ್, ಯಳವಟ್ಟಿ ದಿಗಂಬರ ಜೈನ ಬಸದಿ ಪುರೋಹಿತರಾದ ಮಂದಿರ ಕುಮಾರ್, ದಿಗಂಬರ ಜೈನ ಸಮಾಜದ ಕಾರ್ಯದರ್ಶಿ ಲಕ್ಷ್ಮೀಶ್ ಬಾಬು, ಮಹಾವೀರ್ ಗೋಗಿ ಮತ್ತಿತರರಿದ್ದರು.

ಆ.2ರಿಂದ 19ನೇ ಸುಗಮ ಸಂಗೀತ ಸಮ್ಮೇಳನ

ನಗರ ಶ್ರೀನಿವಾಸ ಉಡುಪ ಸಮ್ಮೇಳನಾಧ್ಯಕ್ಷರಾಗಿ ನೇಮಕ

ಮೈಸೂರು, ಜು.20(ಜಿಎ)–ಕರ್ನಾಟಕ ಸುಗಮ ಸಂಗೀತ ಪರಿಷತ್ ವತಿಯಿಂದ ಆ.2 ಮತ್ತು 3ರಂದು ಮೈಸೂರಿನ ಕಲಾಮಂದಿರದಲ್ಲಿ 19ನೇ ಸುಗಮ ಸಂಗೀತ ಸಮ್ಮೇಳನವನ್ನು ಆಯೋಜಿಸಲಾಗಿದೆ ಎಂದು ಅತಿಥೇಯ ಸಮಿತಿ ಅಧ್ಯಕ್ಷ ನಾಗರಾಜ್ ವಿ.ಬೈರಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮ್ಮೇಳನಾಧ್ಯಕ್ಷರನ್ನಾಗಿ ನಗರ ಶ್ರೀನಿವಾಸ್ ಉಡುಪ ಅವರನ್ನು ಆಯ್ಕೆ ಮಾಡಲಾಗಿದೆ. ಆಗಸ್ಟ್ 2ರಂದು ಬೆಳಗ್ಗೆ 9.30ಕ್ಕೆ ಓವಲ್ ಮೈದಾನದಿಂದ ಸಮ್ಮೇಳನಾಧ್ಯಕ್ಷರು ಹಾಗೂ ಸಾಹಿತಿಗಳನ್ನು ಬೆಳ್ಳಿ ತೇರಿನ ಮೂಲಕ ಕಲಾಮಂದಿರಕ್ಕೆ ವಿವಿಧ ಕಲಾ ತಂಡಗಳೊಡನೆ ಕಾವ್ಯ ದಿಬ್ಬಣ ಹೊರಡಲಿದ್ದು, ಗಂಗೂಬಾಯಿ ಹಾನಗಲ್ ಸಂಗೀತ ವಿವಿಯ ಕುಲಪತಿ ನಾಗೇಶ್ ಬೆಟ್ಟಕೋಟೆ ಚಾಲನೆ ನೀಡಲಿದ್ದಾರೆ ಎಂದರು.

ನಂತರ ಕಲಾಮಂದಿರದಲ್ಲಿ ಮೈಸೂರು ಜಿಲ್ಲಾಧಿಕಾರಿ ಡಾ.ಜಿ.ಲಕ್ಷ್ಮೀಕಾಂತ ರೆಡ್ಡಿ ಗಣ್ಯರನ್ನು ಸ್ವಾಗತಿಸಲಿದ್ದಾರೆ. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ಕನ್ನಡ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ವೈ.ಕೆ.ಮುದ್ದುಕೃಷ್ಣ ವಹಿಸಲಿದ್ದಾರೆ. ತದನಂತರ ಸಮ್ಮೇಳನಾಧ್ಯಕ್ಷರಾದ ನಗರ ಶ್ರೀನಿವಾಸ್ ಉಡುಪ ಅಧಿಕಾರ ಸ್ವೀಕರಿಸಲಿದ್ದಾರೆ.

ಈ ವೇಳೆ ನಿಕಟಪೂರ್ವ ಅಧ್ಯಕ್ಷ ಎಸ್.ಎಸ್.ಪ್ರಸಾದ್ ಧ್ವಜ ಹಸ್ತಾಂತರ ಮಾಡಲಿದ್ದಾರೆ. ಡಾ.ಕಿಕ್ಕೇರಿ ಕೃಷ್ಣಮೂರ್ತಿ ಆಶಯ ನುಡಿ ಆಡಲಿದ್ದಾರೆ. ನಂತರ ಹಿರಿಯ ಕವಿ ಡಾ.ಸಿದ್ದಲಿಂಗಪಟ್ಟಣ ಶೆಟ್ಟಿ 'ಗೀತ ಸಂಗಮ' ಬಿಡುಗಡೆಗೊಳಿಸಲಿದ್ದಾರೆ ಎಂದು ತಿಳಿಸಿದರು.

ಸಮ್ಮೇಳನದಲ್ಲಿ ಕಾವ್ಯಶ್ರೀ ಪ್ರಶಸ್ತಿಯನ್ನು ಬಿ.ಆರ್.ಲಕ್ಷ್ಮಣ್ ರಾವ್, ಡಾ.ನಾ.ದಾಮೋದರ ಶೆಟ್ಟಿ ಅವರಿಗೆ ಮತ್ತು ಕೆ.ಎಸ್.ಸುರೇಖಾ, ರತ್ನಮಾಲಾ ಪ್ರಕಾಶ್ ಅವರಿಗೆ ಭಾವಶ್ರೀ ಪ್ರಶಸ್ತಿಯನ್ನು ನಿವೃತ್ತ ನ್ಯಾಯಾಧೀಶರಾದ ವಿ.ಗೋಪಾಲಗೌಡ ಅವರು ಪ್ರದಾನ ಮಾಡಲಿದ್ದಾರೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ.ಚಂದ್ರಶೇಖರ್ ಕಂಬಾರ ಅವರು ಸಮ್ಮೇಳನಾಧ್ಯಕ್ಷರನ್ನು ಸನ್ಮಾನಿಸಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಜಿ.ಡಿ.ಹರೀಶ್‌ಗೌಡ, ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಸಿ.ಎನ್.ಮಂಜೇಗೌಡ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮತ್ತಿತರರು ಆಗಮಿಸಲಿದ್ದಾರೆ.

ಆ.3ರಂದು ಸಂಜೆ 5.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಹಿರಿಯ ಸಾಹಿತಿ ನಾಡೋಜ ಡಾ.ಹಂಪನಾಗರಾಜಯ್ಯ ಸಮಾರೋಪ ಭಾಷಣ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್ ಆಗಮಿಸಲಿದ್ದಾರೆ. ಅಧ್ಯಕ್ಷತೆಯನ್ನು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಸಿ.ಸೋಮಶೇಖರ್ ವಹಿಸಲಿದ್ದಾರೆ. ಎರಡು ದಿನವೂ ವಿಶೇಷ ಕಾರ್ಯಕ್ರಮಗಳು ಬೆಳಗ್ಗೆ 10ಗಂಟೆಯಿಂದ ರಾತ್ರಿ 9.30ರವರೆಗೆ ನಡೆಯಲಿವೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ರಘುರಾಂ ವಾಜಪೇಯಿ, ಬಾಲಕೃಷ್ಣರಾಜು ಉಪಸ್ಥಿತರಿದ್ದರು.



16ನೇ ವರ್ಷದ ಚಿರಸ್ಮರಣೆ

ಸಿ.ಎಸ್. ಸುಬ್ಬಣ್ಣ
(ನಿವೃತ್ತ ಹಿರಿಯ ಸಹಾಯಕರು ಕೆ.ಇ.ಬಿ)
ಜನನ: 25-11-1927
ಶಿವೈಕ್ಯ: 21-07-2009

ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರಿ ಸದಾ ನಿಮ್ಮನ್ನು ಸ್ಮರಿಸುತ್ತಿರುವ
ದುಃಖತಪ್ತರು: ಮಕ್ಕಳು ಮತ್ತು ಕುಟುಂಬ ವರ್ಗದವರು
ಜೈನರಬೀದಿ, ಚಾಮರಾಜನಗರ

17ನೇ ವರ್ಷದ ಸವಿನೆನಪು



ನಿಮ್ಮ ಪವಿತ್ರವಾದ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
ನಿಮ್ಮ ಮಾರ್ಗದರ್ಶನದಲ್ಲೇ ನಡೆಯುತ್ತಿರುವ :
ರಾಜಮ್ಮ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಸಂಬಂಧಿಕರು, ಜಗದಾಂಬ ಸರ್ವಿಸ್ ಸ್ಟೇಷನ್, ಮೈಸೂರು ಹಾಗೂ ಸೋಮೇಶ್ವರಪುರದ ಗ್ರಾಮಸ್ಥರು

ಶಿವಬಸಪ್ಪ

ಸಾರ್ವಜನಿಕ ತಿಳುವಳಿಕೆ

ನಮ್ಮ ಕಕ್ಷಿದಾರರುಗಳಾದ ಮೈಸೂರು ನಗರ, ರಾಘವೇಂದ್ರನಗರ, ತುಂಗ ರಸ್ತೆ, 3ನೇ ಕ್ರಾಸ್, ಮನೆ ನಂ. 17 ರಲ್ಲಿ ವಾಸವಾಗಿರುವ ಲೇಟ್ ವೆಂಕಟರಮಣಚಾರಿ ರವರ ಮಗ ಶ್ರೀ ಕೆ. ತಿರುಮಲಚಾರಿ ಮತ್ತು ಪಾರ್ವತಿ ಅಚಾರಿ ಕೋಂ ತಿರುಮಲಚಾರಿ ಇವರುಗಳು ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತನ್ನು ಅದರ ಮಾಲೀಕರಾದ ಮೈಸೂರು ನಗರ, ನಜರ್‌ಬಾದ್ ಮೊಹಲ್ಲಾ, ರಾಘವೇಂದ್ರನಗರ, ತುಂಗ ರಸ್ತೆ, ಮನೆ ನಂ. 14 ರಲ್ಲಿ ವಾಸವಾಗಿರುವ ಲೇಟ್ ಎನ್.ಎಸ್.ರಾಜು ರವರ ಮಗ ಶ್ರೀ ಎನ್.ವಿ.ಎಸ್. ರಾಜು ಇವರಿಂದ ಖರೀದಿಸಲು ಇಚ್ಛಿಸಿ ಕ್ರಯದ ಕರಾರು ಪತ್ರವನ್ನು ಮಾಡಿಕೊಂಡಿರುತ್ತಾರೆ. ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ವ್ಯಕ್ತಿಯ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ ಹೊಂದಿದ್ದಲ್ಲಿ ಅಥವಾ ಕ್ರಯದ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಯಾರಿಗಾದರೂ ಯಾವುದೇ ರೀತಿಯ ತಕರಾರು ಇದ್ದಲ್ಲಿ ಸೂಕ್ತ ದಾಖಲೆಗಳೊಡನೆ ಈ ತಿಳುವಳಿಕೆಯು ಪ್ರಕಟಗೊಂಡ 15 ದಿನಗಳ ಒಳಗೆ ನಮ್ಮ ಕಛೇರಿಯಲ್ಲಿ ಸಲ್ಲಿಸತಕ್ಕದ್ದು ಅಥವಾ ನಮ್ಮ ಕಕ್ಷಿದಾರರಿಗೆ ಲಿಖಿತ ರೂಪದಲ್ಲಿ ಸಲ್ಲಿಸತಕ್ಕದ್ದು, ಆನಂತರ ಬಂದಂತಹ ಯಾವುದೇ ತಕರಾರುಗಳನ್ನು ಪರಿಗಣಿಸುವುದಿಲ್ಲ.

ಷೆಡ್ಯೂಲ್

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಹಾರೋಹಳ್ಳಿ ಗ್ರಾಮಕ್ಕೆ ಸೇರಿದ ಹಳೇ ಸರ್ವೆ ನಂ.757/3 ಹೊಸ ಸರ್ವೆ ನಂ. 63/5 ರಲ್ಲಿ 1-05.00 ಗುಂಟೆ ಖುಷ್ಕಿ ಜಮೀನಿಗೆ ಚೆಕ್ಕುಬಂದಿ:
ಪೂರ್ವಕ್ಕೆ : ಶಿವಯ್ಯ ರವರ ಜಮೀನು
ಪಶ್ಚಿಮಕ್ಕೆ : ಅಂಕಣ್ಣ ರವರ ಜಮೀನು
ಉತ್ತರಕ್ಕೆ : ಖಾಸಗಿ ರವರ ಜಮೀನು
ದಕ್ಷಿಣಕ್ಕೆ : ರಸ್ತೆ.

ಸಹಿ/– ಬಿ.ಎಸ್. ಪಾಂಡು ಪೂಜಾರಿ, ವಕೀಲರು
#2858/1, 2ನೇ ಮಹಡಿ, 2ನೇ ಮೇನ್, ಜಯನಗರ, ಮೈಸೂರು–14
Mob: 9449793752

ಹಸಿರು ನಮ್ಮ ಉಸಿರು

॥ ಶ್ರೀ ಗುರುಬಸವಲಿಂಗಾಯ ನಮಃ ॥


ಶಿವಗಣಾರಾಧನಾ ಆಹ್ವಾನ ಪತ್ರಿಕೆ



ಶ್ರೀಮತಿ ಕೆ.ಪಿ ಸುಕಂದಮ್ಮ ನವರು

ದಿನಾಂಕ 10–07–2025ನೇ ಗುರುವಾರದಂದು ಲಿಂಗೈಕ್ಯರಾಗಿದ್ದು
ತತ್ಸಂಬಂಧವಾಗಿ ದಿನಾಂಕ 21–07–2025ನೇ ಸೋಮವಾರ ಬೆಳಿಗ್ಗೆ 10.00 ಗಂಟೆಗೆ
ಶ್ರೀ ಸುಕ್ಷೇತ್ರ ಮಲ್ಲನಮೂಲೆ ಮಠಾಧ್ಯಕ್ಷರಾದ
ಶ್ರೀ. ನಿ. ಪ್ರ. ಸ್ವ. ಶ್ರೀ ಚನ್ನಬಸವಮಹಾಸ್ವಾಮಿಗಳು
ಇವರ ದಿವ್ಯ ಪಾದಪೂಜೆಯನ್ನು ಹಾಗೂ
ಮಧ್ಯಾಹ್ನ 12.00 ಗಂಟೆಗೆ ಹರಗುರು ಚರಮೂರ್ತಿಗಳ ಸಮ್ಮುಖದಲ್ಲಿ
ಲಿಂಗೈಕ್ಯರ ಶಿವಗಣಾರಾಧನೆಯನ್ನು
ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲ್ಲೂಕು, ಬಂಡಿಬೀದಿ, ಮೂಗೂರು ಗ್ರಾಮ
ಇಲ್ಲಿರುವ ನಮ್ಮ ಮನೆಯಲ್ಲಿ ಏರ್ಪಡಿಸಿರುತ್ತೇವೆ
ಆದ್ದರಿಂದ ಆಹ್ವಾನ ಪತ್ರಿಕೆ ತಲುಪದವರು ದಯವಿಟ್ಟು ತಪ್ಪಾಗಿ ತಿಳಿಯದೆ
ಇದನ್ನೇ ನಮ್ಮ ಆಹ್ವಾನವೆಂದು ತಿಳಿದು ನಮ್ಮ ಮನೆಗೆ ಸಕಾಲಕ್ಕೆ ಆಗಮಿಸಿ
ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ
ಇಂತಿ ದುಃಖತಪ್ತರು
ಮೃತರ ಪತಿ – ಶ್ರೀ ಎಂ.ಎಸ್. ಬಸವಣ್ಣ
ಮೃತರ ಮಕ್ಕಳು : ಎಂ.ಬಿ. ಬಾಬು, ಎಂ.ಬಿ. ಮಹೇಂದ್ರಕುಮಾರ್ (ಬಾನು)
ಹಾಗೂ ಕುಟುಂಬವರ್ಗದವರು

ಭಾವಪೂರ್ಣ ಶ್ರದ್ಧಾಂಜಲಿ



ಎನ್. ಸದಾಶಿವ
(ನಿವೃತ್ತರು, ಇಂಡಿಯನ್ ರೈಲ್ವೇಸ್)
12.04.1936 - 19.07.2025

ನಿಮ್ಮನ್ನು ಎಲ್ಲಾ ಪದಗಳಿಗೂ ಮೀರಿ ಪ್ರೀತಿಸುತ್ತೇವೆ ಮತ್ತು ನಿಮ್ಮನ್ನು ಅಗಾಧವಾಗಿ ಕಳೆದುಕೊಂಡಿದ್ದೇವೆ. ನಿಮ್ಮ ಮೌಲ್ಯಗಳು ಮತ್ತು ಶಿಸ್ತು ಹೊಳೆವ ನಕ್ಷತ್ರದಂತೆ ಸದಾ ನಮಗೆ ಮಾರ್ಗದರ್ಶಕವಾಗಿರುತ್ತವೆ.

ದುಃಖತಪ್ತರು : ನಿಮ್ಮ ಕುಟುಂಬವರ್ಗ ಹಾಗೂ ಸ್ನೇಹ ಬಳಗ

15ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಇಂದಿರಾ.ಕೆ
ನೀವು ನಮ್ಮನ್ನಗಲಿ ಇಂದಿಗೆ 15 ವರ್ಷಗಳು ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ಪತಿ: ನಾಗರಾಜ್
ಮಕ್ಕಳು: ಅಮೃತವರ್ಷಿಣಿ, ವರಮಹಾಲಕ್ಷ್ಮಿ ಮತ್ತು ಕುಟುಂಬವರ್ಗದವರು, ಮೈಸೂರು



ಮೊದಲನೇ ವರ್ಷದ ಸವಿನೆನಪು

ಸಚ್ಚಿನ್ .ಎಂ
ಬೆಳಗೊಳ
ನಿಧನ: 21-07-2024

ಸದಾ ನಿನ್ನ ನೆನಪಿನಲ್ಲಿರುವ
ತಂದೆ : ಮಂಜು
ತಾಯಿ: ಲಕ್ಷ್ಮಿ, ಅಕ್ಕಂದಿರು, ಬಾವಂದಿರು, ಸ್ನೇಹಿತರು
ಮತ್ತೆ ಹುಟ್ಟಿ ಬಾ

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು
ಜೆ ಎಲ್ ಬಿ ರಸ್ತೆ, ಮೈಸೂರು

ಸಂಖ್ಯೆ: ಮೈಅಪ್ರಾ/ವಿ.ತ–2/ಪಿ.ಆರ್–74/2025–26 ದಿನಾಂಕ: 18–07–2025

"ಪತ್ರಿಕಾ ಪ್ರಕಟಣೆ"

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ನಗರಾಭಿವೃದ್ಧಿ ವಿಶ್ವಾಸ್ಥ ಮಂಡಳಿಯಿಂದ **ಸರಸ್ವತಿಪುರಂ ಟಿ ಕೊಪ್ಪಲು ಬಡಾವಣೆಯಲ್ಲಿನ ಅಳತೆ 40x60 ಅಡಿ, ನಿವೇಶನ ಸಂಖ್ಯೆ–546** ನಿವೇಶನವು **ಶ್ರೀಮತಿ ಕಮಲಮ್ಮ ಕೋಂ ಶ್ರೀ ಬಿ ಪುಟ್ಟಸ್ವಾಮಿ** ರವರಿಗೆ **ದಿನಾಂಕ: 13–07–1970** ರಂದು ಮಂಜೂರಾಗಿದ್ದು, ಇವರು **ದಿನಾಂಕ: 25–01–1977** ರಂದು ಹಾಗೂ ಇವರ ಪತಿ ಶ್ರೀ ಬಿ ಪುಟ್ಟಸ್ವಾಮಿ ರವರು ದಿನಾಂಕ: 18–09–1984 ರಂದು ಮೃತರಾಗಿದ್ದು, ಇವರ ಮಗನಾದ ಶ್ರೀ ಶಶಿದರ್ ಪಿ. ರವರು ಚಲನ್ ಸಂಖ್ಯೆ: 10739 ದಿನಾಂಕ: 25–09–1990 ರಂದು ರೂ. 200/– ಗಳನ್ನು ಪಾವತಿಸಿ ಉತ್ತರ ಪತ್ರದ ಮೂಲಕ ದಿನಾಂಕ: 26–09–1990 ರಂದು ಸದರಿ ನಿವೇಶನವನ್ನು ವರ್ಗಾಹಿಸಿ ಕೊಂಡಿರುತ್ತಾರೆ ಮತ್ತು ದಿನಾಂಕ: 09–10–1990 ರಂದು ಜಿ.ಪಿ.ಎ. ನೋಂದಾಯಿಸಿ ಕೊಂಡಿರುತ್ತಾರೆ ತದನಂತರ ದಿನಾಂಕ: 15–12–1990 ರಂದು ಸ್ವಾಧೀನ ಪತ್ರ ಪಡೆದಿರುತ್ತಾರೆ.

ತದನಂತರ ಶ್ರೀ ಪಿ ಶಶಿದರ್ ರವರು ದಿನಾಂಕ: 23–01–1991 ರಂದು 1ನೇ ಪುಸ್ತಕದ 4183ನೇ ಸಂಪುಟದಲ್ಲಿ 93–99ನೇ ಪುಟದಲ್ಲಿ 4121ನೇ ನಂಬರಾಗಿ **ಶ್ರೀ ಎಸ್ ನಾಗರಾಜು** ರವರಿಗೆ ಶುದ್ಧಕ್ರಯಕ್ಕೆ ನೋಂದಾಯಿಸಿರುತ್ತಾರೆ ಕ್ರಯದಂತೆ ಚಲನ್ ಸಂಖ್ಯೆ: 44927, ದಿನಾಂಕ: 28–02–2011 ರಂದು ರೂ. 27,000/–ಗಳ ದಂಡ ಶುಲ್ಕ ಪಾವತಿಸಿ ದಿನಾಂಕ: 07–09–2011 ರಂದು ಸದರಿ ನಿವೇಶನವನ್ನು ವರ್ಗಾಹಿಸಿ ಕೊಂಡಿರುತ್ತಾರೆ. ತದನಂತರ ಶ್ರೀ ನಾಗರಾಜು. ಎಸ್ ರವರು ದಿನಾಂಕ: 08–01–2018 ರಂದು ಮೃತರಾಗಿದ್ದು, ದಿನಾಂಕ: 09–04–2018ರ ಮೃತರ ಕುಟುಂಬ ಜೀವಂತ ಸದಸ್ಯರ ದೃಢೀಕರಣ ಪತ್ರದಂತೆ ಇವರ ಪತ್ನಿ ಶ್ರೀಮತಿ ದೀಪಿಕ ಕುಮಾರಿ ರವರಿದ್ದು, ಇವರು ಸದರಿ ನಿವೇಶನದ ಖಾತೆಯನ್ನು ಮೈಸೂರು ಮಹಾನಗರ ಪಾಲಿಕೆಯಲ್ಲಿ ನೋಂದಾಯಿಸಿಕೊಂಡು, ಸದರಿ ನಿವೇಶನವನ್ನು ಪೌತಿ ರೀತ್ಯಾ ವರ್ಗಾವಣೆ ಕೋರಿರುತ್ತಾರೆ.

ಆದುದರಿಂದ ಸದರಿ ನಿವೇಶನವನ್ನು ಪೌತಿ ವರ್ಗಾವಣೆ ಕೋರಿ ಶ್ರೀಮತಿ ದೀಪಿಕಾ ಕುಮಾರಿ ಕೋಂ ಮೇಜರ್ ಎಸ್ ನಾಗರಾಜ್ ರವರು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿದ್ದು, ಸದರಿಯವರ ಹೆಸರಿಗೆ **ಸರಸ್ವತಿಪುರಂ ಟಿ ಕೊಪ್ಪಲು ಬಡಾವಣೆಯಲ್ಲಿನ ಅಳತೆ 40x60 ಅಡಿ, ನಿವೇಶನ ಸಂಖ್ಯೆ–546** ನಿವೇಶನವನ್ನು ಪೌತಿ ವರ್ಗಾವಣೆ ಮಾಡಿ ಕ್ರಯಪತ್ರ ನೀಡುವ ವಿಚಾರದಲ್ಲಿ ಸಂಬಂಧಪಟ್ಟ ಯಾರಿಂದಾದರೂ ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 15ದಿವಸಗಳೊಳಗೆ ಲಿಖಿತವಾಗಿ **ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು** ರವರಿಗೆ ದೂರು ಸಲ್ಲಿಸುವುದು. ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಮುಂದಿನ ಕ್ರಮಕೈಗೊಳ್ಳಲಾಗುವುದು.

ವಿಶೇಷ ತಹಶೀಲ್ದಾರ್
ವಲಯ ಕಛೇರಿ–2
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು